# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶುಕ್ರವಾರ, ಜನವರಿ 06, 2023

ಸಂಪುಟ : 49 ಸಂಚಿಕೆ : 234 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com




# ಮಾರುಕಟ್ಟೆ ಸ್ವಚ್ಛತೆ ಕಾಪಾಡಿಕೊಳ್ಳಿ : ಭೈರತಿ

## ಕೆ.ಆರ್. ಮಾರುಕಟ್ಟೆಯಲ್ಲಿನ ನೂತನ ಮಳಿಗೆಗಳು ಪಾಲಿಕೆಗೆ ಹಸ್ತಾಂತರ

ದಾವಣಗೆರೆ, ಜ.5- ಸ್ಮಾರ್ಟ್ ಸಿಟಿ ಯೋಜನೆಯಡಿ ಸಾಕಷ್ಟು ಹಣ ಖರ್ಚು ಮಾಡಿ ನಿಮಗಾಗಿ ಮಳಿಗೆಗಳನ್ನು ನಿರ್ಮಿಸಿ ಕೊಡಲಾಗಿದೆ. ವ್ಯಾಪಾರ ಮಾಡುವ ಜೊತೆಗೆ ಮಾರುಕಟ್ಟೆಯ ಸ್ವಚ್ಛತೆಯನ್ನೂ ಕಾಪಾಡಿಕೊಳ್ಳಿ ಎಂದು ವ್ಯಾಪಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ಹೇಳಿದರು.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವತಿಯಿಂದ ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 25.50 ಕೋಟಿ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಕಟ್ಟಡದಲ್ಲಿರುವ ಮಳಿಗೆಗಳನ್ನು ಎಪಿಎಂಸಿಯಿಂದ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿ ಅವರು ಮಾತನಾಡಿದರು.

ಸಂಸದ ಸಿದ್ದೇಶ್ವರ ಹಾಗೂ ಶಾಸಕ ರವಿಂದ್ರನಾಥ್ ಅವರು ಇಲ್ಲಿನ ವ್ಯಾಪಾರಿಗಳ ಕಷ್ಟವನ್ನು ನನ್ನ ಗಮನಕ್ಕೆ ತಂದಿದ್ದರು. ರಸ್ತೆ ಬದಿಯಲ್ಲಿಯೇ ವ್ಯಾಪಾರ ಮಾಡುವವರಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿ ಕೊಡಬೇಕೆಂದು ತಿಳಿಸಿದ್ದರು. ಅವರ (2ನೇ ಪುಟಕ್ಕೆ)

### 25.50 ಕೋಟಿ ರೂ. ವೆಚ್ಚದ ಸುಸಜ್ಜಿತ ಕಟ್ಟಡ
### 254 ಮಳಿಗೆ, ಮೇಲ್ಗಡೆ ಪಾರ್ಕಿಂಗ್, ಲಿಫ್ಟ್ ಸೌಲಭ್ಯ

ದಾವಣಗೆರೆ ಕೆ.ಆರ್. ಮಾರುಕಟ್ಟೆಯಲ್ಲಿ 2554.32 ಲಕ್ಷ ರೂ. ವೆಚ್ಚದಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಪ್ರಿಕ್ಯಾಸ್ಟಿಂಗ್ ಕಟ್ಟಡ ನಿರ್ಮಾಣ ಮಾಡಲಾಗಿದೆ.

ಈ ಕಟ್ಟಡವು ನೆಲ ಮಹಡಿಯಲ್ಲಿ 10x10 ಅಡಿ ಅಳತೆಯುಳ್ಳ 138 ಮಳಿಗೆಗಳು, ಮೊದಲನೇ ಮಹಡಿಯಲ್ಲಿ 10x10 ಅಡಿ ಅಳತೆಯ 116 ಮಳಿಗೆಗಳು ಸೇರಿ ಒಟ್ಟು 254 ಮಳಿಗೆಗಳನ್ನು ಹೊಂದಿದೆ.

ಎರಡನೇ ಮಹಡಿಯಲ್ಲಿ 50 ಲಘು ವಾಹನಗಳು ಹಾಗೂ 200 ದ್ವಿಚಕ್ರ ವಾಹನಗಳ ನಿಲುಗಡೆಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ.

ಮೇಲ್ಛಾವಣಿಯನ್ನು ಅಂಗ್ಯುಲರ್ ಟ್ರಸ್ ಹಾಗೂ ಗ್ಯಾಲ್ವಾನಿಯಂ ಶೀಟ್‌ಗಳಿಂದ ನಿರ್ಮಾಣ ಮಾಡಲಾಗಿದೆ. ಮುಚ್ಚು ಹರಾಜು ಕಟ್ಟೆಯಲ್ಲಿ ನೆಲ ಮಹಡಿಯಲ್ಲಿ 2 ಕಡೆ ಹಾಗೂ ಮೊದಲ ಮಹಡಿಯಲ್ಲಿ 2 ಕಡೆ ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಶೌಚಾಲಯ ಕಲ್ಪಿಸಲಾಗಿದೆ.

ವಿದ್ಯುತ್ ಸೌಲಭ್ಯ ಹಾಗೂ 2 ಲಿಫ್ಟ್‌ಗಳನ್ನೂ ಅಳವಡಿಸಿದ್ದು, ಮುಂದೆ ಎಲಿವೇಟರ್ ಅಳವಡಿಸಲು ಸ್ಥಳಾವಕಾಶ ಕಲ್ಪಿಸಲಾಗಿದೆ. ಗುರುವಾರ ಇಲ್ಲಿನ ಮಳಿಗೆಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಎಪಿಎಂಸಿಯಿಂದ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿದರು.

# ವಿದೇಶಿ ವಿ.ವಿ.ಗಳು ಭಾರತದಲ್ಲಿ ಕ್ಯಾಂಪಸ್ ತೆರೆಯಲು ಅನುಮತಿ

ನವದೆಹಲಿ ಜ. 5 – ಭಾರತದಲ್ಲಿ ವಿದೇಶಿ ವಿಶ್ವವಿದ್ಯಾಲಯಗಳು ತಮ್ಮ ಕ್ಯಾಂಪಸ್ ತೆರೆಯಲು ಇದೇ ಮೊದಲ ಬಾರಿಗೆ ಅನುಮತಿ ನೀಡಲಾಗಿದೆ. ಕ್ಯಾಂಪಸ್ ತೆರೆಯುವ ಸಂಬಂಧ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಮಾರ್ಗಸೂಚಿಗಳನ್ನು ಪ್ರಕಟಿಸಿದೆ.

ಈ ಕ್ಯಾಂಪಸ್‌ಗಳ ಪ್ರವೇಶ ಪ್ರಕ್ರಿಯೆ, ಶುಲ್ಕ ಹಾಗೂ ಹೂಡಿಕೆಯನ್ನು ವಾಪಸ್ ಪಡೆಯುವ ಬಗ್ಗೆ ವಿಶ್ವವಿದ್ಯಾಲಯಗಳೇ ನಿರ್ಧಾರ ತೆಗೆದುಕೊಳ್ಳಬಹುದಾಗಿದೆ.

ವಿದೇಶಿ ವಿಶ್ವವಿದ್ಯಾಲಯಗಳು ಕ್ಯಾಂಪಸ್ ತೆರೆಯುವಾಗ ಪೂರ್ಣಕಾಲಿಕ ನೇರ ಶಿಕ್ಷಣವನ್ನಷ್ಟೇ ನೀಡಬೇಕು. ಆನ್‌ಲೈನ್ ಇಲ್ಲವೇ ದೂರದ ಶಿಕ್ಷಣಕ್ಕೆ ಅವಕಾಶ ಇಲ್ಲ ಎಂದು ಯು.ಜಿ.ಸಿ. ಅಧ್ಯಕ್ಷ ಎಂ. ಜಗದೀಶ್ ಕುಮಾರ್ ತಿಳಿಸಿದ್ದಾರೆ.

### ಮೊದಲ ಬಾರಿ ವಿದೇಶಿ ವಿ.ವಿ.ಗಳಿಗೆ ಬಾಗಿಲು ತೆರೆದ ಭಾರತ

ಕ್ಯಾಂಪಸ್ ಆರಂಭಿಸಲು ವಿಶ್ವವಿದ್ಯಾಲಯಗಳು ಯು.ಜಿ.ಸಿ. ಅನುಮತಿ ಪಡೆಯಬೇಕಿದೆ. ಆರಂಭಿಕ ಹಂತದಲ್ಲಿ 10 ವರ್ಷಗಳಿಗೆ ಅನುಮತಿ ನೀಡಲಾಗುವುದು. ಅನುಮತಿಯನ್ನು ಒಂಭತ್ತನೇ ವರ್ಷದಲ್ಲಿ ನವೀಕರಿಸಲಾಗುವುದು. ವಿಶ್ವವಿದ್ಯಾಲಯಗಳು ಪ್ರವೇಶ ಹಾಗೂ ಶುಲ್ಕ ನಿಗದಿಯಲ್ಲಿ ಸ್ವಾತಂತ್ರ್ಯ ಹೊಂದಿವೆ. ಆದರೆ, ಈ ವಿಷಯಗಳು ಸಕಾರಣವಾಗಿರಬೇಕು ಹಾಗೂ ಪಾರದರ್ಶಕವಾಗಿರಬೇಕು ಎಂದು ತಿಳಿಸಲಾಗಿದೆ.

ವಿಶ್ವವಿದ್ಯಾಲಯಗಳು ತಾವೇ ಬೋಧಕರ ನೇಮಕದಲ್ಲಿ ಸ್ವಾಯತ್ತತೆ ಹೊಂದಿವೆ. ಆದರೆ, ಬೋಧಕರು ಭಾರತದ ಕ್ಯಾಂಪಸ್‌ನಲ್ಲಿ ಗಣನೀಯ ಸಮಯ ಕಳೆಯಬೇಕು. ಇಲ್ಲಿನ ಕಲಿಕೆಯ ಗುಣಮಟ್ಟ ಮುಖ್ಯವಾಗಿ ಕ್ಯಾಂಪಸ್‌ಗೆ ಅನುಗುಣವಾಗಿರಬೇಕು ಎಂದು ಕುಮಾರ್ ಹೇಳಿದರು.

ಕೇಂದ್ರ ಸರ್ಕಾರ ರೂಪಿಸಿದ್ದ ನೂತನ ಶಿಕ್ಷಣ ನೀತಿಯ ಅನ್ವಯ ವಿದೇಶಿ ವಿಶ್ವವಿದ್ಯಾಲಯಗಳು ಕ್ಯಾಂಪಸ್ ತೆರೆಯಲು (3ನೇ ಪುಟಕ್ಕೆ)

# ಜಿಲ್ಲೆಯಲ್ಲೀಗ 14 ಲಕ್ಷ ಮತದಾರರು

## ಸಂಕ್ಷಿಪ್ತ ಪರಿಷ್ಕರಣೆಯಲ್ಲಿ ಯುವ ಮತದಾರರೇ ಹೆಚ್ಚು ಸೇರ್ಪಡೆ

ದಾವಣಗೆರೆ, ಜ. 5- ಜಿಲ್ಲೆಯ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ಪೂರ್ಣಗೊಂಡಿದ್ದು, ಅಂತಿಮ ಪಟ್ಟಿಯಲ್ಲಿ ಮತದಾರರ ಸಂಖ್ಯೆ 17,276ರಷ್ಟು ಹೆಚ್ಚಾಗಿದೆ. ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 14.05 ಲಕ್ಷ ಮತದಾರರಿದ್ದಾರೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ.



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ವರ್ಷ ನವೆಂಬರ್ 9ರಂದು ಪ್ರಕಟಿಸಲಾದ ಕರಡು ಪಟ್ಟಿಯಲ್ಲಿ 13,88,434 ಮತದಾರರಿದ್ದರು. ಅಂತಿಮ ಪಟ್ಟಿಯಲ್ಲಿ 14,05,710 ಮತದಾರರಿದ್ದಾರೆ ಎಂದು ಹೇಳಿದರು.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 1,89,209, ಹರಿಹರದಲ್ಲಿ 2,02,813, ದಾವಣಗೆರೆ ಉತ್ತರದಲ್ಲಿ 2,32,014, ದಕ್ಷಿಣದಲ್ಲಿ 2,04,442, ಮಾಯಕೊಂಡದಲ್ಲಿ 1,87,676, ಚನ್ನಗಿರಿಯಲ್ಲಿ 1,95,797 ಹಾಗೂ ಹೊನ್ನಾಳಿಯಲ್ಲಿ 1,93,763 ಮತದಾರರಿದ್ದಾರೆ.

ಪುರುಷ ಮತದಾರರ ಸಂಖ್ಯೆ 7,05,23, ಮಹಿಳಾ ಮತದಾರರು 7,00,357 ಹಾಗೂ ಇತರರು 120. ಜಿಲ್ಲೆಯಲ್ಲಿ ಪ್ರತಿ (3ನೇ ಪುಟಕ್ಕೆ)

# ರಾಜ್ಯದಲ್ಲಿ 5.05 ಕೋಟಿ ಮತದಾರರು

ಬೆಂಗಳೂರು, ಜ. 5 - ಮುಂಬರುವ ವಿಧಾನಸಭಾ ಚುನಾವಣೆಗೆ ರಾಜ್ಯ ಚುನಾವಣಾ ಆಯೋಗವು ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಿದ್ದು, ಈ ಬಾರಿ ಪುರುಷರು, ಮಹಿಳೆಯರು ಹಾಗೂ ಇತರರು ಸೇರಿದಂತೆ ಒಟ್ಟು 5,05,48,553 ಜನ ಮತ ಚಲಾಯಿಸುವ ಹಕ್ಕು ಹೊಂದಿದ್ದಾರೆ.

ಇದರಲ್ಲಿ ಪುರುಷರು 2,54,49,775, ಮಹಿಳೆಯರು 2,50,94,326, ಇತರರು 4,502 ಸೇರಿದಂತೆ ಒಟ್ಟು 5,05,48,553 ಮಂದಿ ಮತದಾನದ ಹಕ್ಕು ಹೊಂದಿದ್ದಾರೆ ಎಂದು ರಾಜ್ಯ ಚುನಾವಣಾ ಮುಖ್ಯಾಧಿಕಾರಿ (3ನೇ ಪುಟಕ್ಕೆ)

# 2ಡಿ ಮೀಸಲಾತಿಗೆ ತಿರಸ್ಕಾರ

## ಮತ್ತೆ ಹೋರಾಟದ ನಿರ್ಧಾರ : ಜಯಮೃತ್ಯುಂಜಯ ಶ್ರೀ



ಬೆಂಗಳೂರು, ಜ.5 - ವೀರಶೈವ ಲಿಂಗಾಯತ ಸಮುದಾಯಕ್ಕೆ 2ಡಿ ಎಂಬ ಹೊಸ ವರ್ಗ ರೂಪಿಸಿ, ಮೀಸಲಾತಿ ಕಲ್ಪಿಸುವುದಾಗಿ ರಾಜ್ಯ ಬಿಜೆಪಿ ಸರ್ಕಾರ ತೆಗೆದುಕೊಂಡಿರುವ ನಿರ್ಧಾರವನ್ನು ತಿರಸ್ಕರಿಸಿರುವುದಾಗಿ ಕೂಡಲಸಂಗಮದ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ಸಮುದಾಯದ ಮುಖಂಡರ ಜೊತೆ ಸಭೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, 2ಎ ಮೀಸಲಾತಿ ಕಲ್ಪಿಸುವ ಬಗ್ಗೆ 24 ಗಂಟೆಗಳೊಳಗೆ ಮುಖ್ಯಮಂತ್ರಿ ಬೊಮ್ಮಾಯಿ ಸ್ಪಷ್ಟನೆ ನೀಡಬೇಕು. ಇಲ್ಲವಾದರೆ ಹೋರಾಟ ನಡೆಸ ಲಾಗುವುದು ಎಂದು ಹೇಳಿದರು.

ಬೊಮ್ಮಾಯಿ ಮಾತಿಗೆ ಗೌರವ ಕೊಟ್ಟು ಹೋರಾಟವನ್ನು ತಾತ್ಕಾಲಿಕ ಸ್ಥಗಿತ ಮಾಡಿದ್ದೆವು. ಜನವರಿ 12 ರೊಳಗೆ ಗೆಜೆಟ್ ಅಧಿಸೂಚನೆ ಹೊರಡಿಸಬೇಕು. ಇಲ್ಲ ವಾದರೆ, ಜ. 13 ರಂದು ಶಿಗ್ಗಾಂವಿ ಯಲ್ಲಿ 30 ಸಾವಿರ ಜನ ಸೇರಿಸಿ ಹೋರಾಟ ಮಾಡುತ್ತೇವೆ. ಈ ಜನ ಶಕ್ತಿಯೇ 2023ರ ಚುನಾವಣೆಯಲ್ಲಿ ಗಂಭೀರವಾದ ಪರಿಣಾಮ ಬೀರಲಿದೆ ಎಂದು ಹೇಳಿದರು. ಮೀಸಲಾತಿ ಕೊಡಲಾಗುವುದೋ ಇಲ್ಲವೋ ಅಂತ ಸ್ಪಷ್ಟಪಡಿಸಬೇಕು. 2ಎಗೆ ಸರಿ (2ನೇ ಪುಟಕ್ಕೆ)

# ಎಸ್ಸೆಸ್ಸೆಂಗೆ ನಿರೀಕ್ಷಣಾ ಜಾಮೀನು

### ಫಾರ್ಮ್ ಹೌಸ್‌ನಲ್ಲಿ ವನ್ಯ ಪ್ರಾಣಿಗಳ ಪತ್ತೆ ಪ್ರಕರಣ

ದಾವಣಗೆರೆ, ಜ.5- ಫಾರ್ಮ್ ಹೌಸ್‌ನಲ್ಲಿ ವನ್ಯ ಪ್ರಾಣಿಗಳ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಸೇರಿದಂತೆ ಮೂವರಿಗೆ ನಿರೀಕ್ಷಣಾ ಜಾಮೀನು ದೊರೆತಿದೆ.

ನಿರೀಕ್ಷಣಾ ಜಾಮೀನು ವಿಚಾರವಾಗಿ ದಾವಣಗೆರೆ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ತೀರ್ಪು ಇಂದು ಸಂಜೆ ಬಂದಿದೆ. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ರೈಸ್ ಮಿಲ್ ವ್ಯವಸ್ಥಾಪಕ ಸಂಪನ್ನ ಮುತಾಲಿಕ್ ಹಾಗೂ ಕರಿಬಸಯ್ಯಗೆ ಕೋರ್ಟ್ ಜಾಮೀನು ನೀಡಿದೆ.

ಕಳೆದ ಡಿಸೆಂಬರ್ 21 ರಂದು ನಗರದ ಆನೆಕೊಂಡದ ಬಳಿ ಇರುವ ಶ್ರೀ ಕಲ್ಲೇಶ್ವರ ರೈಸ್ ರೈಸ್ ಮಿಲ್‌ನ ಫಾರ್ಮಹೌಸ್ ಮೇಲೆ ಅರಣ್ಯ ಇಲಾಖೆ ಹಾಗೂ ಬೆಂಗಳೂರು ಸಿಸಿಬಿ ಪೊಲೀಸರ ದಾಳಿ ನಡೆದಿತ್ತು. ದಾಳಿ ವೇಳೆ ವನ್ಯ ಮೃಗಗಳು ಪತ್ತೆ ಹಿನ್ನೆಲೆ ಅರಣ್ಯ ಇಲಾಖೆಯಿಂದ ದೂರು (2ನೇ ಪುಟಕ್ಕೆ)

# ದಾವಣಗೆರೆ ಸೇರಿ ಆರು ತಾಣಗಳಲ್ಲಿ ಎನ್‌ಐಎ ಶೋಧ

ಬೆಂಗಳೂರು, ಜ. 5 – ಇಸ್ಲಾಮಿಕ್ ಸ್ಟೇಟ್ ಉಗ್ರವಾದಿ ಸಂಚು ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಣಗೆರೆ ಸೇರಿದಂತೆ ಆರು ಕಡೆ ಶೋಧ ನಡೆಸಿರುವ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ಇಬ್ಬರನ್ನು ಬಂಧಿಸಿದೆ.

ಉಡುಪಿಯ ಬ್ರಹ್ಮಾವರದ ವರಂಬಲ್ಲಿ ಎಂಬಲ್ಲಿಂದ ರೆಶಾನ್ ತಾಜುದ್ದೀನ್ ಶೇಖ್ ಹಾಗೂ ಶಿವಮೊಗ್ಗದ ಟಿಪ್ಪು ಸುಲ್ತಾನ್ ನಗರದಿಂದ ಹುಜೇರ್ ಫರ್ಹಾನ್ ಬೇಗ್ ಎಂಬುವವರನ್ನು ಬಂಧಿಸಲಾಗಿದೆ.

### ಇಸ್ಲಾಮಿಕ್ ಸ್ಟೇಟ್ ಸಂಚು ಪ್ರಕರಣ : ಇನ್ನಿಬ್ಬರ ಬಂಧನ

ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದಲ್ಲಿ ಸಿಲುಕಿರುವ ಮೊಹಮ್ಮದ್ ಶಾರೀಕ್‌ಗೂ, ಐಸಿಸ್ ಉಗ್ರವಾದಿ ಸಂಘಟನೆ ಪ್ರಕರಣಕ್ಕೂ ನಿಕಟ ಸಂಪರ್ಕವಿದೆ.

ದಕ್ಷಿಣ ಕನ್ನಡ, ಶಿವಮೊಗ್ಗ, ದಾವಣಗೆರೆ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಗುರುವಾರ ಎನ್.ಐ.ಎ. ಅಧಿಕಾರಿಗಳು ಶೋಧ ನಡೆಸಿದ್ದರು.

ನಿಷೇಧಿತ ಐ.ಎಸ್. ಉಗ್ರವಾದಿ ಸಂಘಟನೆಯ ಚಟುವಟಿಕೆಗಳಲ್ಲಿ ತೊಡಗಿಕೊಂಡು ಸಂಚು ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ದಾಳಿ ನಡೆಸಲಾಗಿತ್ತು.

ಈ ಹಿಂದೆ ಬಂಧಿತರಾದ ಮೊಹಮ್ಮದ್ ಶಾರೀಕ್ ಹಾಗೂ ಮಾಜ್ ಮುನೀರ್ ವಿಚಾರಣೆ ವೇಳೆ ದೊರೆತ ಸುಳಿವಿನ ಆಧಾರದ ಮೇಲೆ ದಾಳಿ ನಡೆಸಲಾಗಿದೆ.

ಮಾಜ್ ಮುನೀರ್ ತನ್ನ ನಿಕಟವರ್ತಿಗಳಾದ ರೆಶಾನ್ ತಾಜುದ್ದೀನ್ ಹಾಗೂ ಹುಜೇರ್ ಫರ್ಹಾನ್ ಬೇಗ್ ಇವರನ್ನು ತೀವ್ರವಾದಕ್ಕೆ ಸೆಳೆದಿದ್ದ ಎಂಬುದು ಎನ್.ಐ.ಎ.ಗೆ ಪತ್ತೆಯಾಗಿದೆ. ಉಭಯರು ಕ್ರಿಪ್ಟೋ ಮೂಲಕ ಐ.ಎಸ್. ಸಂಘಟನೆಗೆ ಸೇರಿದ ವ್ಯಕ್ತಿಯೋರ್ವನಿಂದ ಹಣ ಪಡೆದು ಉಗ್ರವಾದಿ ಚಟುವಟಿಕೆಯಲ್ಲಿ ತೊಡಗಿದ್ದರು ಎಂದು ಆರೋಪಿಸಲಾಗಿದೆ.

ತಮ್ಮ ದೊಡ್ಡ ಮಟ್ಟದ ಹಿಂಸಾಕೃತ್ಯ ಹಾಗೂ ವಿನಾಶಕಾರಿ ಯೋಜನೆಗಳ ಭಾಗವಾಗಿ, ಲಿಕ್ಕರ್ ಶಾಪ್‌ಗಳು, ಗೋದಾಮುಗಳು ಮತ್ತು ಟ್ರಾನ್ಸ್‌ಫಾರ್ಮರ್‌ಗಳಂತಹ ಕಟ್ಟಡಗಳು ಹಾಗೂ ವಾಹನಗಳನ್ನು ಗುರಿಯಾಗಿಸುವ ಮತ್ತು ಬೆಂಕಿ ಹಚ್ಚುವ ಕೆಲಸಗಳಲ್ಲಿ ಕೂಡ ಅವರು (2ನೇ ಪುಟಕ್ಕೆ)

# ಜನಾರ್ದನ ರೆಡ್ಡಿ ಆಸ್ತಿ ಮುಟ್ಟುಗೋಲಿಗೆ ಸಿಬಿಐ ಅರ್ಜಿ



ಬೆಂಗಳೂರು, ಜ. 5 - ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಮತ್ತವರ ಕುಟುಂಬಸ್ಥರಿಗೆ ಸೇರಿದ ಹೆಚ್ಚುವರಿ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕಾಗಿ 2022ರ ಆಗಸ್ಟ್‌ನಲ್ಲಿ ಸಲ್ಲಿಸಿರುವ ಮನವಿಯನ್ನು ಶೀಘ್ರದಲ್ಲಿ ಪರಿಗಣಿಸುವಂತೆ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ಹೈಕೋರ್ಟ್‌ಗೆ ಸಿ.ಬಿ.ಐ. ಅರ್ಜಿ ಸಲ್ಲಿಸಿದೆ. ರೆಡ್ಡಿ ಮತ್ತವರ ಕುಟುಂಬಸ್ಥರು ಆಂಧ್ರ ಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಅಕ್ರಮವಾಗಿ ಗಳಿಸಿರುವ ಆಸ್ತಿಗಳನ್ನು ಕ್ರಿಮಿನಲ್ ಕಾನೂನುಗಳ(ತಿದ್ದುಪಡಿ)ಸುಗ್ರೀವಾಜ್ಞೆ ಕಾಯ್ದೆ 1994ರ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಳ್ಳಬೇಕು ಎಂದು ಮನವಿ ಮಾಡಿಕೊಳ್ಳಲಾಗಿದೆ.

ಈ ಸಂಬಂಧ ವಿಶೇಷ ನ್ಯಾಯಾಲಯದಲ್ಲಿ ಮನವಿ ಮಾಡಬೇಕಾಗಿದೆ. ಆದ್ದರಿಂದ ಮುಟ್ಟುಗೋಲು ಹಾಕಿಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸಲು ಅನುಮತಿ (3ನೇ ಪುಟಕ್ಕೆ)


Shree Bhagwan Mahaveer Educational Trust ®

JAIN VIDYALAYA

STATE / CBSE SCHOOL & COMPOSITE PU COLLEGE SCIENCE & COMMERCE

#3342/184-183, Kasaba Hobli, Shamanur, Davanagere.

(SUCCESSFULLY completed 20 Years in the field of Education)



Great Opportunity to the studios students

*We are proudly announcing a talent search examanation to extract the innate talent of the students.*

J.V. - T.A.T

Jain Vidyalaya - Talent Assessment Test

*We Invite all the 10th Class (SSLC / CBSE / ICSE ) appearing students to come and attend the Entrance examination for securing scholarships to join into I PUC (2023-2024)*

Details : Date of Jain Vidyalaya - Talent Assessment Test : 07/01/2023, Timings : 2.00 PM to 4.00 PM

Venue : Jain Vidyalaya PU College, # 3342/182-183 Kasaba Hobli, Shamanur, Davanagere.

Syllabus : 10th Standard Mathematics, Science and General English

Contact No.s : 08192 232424, 98444 74481, 98444 74485

Note : Bus facility will be provided from Jain Vidyalaya Head Office, P.J Extension, Opp. Unity Hospital Davanagere.


# ಜಲ್ಲಿ ಕ್ವಾರಿ ಮಾಲೀಕರ ಮುಷ್ಕರದಿಂದ ಸ್ಥಗಿತಗೊಂಡ ಅನೇಕ ಕಾಮಗಾರಿಗಳು, ಕಾರ್ಮಿಕರಿಗೆ ನಿರುದ್ಯೋಗ

ದಾವಣಗೆರೆ, ಜ. 5- ಡ್ರೋನ್ ಸರ್ವೇ ವರದಿಯಂತೆ ಕ್ವಾರಿ ಮಾಲೀಕರು 5 ಪಟ್ಟು ಹೆಚ್ಚುವರಿ ರಾಜಸ್ವ ತುಂಬಿ ಗುತ್ತಿಗೆ ನವೀಕರಿಸಬೇಕು ಎಂಬ ಆದೇಶ ವಿರೋಧಿಸಿ, ರಾಜ್ಯದಲ್ಲಿ ಜಲ್ಲಿ ಕ್ವಾರಿ ಮಾಲೀಕರು ಮುಷ್ಕರ ನಡೆಸುತ್ತಿದ್ದಾರೆ.

ಮುಷ್ಕರದ ಪರಿಣಾಮ ನಿರ್ಮಾಣ ಕಾರ್ಯಗಳು ಸ್ಥಗಿತವಾಗಿ ಕೋಟ್ಯಂತರ ರೂ. ನಷ್ಟವಾಗುತ್ತಿದೆ. ಕಟ್ಟಡ ಕಾರ್ಮಿಕರ ಸಹಿತ ದೊಡ್ಡ ಸಂಖ್ಯೆಯಲ್ಲಿ ನಿರುದ್ಯೋಗ ಉಂಟಾಗಿದೆ. ಜಿಲ್ಲಾ ಪಂಚಾಯತಿ ಇಂಜಿನಿಯರಿಂಗ್ ವಿಭಾಗ ಹಾಗೂ ಸ್ಮಾರ್ಟ್ ಸಿಟಿ, ಪಿಡಬ್ಲ್ಯೂಡಿ ಕಾಮಗಾರಿಗಳು ಕಳೆದ ಎರಡು ವಾರಗಳಿಂದ ನಿಂತು ಹೋಗಿವೆ.

ಜಲ್ಲಿ ಜೊತೆಗೆ ನಿರ್ಮಾಣಕ್ಕೆ ಬೇಕಾದ ಎಂ.ಸ್ಯಾಂಡ್, ಕಲ್ಲಿನ ಪುಡಿ ಎಲ್ಲವೂ ಸ್ಥಗಿತಗೊಂಡಿದೆ. ಸರ್ಕಾರದ ಮಟ್ಟದಲ್ಲಿ ಕ್ರಷರ್ ಮಾಲೀಕರೊಂದಿಗೆ ಮಾತುಕತೆ ನಡೆದಿದೆ. ಆದರೆ ಈ ಕುರಿತು ಪ್ರತಿಕ್ರಿಯೆ ನೀಡಲು ರಾಜ್ಯ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ನಿರಾಕರಿಸಿದ್ದಾರೆ.

### ಡ್ರೋನ್ ಸರ್ವೇ ವರದಿಯಂತೆ ಕ್ವಾರಿ ಮಾಲೀಕರು 5 ಪಟ್ಟು ಹೆಚ್ಚುವರಿ ರಾಜಸ್ವ ತುಂಬಿ ಗುತ್ತಿಗೆ ನವೀಕರಿಸಬೇಕು ಎಂಬ ಆದೇಶವನ್ನು ವಿರೋಧಿಸಿ ಪ್ರತಿಭಟನೆ

ಮುಷ್ಕರ 13 ನೇ ದಿನಕ್ಕೆ ಕಾಲಿಟ್ಟಿದ್ದರ ಪರಿಣಾಮ ಬಹುತೇಕ ಕಟ್ಟಡ ಕಾಮಗಾರಿಗಳು ಸ್ಥಗಿತಗೊಂಡಿದ್ದು, ಕೂಲಿ ಕಾರ್ಮಿಕರು ಬೀದಿಗೆ ಬೀಳುವಂತಾಗಿದೆ. ಕ್ರಷರ್ ಸ್ಥಗಿತದಿಂದ ಇದೇ ವೃತ್ತಿಯನ್ನು ನಂಬಿ ಬದುಕುತ್ತಿರುವ ಸಾವಿರಾರು ಕುಟುಂಬಗಳು ಸಂಕಷ್ಟಕ್ಕೀಡಾಗಿವೆ.

ದಾವಣಗೆರೆಗೆ ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ಉಚ್ಚಂಗಿದುರ್ಗ ಹಾಗೂ ಬೇವಿನಹಳ್ಳಿ , ಅನಂತನಹಳ್ಳಿ ಭಾಗದಿಂದ ಸರಾಸರಿ 200 ಲಾರಿಗಳು ಬರುತ್ತಿದ್ದವು. ಕಳೆದ 13 ದಿನಗಳಿಂದ ಸಂಪೂರ್ಣ ಬಂದ್ ಆಗಿವೆ. ಈ ಭಾಗದ 40 ಕ್ರಷರ್ ಗಳಿಂದ ಪ್ರತಿ ದಿನ 5000 ಟನ್ ದಾವಣಗೆರೆಯ ಸರ್ಕಾರಿ ಹಾಗೂ ಖಾಸಗಿ ಕಾಮಗಾರಿಗಳಿಗೆ ಸರಬರಾಜಾಗುತ್ತಿರುವುದು ಸ್ಥಗಿತಗೊಂಡಿದೆ.

ಡ್ರೋನ್ ಸರ್ವೆ ಅವೈಜ್ಞಾನಿಕವಾಗಿದ್ದು, ವರದಿಯ ಅನ್ವಯ ಐದು ಪಟ್ಟು ಗೌರವ ಧನ ಕಟ್ಟಲು ಸಾಧ್ಯವಿಲ್ಲ. ಪರಿಸರ ವಿಚಾರದ ಕೆಎಂಎಂಪಿ ಕಾನೂನು ತಿದ್ದುಪಡಿ ಆಗಬೇಕು. ಸರ್ಕಾರಿ ಭೂಮಿಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬೇಕೆಂದು ಜಲ್ಲಿ ಕ್ವಾರಿ ಮಾಲೀಕರ ಸಂಘದ ದಾವಣಗೆರೆ ಜಿಲ್ಲಾ ಗೌರವಾಧ್ಯಕ್ಷ ಎಸ್.ಎಸ್. ಗಣೇಶ್, ಜಿಲ್ಲಾಧ್ಯಕ್ಷ ಎ.ಹೆಚ್. ಕುಬೇರಪ್ಪ ಮತ್ತಿತರರು ಒತ್ತಾಯಿಸಿದ್ದಾರೆ.

ಗಣಿ ಗುತ್ತಿಗೆದಾರರಿಂದ ರಾಜಧನ ಸಂಗ್ರಹಿಸುವುದನ್ನು ನಿಲ್ಲಿಸಬೇಕು ಮತ್ತು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿಗಳಿಗೆ ತಿದ್ದುಪಡಿ ತರಬೇಕೆಂದು ಸಂಘದ ಹರಪನಹಳ್ಳಿ ತಾಲ್ಲೂಕು ಅಧ್ಯಕ್ಷ ಯಶವಂತಗೌಡ್ರು, ದಾವಣಗೆರೆ ತಾಲ್ಲೂಕು ಅಧ್ಯಕ್ಷ ಎನ್. ಮರುಳಸಿದ್ದೇಶ್ವರ, ಇತರೆ ಪದಾಧಿಕಾರಿಗಳಾದ ಹೊನ್ನೂರು ಗಿರೀಶ್, ರಾಜಶೇಖರಗೌಡ್ರು, ರವಿಗೌಡ, ಮಹಬಲೇಶ ನಾಯಕರು, ಕಲ್ಲಳ್ಳಿ (2ನೇ ಪುಟಕ್ಕೆ)

# ಬೂತ್ ವಿಜಯ ಅಭಿಯಾನ ಕಾರ್ಯಕ್ರಮ ಯಶಸ್ವಿಗೊಳಿಸಿ: ಸಂಸದ ಜಿ.ಎಂ. ಸಿದ್ದೇಶ್ವರ



ಜಗಳೂರು, ಜ.5- ಬಿಜೆಪಿ ಡಬಲ್ ಇಂಜಿನ್ ಸರ್ಕಾರದ ಜನಪರ ಅಭಿವೃದ್ದಿ ಯೋಜನೆಗಳನ್ನು ಮತದಾರರಿಗೆ ಜಾಗೃತಿ ಮೂಡಿಸಿ ಅಭಿಯಾನ ಯಶಸ್ವಿಗೊಳಿಸಿ ಎಂದು ಸಂಸದ ಜಿಎಂ ಸಿದ್ದೇಶ್ವರ ಹೇಳಿದರು.

ತಾಲ್ಲೂಕಿನ ಕೆಚ್ಚೇನಹಳ್ಳಿ,ಹೊಸಕೆರೆ ಗ್ರಾಮಗಳಲ್ಲಿ ಜನವರಿ 3 ರಿಂದ 12 ರವರೆಗೆ ನಡೆಯಲಿರುವ "ಬೂತ್ ವಿಜಯ ಅಭಿಯಾನ"ಕ್ಕೆ ಚಾಲನೆ ನೀಡಿ ಮಾತನಾಡಿದರು.

ಬಿಜೆಪಿ ಸರ್ಕಾರ ದೇಶದ ಭದ್ರತೆ ಸ್ವಚ್ಛತೆ,ಅಭಿವೃದ್ದಿ ಗಾಗಿ ಸಂಕಲ್ಪ ಗೈದಿದ್ದು.ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ತರಬೇಕಿದೆ.ಪಕ್ಷ ಸಂಘಟಿಸಿ ಕಾರ್ಯಕರ್ತರು ಒಗ್ಗಟ್ಟಿನಿಂದ ಚುನಾವಣೆ ಎದುರಿಸಬೇಕು ಎಂದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ವಿಧಾನ ಸಭಾ ಕ್ಷೇತ್ರಕ್ಕೆ ಬಿಜೆಪಿ ಆಡಳಿತ ಪಕ್ಷ ನೀಡಿರುವ ನೀರಾವರಿ ಯೋಜನೆಗಳನ್ನು, ಅಭಿವೃದ್ದಿ ಕಾಮಗಾರಿಗಳ ಬಗ್ಗೆ ಬೂತ್ ಮಟ್ಟದಿಂದ ಕಾರ್ಯಕರ್ತರು ಹಳ್ಳಿ, ಹಳ್ಳಿಗಳಲ್ಲಿ ಜನರಿಗೆ ಮನವರಿಕೆ ಮಾಡಬೇಕು. ಮತ್ತೊಮ್ಮೆ ಜನರ ಆಶೀರ್ವಾದ ಪಡೆಯಬೇಕು ಎಂದರು.

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಎಚ್.ಸಿ. ಮಹೇಶ್, ಪಟ್ಟಣ ಪಂಚಾಯಿತಿ ಅಧ್ಯಕ್ಷೆ ವಿಶಾಲಾಕ್ಷಿ, ಎಸ್. ಕೆ.ಮಂಜುನಾಥ್, ಸಿದ್ದೇಶ್, ದೀಪಕ್ ಪಟೇಲ್, ಚಂದ್ರಪ್ಪ, ಸಿದ್ದೇಶ್, ನಾರಾಯಣ ಸ್ವಾಮಿ, ಶಿವಕುಮಾರ್ ಸ್ವಾಮಿ, ಮುಂತಾದವರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಸಾಮೂಹಿಕ ಗಾಯತ್ರಿ ಪೂಜೆ

ಶ್ರೀ ಗಾಯತ್ರಿ ದೇವಿಯ ಉಪಾಸಕರ ಕ್ರಿಯಾತ್ಮಕ ಸಂಸ್ಥೆ, ಶ್ರೀ ಗಾಯತ್ರಿ ಪರಿವಾರದಿಂದ ಬನದ ಹುಣ್ಣಿಮೆ ಅಂಗವಾಗಿ ಇಂದು ಬೆಳಿಗ್ಗೆ 7 ಕ್ಕೆ ಜಯದೇವ ವೃತ್ತದ ಬಳಿ ಇರುವ ಶ್ರೀ ಶಂಕರ ಮಠದಲ್ಲಿ ಸಾಮೂಹಿಕ ಗಾಯತ್ರಿ ಪೂಜೆ, ಉಪಾಸನೆ ನಡೆಯಲಿದೆ ಎಂದು ಪರಿವಾರದ ಅಧ್ಯಕ್ಷರಾದ ಡಾ. ಸುಶೀಲಮ್ಮ ತಿಳಿಸಿದ್ದಾರೆ.ಸಾರ್ವಜನಿಕರು ಆಗಮಿಸುವಂತೆ ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ ಶೆಣೈ ಕೋರಿದ್ದಾರೆ.

# ಶಾಂತಿ, ಪರಿಶುದ್ಧತೆ ಹೊಂದಿರುವ ವ್ಯಕ್ತಿಯನ್ನು ಭೂಮಂಡಲದಲ್ಲಿ ಯಾರೂ ಅಲುಗಾಡಿಸಲು ಸಾಧ್ಯವಿಲ್ಲ

ಹರಪನಹಳ್ಳಿ, ಜ.5 - ಯಾರಲ್ಲಿ ಶಾಂತಿ, ಪರಿಶುದ್ಧತೆ, ಅಧ್ಯಾತ್ಮಿಕತೆ, ಪ್ರಾಮಾಣಿಕತೆ ಇರುತ್ತದೆಯೋ ಅಂತಹ ವ್ಯಕ್ತಿಯನ್ನು ಭೂಮಂಡಲದಲ್ಲಿ ಯಾರು ಅಲುಗಾಡಿಸಲು ಆಗುವುದಿಲ್ಲ ಎನ್ನುವುದಕ್ಕೆ ಸಿದ್ದೇಶ್ವರ ಸ್ವಾಮೀಜಿ ಉದಾಹರಣೆಯಾಗಿದ್ದರು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ ಹೇಳಿದರು.

ಪಟ್ಟಣದ ನ್ಯಾಯಾಲಯದ ಆವರಣದಲ್ಲಿನ ವಕೀಲರ ಸಂಘದ ಕಚೇರಿಯಲ್ಲಿ ವಕೀಲರ ಸಂಘ ಹಾಗೂ ಕಾನೂನು ಸೇವಾ ಸಮಿತಿ ವತಿಯಿಂದ ವಿಜಾಪುರದ ಸಿದ್ದೇಶ್ವರ ಸ್ವಾಮಿಜಿ ನಿಧನಕ್ಕೆ ಶ್ರದ್ದಾಂಜಲಿ ಹಾಗೂ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಆಸೆ, ವ್ಯಾಮೋಹ ಇಲ್ಲದ ಮಹಾನ್ ವ್ಯಕ್ತಿ. ಕಾವಿ ವಿವೇಕವನ್ನು ಹೊಂದಿದ ವ್ಯಕ್ತಿಗೆ ಮಾತ್ರ. ನಮ್ಮಂತವರಿಗೆ ಅಲ್ಲ. ಹಾಗಾಗಿ ನಾನು ಕಾವಿ ತೊಡುವುದಿಲ್ಲ ಎಂದು ಭಕ್ತರಿಗೆ ಹೇಳಿದವರು. ಬೆಲೆ ಕಟ್ಟಲಾಗದ ವ್ಯಕ್ತಿ ಅವರಾಗಿದ್ದರು. ಕತೆ, ಪ್ರವಚನಗಳ ಮೂಲಕ ಜನರ ಭಾವನೆಗಳನ್ನು ಬದಲಾವಣೆ ಮಾಡಿದವರು. ಸಂಪತ್ತಿಗಾಗಿ ಆರೋಗ್ಯ ಕಳೆದುಕೊಳ್ಳುತ್ತಾರೆ. ಸಂಪತ್ತು ಬಂದ ಮೇಲೆ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಂಪತ್ತು ಕಳೆದುಕೊಳ್ಳುತ್ತಾರೆ. ಆದರೆ, ಯಾವುದಕ್ಕೂ ಆಸೆ ಪಡದೆ ಆರೋಗ್ಯ ಸಂಪತ್ತು, ಜ್ಞಾನ ಹೊಂದಿದ್ದರು. ಅವರ ಬದುಕಿನಂತೆ ನಾವು ಅವರ ಆದರ್ಶ, ತತ್ವಗಳನ್ನು ಮೈಗೂಡಿಸಿಕೊಳ್ಳೋಣ ಎಂದು ಕರೆ ನೀಡಿದರು.



ಹರಪನಹಳ್ಳಿ : ವಕೀಲರ ಸಂಘದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರಾದ ಎಂ.ಭಾರತಿ

ಸಿವಿಲ್ ಕಿರಿಯ ನ್ಯಾಯಾಧೀಶರಾದ ಫಕ್ಕೀರವ್ವ ಕೆಳಗೇರಿ ಮಾತನಾಡಿ, ನಾನೂ ಅವರ ಪ್ರವಚನಗಳಿಂದ ಪ್ರಭಾವಿತಳಾದೆ, ಅದು ಮರೆಯಲಾಗದ ದಿನವಾಗಿದೆ. ಬಡವರಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದರು, ಅವರೊಬ್ಬ ಜ್ಞಾನ ಯೋಗಿಯಾಗಿದ್ದರು. ಅವರನ್ನು ಕಾಣಲು ಅಪಾರ ಜನಸ್ತೋಮ ಸೇರುತ್ತಿತ್ತು. ಅವರ ಪ್ರವಚನಕ್ಕೆ ಹೋದರೆ ಊಟ ಸಹ ಮಾಡುವುದಿಲ್ಲ. ಅವರ ಮಾತುಗಳು ಅರ್ಥಗರ್ಭಿತವಾಗಿರುತ್ತಿದ್ದವು. ಭಕ್ತರಿಗೆ ಯಾವುದೇ ಕೊರತೆಯಾಗದಂತೆ ಅನ್ನ, ನೀರು ಕಲ್ಪಿಸಿದಂತಹ ಯೋಗಿಗಳು. ಅವರ ವ್ಯಕ್ತಿತ್ವಕ್ಕೆ ಅನೇಕರು ಮಾರು ಹೋಗಿದ್ದಾರೆ. ಶಾಂತತೆ ಹಾಗೂ ಸರಳತೆಯನ್ನು ಪಾಲನೆ ಮಾಡುತ್ತಿದ್ದರು. ಯಾವುದನ್ನೂ ಅಪೇಕ್ಷೆ ಪಡುತ್ತಿರಲಿಲ್ಲ. ಇನ್ನೊಬ್ಬರಿಗೆ ಗೊತ್ತಾಗದ ಪವಾಡಗಳು ನಡೆದಿವೆ, ಅವರ ವ್ಯಕ್ತಿತ್ವ, ಸಿದ್ಧಾಂತಗಳನ್ನು ಪಾಲಿಸೋಣ ಎಂದರು.

ವಕೀಲರ ಸಂಘದ ಅಧ್ಯಕ್ಷ ಎಂ.ಅಜ್ಜಪ್ಪ ಮಾತನಾಡಿ, ತನಗಾಗಿ ಬದುಕದೆ, ಸಮಾಜಕ್ಕಾಗಿ ಬದುಕಿದ ಮಹಾನ್ ಸಂತ ಸಿದ್ದೇಶ್ವರ ಸ್ವಾಮೀಜಿಯವರ ಸರಳ ಜೀವನದ ಶೈಲಿಯನ್ನು ಮೈಗೂಡಿಸಿಕೊಳ್ಳಬೇಕು. ಪದವಿ, ಸಂಪತ್ತನ್ನು ಅಪೇಕ್ಷೆ ಮಾಡದೆ ಅವರಿಗಾಗಿ ಬಂದ ಪ್ರಶಸ್ತಿ, ಗೌರವಗಳನ್ನು ನಯವಾಗಿ ತಿರಸ್ಕರಿಸುತ್ತಿದ್ದರು ಎಂದರು.

ವಕೀಲರ ಸಂಘದ ಮಾಜಿ ಅಧ್ಯಕ್ಷ ಪಿ. ಜಗದೀಶಗೌಡ ಮಾತನಾಡಿ, ಶ್ರೀಗಳವರ ಸಮೀಪ ಯಾರೂ ಹೋಗುತ್ತಿರಲಿಲ್ಲ, ಅಷ್ಟೊಂದುದೈವೀಶಕ್ತಿಹೊಂದಿದವರಾಗಿದ್ದರು ಎಂದರು.

ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶಗೌಡ, ಕಾರ್ಯದರ್ಶಿ ಕೆ.ಆನಂದ, ವಕೀಲರಾದ ಗಂಗಾಧರ ಗುರುಮಠ, ಕೆ. ಜಗದಪ್ಪ. ಕಣಿವಿಹಳ್ಳಿ ಮಂಜುನಾಥ, ಪಿ. ರಾಮನಗೌಡ, ಕೆ.ಚಂದ್ರೇಗೌಡ, ಪಿ.ರೇವಣನಗೌಡ, ಐಗೋಳ ಚಿದಾನಂದ, ಕೆ.ಲಿಂಗಾನಂದ, ಕೆ.ವಿರೂಪಾಕ್ಷಪ್ಪ, ಉಲಿಯಪ್ಪ, ಬಂಡ್ರಿ ಗೋಣಿಬಸಪ್ಪ, ಮುತ್ತಿಗಿ ಮಂಜುನಾಥ, ರೇವಣಸಿದ್ದಪ್ಪ, ಸಂಗೀತ ಶಿಕ್ಷಕ ಬಸವರಾಜ ಭಂಡಾರಿ ಸೇರಿದಂತೆ ಇತರರು ಇದ್ದರು.

## ನಾಡಿದ್ದು ನಗರದಿಂದ ಹರಿಹರಕ್ಕೆ ಕಾಲ್ನಡಿಗೆ

ದಾವಣಗೆರೆ, ಜ.5- ಕುಂದುವಾಡ ಕೆರೆ ವಾಯು ವಿಹಾರ ಬಳಗದ ವತಿಯಿಂದ ನಗರದಿಂದ ಹರಿಹರದ ಶ್ರೀ ಹರಿಹರೇಶ್ವರ ದೇವಸ್ಥಾನಕ್ಕೆ ಕಾಲ್ನಡಿಗೆ ಜಾಥಾವನ್ನು ಇದೇ ದಿನಾಂಕ 8 ರ ಭಾನುವಾರ ಹಮ್ಮಿಕೊಳ್ಳಲಾಗಿದೆ.

ನಗರದ ಬಿಎಸ್ಸೆನ್ನೆಲ್ ಸರ್ಕಲ್‌ನಿಂದ ಅಂದು ಬೆಳಿಗ್ಗೆ 5.30 ಕ್ಕೆ ಪ್ರಾರಂಭಗೊಳ್ಳುವ ಕಾಲ್ನಡಿಗೆ ಜಾಥಾಕ್ಕೆ ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಚಾಲನೆ ನೀಡುವರು. ಕಾಲ್ನಡಿಗೆ ಮೂಲಕ ಹರಿಹರೇಶ್ವರ ದೇವಸ್ಥಾನದ ಆವರಣಕ್ಕೆ ತಲುಪುವರು. ಅಲ್ಲಿ ಯೋಗ ಮತ್ತು ಧ್ಯಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಇದೇ ಸಂದರ್ಭದಲ್ಲಿ ಕಾಲ್ನಡಿಗೆಯ ಮುಖ್ಯ ರೂವಾರಿ ಡಾ. ರಾಜಶೇಖರ್ ಅವರನ್ನು ಸನ್ಮಾನಿಸಲಾಗುವುದು. ಜೈನ ಯೋಗ ಕೇಂದ್ರ ಮತ್ತು ಬಾಲಕರ ಸರ್ಕಾರಿ ಕಚೇರಿ ಪ್ರೌಢಶಾಲಾ ಮೈದಾನದ ವಾಯು ವಿಹಾರ ಬಳಗದಿಂದ ಉಪಹಾರದ ವ್ಯವಸ್ಥೆ ಮಾಡಲಾಗಿದೆ.

ನಂತರ ದೇವಸ್ಥಾನದ ಆವರಣದಿಂದ ದಾವಣಗೆರೆಗೆ ವಾಪಸ್ ಬರುವವರಿಗೆ ನಗರದ ಸಪ್ತಗಿರಿ ವಿದ್ಯಾಸಂಸ್ಥೆ 3, ಸೇಂಟ್ ಜಾನ್ಸ್ ವಿದ್ಯಾಸಂಸ್ಥೆ 1, ಯುರೋ ಕಿಡ್ಸ್ ವಿದ್ಯಾಸಂಸ್ಥೆ 2 ಹಾಗೂ ಲಿಟ್ಲ್ ಚಾಂಪ್ಸ್ ಸ್ಕೂಲ್ ಹರಿಹರ ಸಂಸ್ಥೆ ವತಿಯಿಂದ 1 ಬಸ್ಸಿನ ವ್ಯವಸ್ಥೆ ಮಾಡಲಾಗಿದೆ.

ಕ್ರೀಡಾ ಪ್ರೇಮಿಗಳು, ಪರಿಸರ ಪ್ರೇಮಿಗಳು, ಮಹಿಳೆಯರು ಮತ್ತು ಬೆಳಗಿನ ವಾಯು ವಿಹಾರಿಗಳು ಭಾಗವಹಿಸಿ, 'ನಮ್ಮ ನಡೆ ಆರೋಗ್ಯದ ಕಡೆ' ಎಂಬ ಕಾಲ್ನಡಿಗೆಯ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಂತೆ ಕಾರ್ಯಕ್ರಮದ ಸಂಘಟಕರಲ್ಲೊಬ್ಬರಾದ ಜೆ. ಈಶ್ವರ್‌ಸಿಂಗ್ ಕವಿತಾಳ್ (9844127137) ಕೋರಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 8971389102, 9448375866.

## ಆರು ತಾಣಗಳಲ್ಲಿ ಎನ್‌ಐಎ ಶೋಧ

**(1ನೇ ಪುಟದಿಂದ)** ಭಾಗಿಯಾಗಿದ್ದರು ಎಂದು ಎನ್.ಐ.ಎ. ತಿಳಿಸಿದೆ. ಆರೋಪಿಗಳು ಮತ್ತು ಶಂಕಿತರ ಮನೆಗಳ ಮೇಲೆ ದಾಳಿ ನಡೆಸಿ ಪರಿಶೀಲನೆ ಮಾಡಿದ ವೇಳೆ ಅನೇಕ ಡಿಜಿಟಲ್ ಉಪಕರಣಗಳು ಹಾಗೂ ಪ್ರಚೋದನಾಕಾರಿ ದಾಖಲೆಗಳನ್ನು ವಶಪಡಿಸಿಕೊಂಡಿರುವುದಾಗಿ ಎನ್.ಐ. ಎ. ಹೇಳಿದೆ.

# ಮಾರುಕಟ್ಟೆ ಸ್ವಚ್ಛತೆ ಕಾಪಾಡಿಕೊಳ್ಳಿ: ಭೈರತಿ ಬಸವರಾಜ್

**(1ನೇ ಪುಟದಿಂದ)** ಒತ್ತಾಸೆ ಮೇರೆಗೆ ಇದೀಗ ನೂತನ ಸುಸಜ್ಜಿತ ಮಳಿಗೆಗಳು ನಿರ್ಮಾಣಗೊಂಡಿವೆ ಎಂದರು.

ಮಳಿಗೆ ನಿರ್ಮಾಣದ ಜೊತೆಗೆ ಪಾರ್ಕಿಂಗ್ ಸೇರಿದಂತೆ, ಮೂಲಭೂತ ಸೌಕರ್ಯಗಳಿಗೂ ಹೆಚ್ಚಿನ ಒತ್ತು ನೀಡಲಾಗಿದೆ. ಇದರ ಸದುಪಯೋಗ ಪಡೆದು ಕೊಳ್ಳಿ. ಜೊತೆಗೆ ನಿಮ್ಮ ಮನೆಯಂತೆಯೇ ಭಾವಿಸಿ ಸ್ವಚ್ಛವಾಗಿ ಇಟ್ಟುಕೊಳ್ಳಿ. ನಾನು ಮತ್ತೊಮ್ಮೆ ಬಂದು ಇಲ್ಲಿನ ಸ್ವಚ್ಛತೆಯನ್ನು ಗಮನಿಸುತ್ತೇನೆ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸದ ಜಿ.ಎಂ. ಸಿದ್ದೇಶ್ವರ ಮಾತನಾಡಿ, ಮಹಾನಗರ ಪಾಲಿಕೆಯವರು ನೂತನ ಮಳಿಗೆಗಳನ್ನು ಅರ್ಹರಿಗೆ ಮಾತ್ರ ನೀಡಬೇಕು ಎಂದು ಹೇಳಿದರು.

ನಬಾರ್ಡ್ ನಿಂದ ಶೇ.90 ಹಾಗೂ ಎಪಿಎಂಸಿ ಯಿಂದ ಶೇ.10ರಷ್ಟು ಹಣ ಸೇರಿ ಒಟ್ಟು ಇಪ್ಪತ್ತೈದು ವರೆ ಕೋಟಿ ರೂ. ವೆಚ್ಚದಲ್ಲಿ 254 ಮಳಿಗೆಗಳನ್ನು ನಿರ್ಮಿಸಲಾಗಿದೆ. ಯಾರದೋ ಒತ್ತಡಕ್ಕೆ ಮಣಿದು ಅಪ್ಪನಿಗೊಂದು, ಮಗನಿಗೊಂದು, ಹೆಂಡತಿಗೊಂದು ಎಂದು ಒಂದೇ ಕುಟುಂಬದವರಿಗೆ ಮೂರ್ನಾಲ್ಕು ಮಳಿಗೆಗಳನ್ನು ವಿತರಿಸಬೇಡಿ. ನಿಜವಾಗಿ ವ್ಯಾಪಾರ ಮಾಡುವವರಿಗೆ ಮಾತ್ರ ಒಬ್ಬರಿಗೆ ಒಂದು ಮಳಿಗೆ ನೀಡಬೇಕು ಎಂದು ಹೇಳಿದು.

ಐದು, ಹತ್ತು ಮಳಿಗೆ ಪಡೆದು ಬೇರೆಯವರಿಗೆ ಬಾಡಿಗೆಗೆ ನೀಡಿ ಹಣ ಮಾಡಿಕೊಳ್ಳುವ ದಂಧೆ ನಡೆಯುತ್ತದೆ. ನನಗೂ ಐದು ಮಳಿಗೆಗಳನ್ನು ಕೊಡಿ ಎಂದು ಅನೇಕರು ಕೇಳಿದ್ದಾರೆ. ನಾನು ನಿರಾಕರಿಸಿದ್ದೇನೆ. ಪಾಲಿಕೆಯಿಂದ ಮಳಿಗೆಗಳನ್ನು ವಿತರಿಸಿದ ಪಟ್ಟಿಯನ್ನು ನನಗೆ ನೀಡಬೇಕು ಎಂದು ಸೂಚಿಸಿದರು.

ಬಡವರಿಗೆ ಅನುಕೂಲವಾಗಲೆಂದು ನಾವು ಪ್ರಾಮಾಣಿಕವಾಗಿ ಶ್ರಮಿಸಿ, ಮಳಿಗೆಗಳನ್ನು ನಿರ್ಮಿಸಿದ್ದೇವೆ. ಹಾಗೆಯೇ ಜಿಲ್ಲಾಧಿಕಾರಿಗಳು, ಪಾಲಿಕೆ ಮೇಯರ್ ಹಾಗೂ ಸದಸ್ಯರು, ಆಯುಕ್ತರೂ ಸಹ ಪ್ರಾಮಾಣಿಕವಾಗಿ ಅರ್ಹರಿಗೆ ಮಳಿಗೆ ನೀಡುವ ವ್ಯವಸ್ಥೆ ಮಾಡಬೇಕು ಎಂದು ಹೇಳಿದರು.

ಸ್ಮಾರ್ಟ್ ಸಿಟಿ ಯೋಜನೆಯಡಿ ನಗರದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ಅವಧಿಯೊಳಗೆ ಕಾಮಗಾರಿಗಳು ಪೂರ್ಣಗೊಳ್ಳಬೇಕು. ಸ್ಮಾರ್ಟ್ ಸಿಟಿ ವ್ಯವಸ್ಥಾಪಕರು ಯಾವುದೇ ಸಬೂಬು ಹೇಳಬಾರದು ಎಂದ ಸಿದ್ದೇಶ್ವರ್, ಜನವರಿ ತಿಂಗಳೊಳಗೆ ಖಾಸಗಿ ಬಸ್ ನಿಲ್ದಾಣ, ಫೆಬ್ರವರಿ ಮೊದಲ ವಾರದಲ್ಲಿ ಕೆಎಸ್ಸಾರ್ಟಿಸಿ ಬಸ್ ನಿಲ್ದಾಣ ಹಾಗೂ ಬೇತೂರು ಬಸ್ ನಿಲ್ದಾಣ ಲೋಕಾರ್ಪಣೆಗೆ ಸಿದ್ಧವಾಗಬೇಕು. ಗುತ್ತಿಗೆದಾರರ ಮೇಲೆ ಒತ್ತಡ ಹಾಕಿ ಶೀಘ್ರ ಕಾಮಗಾರಿ ಪೂರ್ಣಗೊಳಿಸಬೇಕು ಎಂದು ಹೇಳಿದರು.

ಜಿಲ್ಲಾಧಿಕಾರಿ ಶಿವಾನಂದ ಕಾಪಶಿ, ಜಿಲ್ಲಾ ಪಂಚಾಯ್ತಿ ಸಿಇಒ ಡಾ.ಎ.ಚನ್ನಪ್ಪ, ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ, ಆಯುಕ್ತ ವಿಶ್ವನಾಥ ಮುದಜ್ಜಿ, ಸದಸ್ಯ ಕೆ.ಎಂ. ಸುರೇಶ್, ದೂಡಾ ಅಧ್ಯಕ್ಷ ಎ.ವೈ ಪ್ರಕಾಶ್, ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ, ಉಪ ವಿಭಾಗಾಧಿಕಾರಿ ದುರ್ಗಶ್ರೀ, ಕೃಷಿ ಮಾರಾಟ ಇಲಾಖೆ ಸಹಾಯಕ ನಿರ್ದೇಶಕ ಜೆ.ಪ್ರಭು, ಎಪಿಎಂಸಿ ಕಾರ್ಯದರ್ಶಿ ಕೆ.ಸಿ. ದೊರೆಸ್ವಾಮಿ ಇತರರು ಉಪಸ್ಥಿತರಿದ್ದರು.

### ಸಿದ್ಧರಾಮಯ್ಯ ಘನತೆಗೆ ತಕ್ಕಂತೆ ಮಾತನಾಡಲಿ: ಭೈರತಿ

ದಾವಣಗೆರೆ, ಜ.5- ಸಿದ್ಧರಾಮಯ್ಯ ತಮ್ಮ ಘನತೆಗೆ ತಕ್ಕಂತೆ ಮಾತನಾಡಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಹೇಳಿದರು.

ತಾಲ್ಲೂಕಿನ ಬೋರಗೊಂಡನಹಳ್ಳಿಯ ಹೆಚ್. ಗಿರಿಯಾಪುರ ಗ್ರಾಮದಲ್ಲಿ ಹಮಾಲರ ವಸತಿ ಗೃಹ ಉದ್ಘಾಟಿಸಿ ಅವರು ಪತ್ರಕರ್ತರೊಂದಿಗೆ ಮಾತನಾಡಿದರು.

ಬಸವರಾಜ ಬೊಮ್ಮಾಯಿ ಅವರು ಪ್ರಧಾನಿ ಮುಂದೆ ನಾಯಿ ಮರಿ ಎಂಬ ಅವರ ಹೇಳಿಕೆ ಸರಿಯಲ್ಲ. ಅವರು ಗೌರವಯುತವಾಗಿ ಮಾತನಾಡಬೇಕು ಎಂದು ಹೇಳಿದರು.

ಶೇ.40ರಷ್ಟು ಕಮೀಷನ್ ಪಡೆದ ಆರೋಪ ಮಾಡಿದ ಗುತ್ತಿಗೆದಾರರ ಸಂಘದ ಅಧ್ಯಕ್ಷರ ಪರಿಸ್ಥಿತಿ ಏನಾಗಿದೆ? ಈಗ ಜಾಮೀನಿನ ಮೇಲೆ ಹೊರಗಿದ್ದಾರೆ ಎಂದು ಛೇಡಿಸಿದರು.

ಶಾಮನೂರು ಮಲ್ಲಿಕಾರ್ಜುನ್ ಒಡೆತನದ ಕಲ್ಲೇಶ್ವರ ರೈಸ್ ಮಿಲ್ ನಲ್ಲಿ ಕಾಡು ಮೃಗಗಳ ಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ತಪ್ಪು ಯಾರು ಮಾಡಿದ್ದರೂ ಶಿಕ್ಷೆಯಾಗುತ್ತದೆ.

ಈ ಪ್ರಕರಣದಲ್ಲಿ ಮಾಲೀಕರೇ ಹೊಣೆ ಎಂದು ಭೈರತಿ ಹೇಳಿದರು.

### ಹಮಾಲರಿಗಾಗಿ ನಿರ್ಮಿಸಿರುವ ವಸತಿ ಗೃಹಗಳ ಲೋಕಾರ್ಪಣೆ

ದಾವಣಗೆರೆ ಜ. 5- ಜಿಲ್ಲಾ ಕೃಷಿ ಮಾರುಕಟ್ಟೆ ಸಮಿತಿಯಿಂದ ಎಸ್‌ಸಿಪಿ/ಟಿಎಸ್‌ಪಿ ಯೋಜನೆಯಡಿ ಬೋರಗೊಂಡನ ಹಳ್ಳಿ, ಎಚ್. ಗಿರಿಯಾಪುರ ಗ್ರಾಮದಲ್ಲಿ ಸಮಿತಿಯಿಂದ ಲೈಸೆನ್ಸ್ ಪಡೆದು ಕಾರ್ಯ ನಿರ್ವಹಿಸುತ್ತಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಹಮಾಲರಿಗೆ ನಿರ್ಮಿಸಿರುವ ಜಿ+1 ಮಾದರಿಯ 60 ಗೃಹಗಳು ಮತ್ತು ಜಿ+2 ಮಾದರಿಯ 62 ವಸತಿ ಗೃಹಗಳನ್ನು ನಗರಾಭಿವೃದ್ದಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ ಬಸವರಾಜ ಉದ್ಘಾಟಿಸಿ, ಲೋಕಾರ್ಪಣೆ ಮಾಡಿದರು.

## ನಗರಕ್ಕಾಗಮಿಸಿದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಸ್ವಾಗತ



ದಾವಣಗೆರೆ, ಜ.5- ಬಿಜೆಪಿ ವತಿಯಿಂದ ನಾಳೆ ಶುಕ್ರವಾರ ನಡೆಯಲಿರುವ ಕಾರ್ಯಕ್ರಮ ನಿಮಿತ್ತ ಮುನ್ನಾ ದಿನವಾದ ಗುರುವಾರ ಸಂಜೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ನಗರಕ್ಕಾಗಮಿಸಿ ದರು. ಜಿಎಂಐಟಿ ಗೆ ಆಗಮಿಸಿದ ವೇಳೆ ನಡ್ಡಾ ಅವರನ್ನು ಸ್ವಾಗತಿಸಲಾಯಿತು. ಈ ವೇಳೆ ಬಿಜೆಪಿ ರಾಜ್ಯ ಉಸ್ತುವಾರಿ ಸಚಿವ ಅರುಣ್ ಸಿಂಗ್, ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರಾದ ಬಿ.ಸಿ. ನಾಗೇಶ್, ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕರುಗಳಾದ ಎಂ.ಪಿ.ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಪೂರ್ಣಿಮಾ ಶ್ರೀನಿವಾಸ್, ಜೆ.ಹೆಚ್.ತಿಪ್ಪಾರೆಡ್ಡಿ, ಚಂದ್ರಪ್ಪ ಸೇರಿದಂತೆ ಇನ್ನಿತರರು ಇದ್ದರು.

## ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಪಾಪುಗುರು ಆಯ್ಕೆ



tದಾವಣಗೆರೆ, ಜ.5- ನಗರದ ಕವಿ, ಕಾದಂಬರಿಕಾರ ಹಾಗೂ ಪತ್ರಕರ್ತ ಎಸ್. ಗುರುಬಸವರಾಜು ಅವರು ಹಾವೇರಿ ನಗರದಲ್ಲಿ ಜರುಗುವ ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಆಯ್ಕೆಯಾಗಿದ್ದಾರೆ.

ಜನವರಿ 7ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಪಾಪು- ಚಂಪಾ ವೇದಿಕೆಯಲ್ಲಿ ನಡೆಯುವ ಕವಿಗೋಷ್ಠಿ ಯಲ್ಲಿ ಕವನ ವಾಚನ ಮಾಡಲಿದ್ದಾರೆ.

ಪಾಪುಗುರು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಗುರುಬಸವರಾಜ್ ಈಗಾಗಲೇ 'ಮುಳ್ಳೆಲೆಯ ಮದ್ದು' ಎಂಬ ಕವನ ಸಂಕಲನ ಮತ್ತು ಸೂಜಿ ಎಂಬ ಕಾದಂಬರಿ ಪ್ರಕಟಿಸಿದ್ದಾರೆ. ಕಾಮ್ರೆಡ್ ಎಚ್.ಕೆ.ರಾಮಚಂದ್ರಪ್ಪನವರ ಸಂಸ್ಮರಣ ಗ್ರಂಥ "ಕೆಂಪು ಕಾಂಡದ ಹೂ" ಕೃತಿಯನ್ನು ಸಂಪಾದಿಸಿದ್ದಾರೆ. ಪಾಪುಗುರು ಅವರಿಗೆ ಲೇಖಿಕಾ ಪ್ರಶಸ್ತಿ, ಗುರುಕುಲ ಪ್ರಶಸ್ತಿ, ಹಿಂದುಸ್ತಾನ್ ರಿಪಬ್ಲಿಕನ್ ಪ್ರಶಸ್ತಿಗಳು ಲಭಿಸಿವೆ. ಪಾಪುಗುರು ಅವರನ್ನು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ನಾಗರಾಜ್ ಸಿರಿಗೆರೆ ಅಭಿನಂದಿಸಿದ್ದಾರೆ.

## 2ಡಿ ಮೀಸಲಾತಿಗೆ ತಿರಸ್ಕಾರ

**(1ನೇ ಪುಟದಿಂದ)** ಸಮಾನವಾದ ಶಿಕ್ಷಣ, ಉದ್ಯೋಗದಲ್ಲಿ ಮತ್ತೊಂದು ಗ್ರೂಪ್ ಮಾಡಿ ಮೀಸಲಾತಿ ಕೊಡುತ್ತೇವೆ ಎಂದು ತಿಳಿಸಲಾಗಿತ್ತು. ಎಲ್ಲವೂ ಗೊಂದಲ ಇರೋ ಕಾರಣ ಸಂಪುಟ ಸಭೆ ನಿರ್ಣಯವನ್ನು ತಿರಸ್ಕಾರ ಮಾಡುತ್ತಿದ್ದೇವೆ ಎಂದು ಸ್ವಾಮೀಜಿ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಿಎಂ ಬೊಮ್ಮಾಯಿ, ಕಾನೂನು ಹಾಗೂ ಸಂವಿಧಾನದ ಚೌಕಟ್ಟಿನಲ್ಲಿ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಮೀಸಲಾತಿ ಬಗ್ಗೆ ನನಗೆ ಬದ್ಧತೆ ಇದೆ ಎಂದಿದ್ದಾರೆ. ಈಗಾಗಲೇ ಒಂದು ಹಂತದ ನಿರ್ಧಾರ ತೆಗೆದುಕೊಂಡು ಸರಿಯಾದ ದಿಕ್ಕಿನಲ್ಲಿ ಹೆಜ್ಜೆ ಇಟ್ಟಿದ್ದೇವೆ. ಅಂತಿಮ ವರದಿ ಬಂದ ನಂತರ ಪಂಚಮಸಾಲಿ ಸೇರಿದಂತೆ ಇತರೆ ಸಮುದಾಯಗಳಿಗೂ ನ್ಯಾಯ ಸಿಗಲಿದೆ ಎಂದು ಹೇಳಿದರು.

## ಜಲ್ಲಿ ಕ್ವಾರಿ ಮಾಲೀಕರ ಮುಷ್ಕರ

**(1ನೇ ಪುಟದಿಂದ)** ರಾಕೇಶ್, ಎಟಿಕೆ ರಮೇಶ್, ನಾಗರಾಜಗೌಡ, ಕಾವಲಹಳ್ಳಿ ಜನಾರ್ದನ, ಹೊನ್ನಳ್ಳಿ ಧನಂಜಯ ಸೇರಿದಂತೆ ಕ್ರಷರ್ ಮಾಲೀಕರು ಆಗ್ರಹಿಸಿದ್ದಾರೆ. ಸರ್ಕಾರ ಬೇಡಿಕೆ ಈಡೇರಿಸದಿದ್ದರೆ ವಿಧಾನಸೌಧಕ್ಕೆ ಮುತ್ತಿಗೆ ಹಾಕುವುದಾಗಿ ಬೆಂಗಳೂರು ನಗರ ಜಿಲ್ಲಾ ಸ್ಟೋನ್ ಕ್ರಷರ್ಸ್ ಅಂಡ್ ಓನರ್ಸ್ ಅಸೋಸಿಯೇಷನ್ ಎಚ್ಚರಿಕೆ ನೀಡಿದೆ.

# ಬೇಲಿಮಲ್ಲೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷರಾಗಿ ಶಾಂತಾಬಾಯಿ



ಹೊನ್ನಾಳಿ, ಜ.5- ತಾಲ್ಲೂಕಿನ ಬೇಲಿಮಲ್ಲೂರು ಗ್ರಾಪಂ ಉಪಾಧ್ಯಕ್ಷೆಯಾಗಿ ಕೋಟೆಮಲ್ಲೂರು ತಾಂಡಾ (ವಿಜಯಪುರ)ದ ಶಾಂತಾ ಬಾಯಿ ಎನ್. ಹನುಮಂತ ನಾಯ್ಕ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಉಪಾಧ್ಯಕ್ಷೆ ನೀಲಮ್ಮ ಬಿ.ಎನ್. ಉಮೇಶ್ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಶಾಂತಾಬಾಯಿ ಎನ್. ಹನುಮಂತನಾಯ್ಕ ಹೊರತುಪಡಿಸಿ ಬೇರಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ, ಕರ್ನಾಟಕ ನೀರಾವರಿ ನಿಗಮದ ಸಾಸ್ವೇಹಳ್ಳಿ ವಲಯದ ಎಇಇ ಡಿ. ರಾಜ್‌ಕುಮಾರ್ ಅವಿರೋಧ ಆಯ್ಕೆ ಘೋಷಿಸಿದರು.

ಬೇಲಿಮಲ್ಲೂರು ಗ್ರಾಪಂ ಅಧ್ಯಕ್ಷೆ ಮಂಜಮ್ಮ ಸಿದ್ದಪ್ಪ, ಸದಸ್ಯರಾದ ಕೆ. ಎನ್. ಹನುಮಂತಪ್ಪ, ಚಂದ್ರಪ್ಪ, ನೀಲಮ್ಮ ಬಿ. ಎನ್. ಉಮೇಶ್, ಜಿ. ಎಸ್. ಲಕ್ಷ್ಮಿ, ರತ್ನಮ್ಮ ಪಿ.ಬಿ. ಹನುಮಂತಪ್ಪ, ಎ.ಕೆ. ಅಣ್ಣಪ್ಪ, ಕಮಲಮ್ಮ ಗೀತಮ್ಮ ಎಚ್. ನಾಗರಾಜ್, ಪಿಡಿಒ ಕೆ. ಅರುಣ್, ಕಾರ್ಯದರ್ಶಿ ಎಚ್.ಕೆ. ವೀರಣ್ಣ, ಮುಖಂಡ ರಾದ ಎಂ.ಪಿ. ರಾಜು, ಸಿದ್ದಪ್ಪ, ಬಿ.ಎನ್. ಉಮೇಶ್, ಕರ್ನಾಟಕ ನೀರಾವರಿ ನಿಗಮದ ಸಾಸ್ವೇಹಳ್ಳಿ ವಲಯದ ವ್ಯವಸ್ಥಾಪಕ ಬಿ. ಕರಿಬಸಪ್ಪ ಇತರರು ಇದ್ದರು.

## ವೆಂಕಟೇಶ್ ಪಿಸಾಳೆ ನಿಧನ



ದಾವಣಗೆರೆ ದೇವರಾಜ್ ಅರಸ್ ಬಡಾವಣೆ 'ಎ' ಬ್ಲಾಕ್ 5ನೇ ಕ್ರಾಸ್ # 35/2 ವಾಸಿ

**ವೆಂಕಟೇಶ್ ಪಿಸಾಳೆ**

ಇವರು ದಿನಾಂಕ 5.1.2023ರ ಗುರುವಾರ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 82 ವರ್ಷ ವಯಸ್ಸಾಗಿತ್ತು.

ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಸೊಸೆಯಂದಿರು, ಅಳಿಯಂದಿರು, ಸಹೋದರ, ಸಹೋದರಿಯರು ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 6.1.2023ರ ಶುಕ್ರವಾರ ಮಧ್ಯಾಹ್ನ 12.30 ಕ್ಕೆ ನಗರದ ಪಿ.ಬಿ.ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**

**ಮಂಜುನಾಥ (ಬಾಬು) 96114 81036, ವಿಜಯಕುಮಾರ್ 79754 50291**

**ರಕ್ತದಾನ - ಶ್ರೇಷ್ಠದಾನ**

### ಹಳೇಬಾತಿ ಶಾಮನೂರು ರಾಮಣ್ಣ ನಿಧನ



ದಾವಣಗೆರೆ ತಾಲ್ಲೂಕು ಹಳೇಬಾತಿ ಗ್ರಾಮದ ವಾಸಿ, ಶಾಮನೂರು ರಾಮಣ್ಣ (ಶ್ಯಾಗಲೆ) (75) ಅವರು ದಿನಾಂಕ 5.1.2023ನೇ ಗುರುವಾರ ಸಂಜೆ 5.10ಕ್ಕೆ ನಿಧನರಾದರು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 6.1.2023ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಹಳೇಬಾತಿ ಗ್ರಾಮದಲ್ಲಿ ನೆರವೇರಲಿದೆ.

## ಎಸ್ಸೆಸ್ಸೆಂಗೆ ನಿರೀಕ್ಷಣಾ ಜಾಮೀನು

**(1ನೇ ಪುಟದಿಂದ)** ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ಮೂವರು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಕಳೆದ 30 ರಂದು ನಿರೀಕ್ಷಣಾ ಜಾಮೀನು ಅರ್ಜಿಯ ವಿಚಾರಣೆ ನಡೆದಿತ್ತು. ಪ್ರಕರಣದ ಆದೇಶವನ್ನು ಇಂದಿಗೆ ನಿಗದಿ ಮಾಡಿ, ವಿಚಾರಣೆಯನ್ನು 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಮುಂದೂಡಿತ್ತು. ಮಲ್ಲಿಕಾರ್ಜುನ್ ಪರ ನ್ಯಾಯವಾದಿ ಪ್ರಕಾಶ್ ಪಾಟೀಲ್ ಹಾಗೂ ಸಂಪನ್ನ ಮತ್ತು ಕರಿಬಸಯ್ಯ ಪರ ನ್ಯಾಯವಾದಿ ಹೆಚ್.ವಿ.ರಾಮದಾಸ್ ವಾದ ಮಂಡನೆ ಮಾಡಿದರು.

## ದೂರದರ್ಶನ, ರೇಡಿಯೋಗೆ 2,500 ಕೋ. ರೂ. ಯೋಜನೆ

ನವದೆಹಲಿ, ಜ. 5 – ದೂರದರ್ಶನ ಹಾಗೂ ಆಲ್ ಇಂಡಿಯಾ ರೇಡಿಯೋ ಮೂಲಭೂತ ಸೌಲಭ್ಯಗಳ ಉನ್ನತೀಕರಣಕ್ಕಾಗಿ ಕೇಂದ್ರ ಸಂಪುಟ 2,500 ಕೋಟಿ ರೂ.ಗಳ ಯೋಜನೆಗೆ ಅನುಮೋದನೆ ನೀಡಿದೆ. ಕೇಂದ್ರ ಸಂಪುಟದ ಆರ್ಥಿಕ ವ್ಯವಹಾರಗಳ ಸಮಿತಿಯಲ್ಲಿ 2,539.61 ಕೋಟಿ ರೂ.ಗಳ ಬಿ.ಐ.ಎನ್.ಡಿ. ಹೆಸರಿನ ಯೋಜನೆಗೆ ಒಪ್ಪಿಗೆ ನೀಡಲಾಗಿದೆ.

# ಬೊಮ್ಮಾಯಿ ಪುಕ್ಕಲು, ನಾಯಿ - ಬೆಕ್ಕಿನ ಮರಿಗೆ ಹೋಲಿಸುವುದು ಸೂಕ್ತ

ಬೆಂಗಳೂರು, ಜ. 5- ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪುಕ್ಕಲು ಸ್ವಭಾವದವರು ಹಾಗೂ ಧೈರ್ಯ ಇಲ್ಲದವರು. ಈ ಅರ್ಥ ಬರುವ ರೀತಿಯಲ್ಲಿ ಹಳ್ಳಿ ಭಾಷೆಯಲ್ಲಿ ಅವರನ್ನು ನಾಯಿ ಮರಿ ಎಂದಿದ್ದೇನೆ ಎಂದು ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಸಿದ್ದರಾಮಯ್ಯ ಸ್ಪಷ್ಟನೆ ನೀಡಿದ್ದಾರೆ.

'ನಾಯಿ ಮರಿ' ಹೇಳಿಕೆ ಬಗ್ಗೆ ವಿವಾದ ಉಂಟಾದ ನಂತರ ಸರಣಿ ಟ್ವೀಟ್‌ಗಳ ಮೂಲಕ ಅವರು ತಮ್ಮ ನಿಲುವು ತಿಳಿಸಿದ್ದಾರೆ.

ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಎದುರು ಮಾತನಾಡುವ ಧೈರ್ಯ ಇಲ್ಲ. ಅವರನ್ನು ಹುಲಿ - ಸಿಂಹಕ್ಕೆ ಹೋಲಿಸಲಾಗುತ್ತಾ? ನಾಯಿ ಮರಿ, ಬೆಕ್ಕಿನ ಮರಿಗಳಿಗೆ ಹೋಲಿಸಬೇಕಲ್ಲಾ? ಎಂದು ಪ್ರಶ್ನಿಸಿದ್ದಾರೆ.

ಪ್ರಾಣಿ - ಪಕ್ಷಿ - ಹೂ - ಹಣ್ಣುಗಳನ್ನು ಅವುಗಳ ಸ್ವಭಾವಗಳ ಸಾಮ್ಯತೆಗೆ ಅನುಗುಣವಾಗಿ ಮನುಷ್ಯರಿಗೆ ಹೋಲಿಸುವುದು ಜನಪದ ಸಂಸ್ಕೃತಿ. ಯಾವ ಪ್ರಾಣಿ-ಪಕ್ಷಿಯೂ ಕೀಳೂ ಅಲ್ಲ, ಮೇಲೂ ಅಲ್ಲ ಎಂದವರು ತಿಳಿಸಿದ್ದಾರೆ.

ಬೇರೆಯವರ ಧಮ್, ತಾಕತ್ ಪ್ರಶ್ನಿಸುವ ಬೊಮ್ಮಾಯಿ, ಸ್ವತಃ ಮೋದಿಯವರನ್ನು ಕಂಡರೆ ಹೆದರುತ್ತಾರೆ ಎಂಬರ್ಥದಲ್ಲಿ ಮಾತನಾಡಿದ್ದೆ. ಇದನ್ನು ಅನವಶ್ಯಕವಾಗಿ ವಿವಾದ ಮಾಡಲಾಗಿದೆ ಎಂದಿದ್ದಾರೆ.

ಬೊಮ್ಮಾಯಿ ಅವರನ್ನು ವೈಯಕ್ತಿಕವಾಗಿ ನಿಂದಿಸುವ ದುರುದ್ದೇಶ ಖಂಡಿತಾ ಇರಲಿಲ್ಲ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ನಾಯಿಮರಿಗೆ ಹೋಲಿಸಿದ್ದರ ಹಿಂದೆ ಅಪಾರ್ಥ ಕಲ್ಪಿಸುವ ಅಗತ್ಯವಿಲ್ಲ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ.

ಬಸವರಾಜ ಬೊಮ್ಮಾಯಿ ಅವರು ನಮ್ಮ ಒಡನಾಟದವರು, ಅವರೇನು ಬೇಸರ ಮಾಡಿಕೊಂಡಿರಲಾರರು. ಸುತ್ತಲಿನ ವಂದಿ-ಮಾಗದರು ಅವರನ್ನು ಓಲೈಸಲಿಕ್ಕಾಗಿ ಖಂಡಿಸಿ, ಮಂಡಿಸಿ ವಿವಾದ ಮಾಡುತ್ತಿದ್ದಾರೆ. ಇಂತಹವರ ಬಗ್ಗೆ ಬೊಮ್ಮಾಯಿ ಜಾಗರೂಕವಾಗಿರುವುದು ಒಳ್ಳೆಯದು ಎಂದಿದ್ದಾರೆ.

ರಾಜ್ಯಕ್ಕೆ ಸಿಗಬೇಕಾದ ಅನುದಾನ ಸರಿಯಾದ ಪ್ರಮಾಣದಲ್ಲಿ ಸಿಕ್ಕಿಲ್ಲ, ಪೂರ್ಣ ಪ್ರಮಾಣದ ಜಿಎಸ್‌ಟಿ ಪರಿಹಾರ ಬಂದಿಲ್ಲ, ಬರ, ನೆರೆ ಪರಿಹಾರದ ಹಣ ಬಂದಿಲ್ಲ. ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರೋರು ಇದನ್ನೆಲ್ಲ ಗಟ್ಟಿ ಧ್ವನಿಯಲ್ಲಿ ಕೇಳದೆ ಹೆದರಿ ಸುಮ್ಮನಿದ್ರೆ ನಾಡಿಗೆ ಅನ್ಯಾಯವಾಗಲ್ವ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

# ಮೂಲ ಸೌಲಭ್ಯಗಳಿಗೆ ನಗರಸಭೆ ಸದಸ್ಯರ ಆಗ್ರಹ

## ಹರಿಹರ : ಬಜೆಟ್ ಪೂರ್ವಭಾವಿ ಸಭೆ



ಹರಿಹರ, ಜ. 5 - ಸಾರ್ವಜನಿಕರು ಯಾವುದೇ ಮೂಲಭೂತ ಸಮಸ್ಯೆಗಳು ಇದ್ದರೆ, ನಗರಸಭೆಯ ಪೌರಾಯುಕ್ತ ಐಗೂರು ಬಸವರಾಜ್ ಅವರ ಗಮನಕ್ಕೆ ತಂದರೆ ಬರುವ 2023-24ನೇ ಸಾಲಿನ ಬಜೆಟ್ ವೇಳೆ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲಾಗುವುದು ಎಂದು ನಗರಸಭೆ ಅಧ್ಯಕ್ಷರಾದ ಶಾಹೀನಾಬಾನು ದಾದಾಪೀರ್ ಭಾನುವಳ್ಳಿ ಹೇಳಿದರು.

ನಗರಸಭೆ ಸಭಾಂಗಣದಲ್ಲಿ 2023-24 ನೇ ಸಾಲಿನ ಬಜೆಟ್ ಪೂರ್ವಭಾವಿ ಮೊದಲ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಬಗ್ಗೆ ಸರ್ವ ಸದಸ್ಯರು, ಪೌರಾಯುಕ್ತರು ಹಾಗೂ ವಿವಿಧ ಇಲಾಖೆ ಅಧಿಕಾರಿಗಳ ಜೊತೆಗೆ ಸಮಾಲೋಚನೆ ನಡೆಸಲಾಗುವುದು. ಈ ಸಮಸ್ಯೆಗಳ ಬಗೆಹರಿಸುವ ರೀತಿಯಲ್ಲಿ 2023 - 24 ನೇ ಸಾಲಿನ ಬಜೆಟ್ ಮಂಡನೆ ಮಾಡಲಾಗುವುದು ಎಂದು ಹೇಳಿದರು.

ಪೌರಾಯುಕ್ತ ಐಗೂರು ಬಸವರಾಜ್ ಮಾತನಾಡಿ, ಇನ್ನೂ ಎರಡು ಮಹತ್ವದ ಸಭೆಗಳನ್ನು ಆಯೋಜನೆ ಮಾಡಲಾಗುವುದು. ಸಭೆಯ ವಿಚಾರಗಳ ಕುರಿತು ಶಾಸಕರ ಬಳಿ ಮತ್ತು ಎಲ್ಲಾ ಸದಸ್ಯರ ಸಮ್ಮುಖದಲ್ಲಿ ಚರ್ಚೆ ಮಾಡಿ ನಂತರದಲ್ಲಿ ಬಜೆಟ್ ಮಂಡನೆ ಮಾಡಲಾಗುತ್ತದೆ ಎಂದು ಹೇಳಿದರು.

ನಗರಸಭೆ ಉಪಾಧ್ಯಕ್ಷ ಎ. ವಾಮನಮೂರ್ತಿ ಮಾತನಾಡಿ, ಎಲ್ಲಾ ಅಧಿಕಾರಿಗಳಿಗೆ ಉತ್ತಮ ಕೆಲಸವನ್ನು ಮಾಡಬೇಕು ಎಂಬ ಆಸೆ ಇರುತ್ತದೆ. ಆದರೆ, ಆದಾಯ ಕೊರತೆಯಿಂದ ಹರಿಹರ ನಗರ ಸುಧಾರಣೆ ಸಾಧ್ಯವಾಗುತ್ತಿಲ್ಲ ಎಂದರು.

ನಗರಸಭೆ ಸದಸ್ಯ ಗುತ್ತೂರು ಜಂಬಣ್ಣ ಮಾತನಾಡಿ, ಸಮಸ್ಯೆ ಹೆಚ್ಚಾಗಿರುವ ಬಡಾವಣೆಗಳಿಗೆ ಅಧಿಕಾರಿಗಳು ಭೇಟಿ ನೀಡಿ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದರು.

ನಗರಸಭೆ ಸದಸ್ಯ ಹನುಮಂತಪ್ಪ ಮಾತನಾಡಿ, ಹಿಂದುಳಿದ ವರ್ಗಗಳ ಬಡಾವಣೆಗಳು ಅಭಿವೃದ್ಧಿ ಆಗಬೇಕು ಎಂದು ಸರ್ಕಾರ ಎಷ್ಟೆಲ್ಲ ಸೌಲಭ್ಯಗಳನ್ನು ನೀಡಿದರೂ ಸಹ ಅವುಗಳ ಸದ್ಬಳಕೆ ಸರಿಯಾದ ರೀತಿಯಲ್ಲಿ ಆಗುತ್ತಿಲ್ಲ ಎಂದರು.

ಕೈಗಾರಿಕೋದ್ಯಮಿ ಪ್ರಹ್ಲಾದ್ ಮಾತನಾಡಿ, ಕೈಗಾರಿಕಾ ಪ್ರದೇಶದಲ್ಲಿ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯ ಕಲ್ಪಿಸಬೇಕೆಂದು ಒತ್ತಾಯಿಸಿದರು.

ಆಟೋ ಚಾಲಕರ ಸಂಘದ ಅಧ್ಯಕ್ಷ ಮಹೋನ್ ಮಾತನಾಡಿ, ರಸ್ತೆ ದುರಸ್ತಿ ಮಾಡಬೇಕು. ಆಟೋ ಚಾಲಕರ ಕುಟುಂಬದವರಿಗೆ ವಸತಿ ಕಲ್ಪಿಸಬೇಕು. ನಗರಸಭೆಯಲ್ಲಿ ಲಂಚದ ಸಮಸ್ಯೆ ಬಗೆಹರಿಯಬೇಕು ಎಂದರು.

ನಿಂಗಪ್ಪ ಚಂದಾಪೂರ್ ಮಾತನಾಡಿ, ಚರಂಡಿಗೆ ಆದ್ಯತೆ ನೀಡಬೇಕು. ನೀರಿನ ಕಂದಾಯದ ಗೊಂದಲ ನಿವಾರಿಸಬೇಕು ಎಂದರು.

ನಗರಸಭೆ ಸದಸ್ಯ ಅಬ್ದುಲ್ ಅಲಿಂ ಮಾತನಾಡಿ, ಶುದ್ಧ ಘಟಕಗಳ ನಿರ್ವಹಣೆಯಾಗಬೇಕಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭೆ ಎಇಇ ವಿನಯ್ ಕುಮಾರ್, ನಗರಸಭೆ ಸದಸ್ಯರಾದ ಶಂಕರ್ ಖಟಾವ್ಕರ್, ಆರ್.ಸಿ. ಜಾವೇದ್, ಉಷಾ ಮಂಜುನಾಥ್ ಅಂಗಡಿ, ಪಕ್ಕೀರಮ್ಮ, ಎಸ್.ಎಂ. ವಸಂತ್, ಷಾಹಿನಾಬಾನು, ರತ್ನ. ಡಿ. ಉಜ್ಜೇಶ್, ಲಕ್ಷ್ಮಿ ಮೋಹನ್, ದಿನೇಶ್ ಬಾಬು, ಅಬ್ದುಲ್ ಅಲಿಂ, ಎಂ.ಎಸ್. ಬಾಬುಲಾಲ್, ಮುಖಂಡ ನಿಂಗಪ್ಪ ಚಂದಾಪೂರ್ ಮತ್ತಿತರರು ಉಪಸ್ಥಿತರಿದ್ದರು.

# ನ್ಯಾಯಮೂರ್ತಿಗಳ ನೇಮಕಕ್ಕೆ ಮಾರ್ಗಸೂಚಿ ವಿಳಂಬ

## ಸಂಸದೀಯ ಸಮಿತಿ ಅಚ್ಚರಿ

ನವದೆಹಲಿ ಜ. 5 – ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕ, ಪದೋನ್ನತಿ ಹಾಗೂ ವರ್ಗಾವಣೆಗೆ ಸಂಬಂಧಿಸಿದಂತೆ ಏಳು ವರ್ಷಗಳಾದರೂ ಮಾರ್ಗಸೂಚಿ ರೂಪಿಸದೇ ಇರುವುದಕ್ಕೆ ಸಂಸದೀಯ ಸಮಿತಿ ಅಚ್ಚರಿ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರ ಹಾಗೂ ಸುಪ್ರೀಂ ಕೋರ್ಟ್‌ಗಳು ಈ ಕುರಿತು ಮಾರ್ಗಸೂಚಿ ರೂಪಿಸಬೇಕಿತ್ತು. ಸರ್ಕಾರ ಹಾಗೂ ಸುಪ್ರೀಂ ಕೋರ್ಟ್‌ಗಳು ಇನ್ನಷ್ಟು ದಕ್ಷ ಹಾಗೂ ಪಾರದರ್ಶಕ ವ್ಯವಸ್ಥೆ ರೂಪಿಸಲಿವೆ ಎಂದು ಕಾನೂನು ಹಾಗೂ ನ್ಯಾಯ ಕುರಿತ ಸಂಸತ್ತಿನ ಸ್ಥಾಯಿ ಸಮಿತಿ ವಿಶ್ವಾಸ ವ್ಯಕ್ತಪಡಿಸಿದೆ. ಸ್ಥಾಯಿ ಸಮಿತಿಗೆ ಬಿಜೆಪಿ ಹಿರಿಯ ನಾಯಕ ಸುಶೀಲ್ ಕುಮಾರ್ ಮೋದಿ ಅಧ್ಯಕ್ಷರಾಗಿದ್ದಾರೆ.

ಕೊಲೀಜಿಯಂ ವ್ಯವಸ್ಥೆ ಬದಲಿಸಲು ರೂಪಿಸಲಾಗಿದ್ದ ರಾಷ್ಟ್ರೀಯ ನ್ಯಾಯಿಕ ನೇಮಕಾತಿ ಆಯೋಗ ಮಸೂದೆಯನ್ನು 2015ರಲ್ಲಿ ಸುಪ್ರೀಂ ಕೋರ್ಟ್ ತಳ್ಳಿ ಹಾಕಿತ್ತು.

ನೇಮಕ, ಪದೋನ್ನತಿ ಹಾಗೂ ವರ್ಗಾವಣೆ ಕುರಿತು ತನ್ನೊಂದಿಗೆ ಚರ್ಚಿಸಿ ಮಾರ್ಗಸೂಚಿ ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತಿಳಿಸಿತ್ತು. ಈ ಬಗ್ಗೆ ಸರ್ಕಾರ ಹಾಗೂ ನ್ಯಾಯಾಲಯ ಹಲವು ಬಾರಿ ಸಮಾಲೋಚನೆ ನಡೆಸಿವೆ. ಆದರೆ, ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ.

# ಹಾವೇರಿಯಲ್ಲಿ ಅಖಿಲ ಭಾರತ ಸಾಹಿತ್ಯ ಸಮ್ಮೇಳನ : ಜಿಲ್ಲಾ ಕಸಾಪದಿಂದ ಸಿದ್ಧತೆ ವೀಕ್ಷಣೆ



ದಾವಣಗೆರೆ, ಜ 5- ಹಾವೇರಿಯಲ್ಲಿ ನಾಳೆ ದಿನಾಂಕ 6, 7 ಮತ್ತು 8 ರಂದು ನಡೆಯಲಿರುವ 86 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಕ್ಷಣಗಣನೆ ಆರಂಭವಾಗಿದ್ದು, ಸಮ್ಮೇಳನದ ಸಕಲ ಸಿದ್ಧತೆಗಳು ಪೂರ್ಣಗೊಂಡಿವೆ.

ಸಮ್ಮೇಳನದ ಕನಕ - ಷರೀಫ - ಸರ್ವಜ್ಞ ಪ್ರಧಾನ ವೇದಿಕೆಯು ಅದ್ಭುತವಾಗಿ ಸಿದ್ಧಗೊಂಡಿದೆ. ಪ್ರಧಾನ ವೇದಿಕೆಯ ಮುಂಭಾಗದ ಸಭಾಂಗಣವು ಸುಮಾರು 50 ಸಾವಿರ ಜನ ಕುಳಿತುಕೊಳ್ಳಲು ಆಸನ ವ್ಯವಸ್ಥೆ ಹೊಂದಿದೆ. ಪ್ರಮುಖ ಸಭಾಂಗಣದ ಒಳಭಾಗದಲ್ಲಿ ಬೆಳಕು ಮತ್ತು ಗಾಳಿಯ ವ್ಯವಸ್ಥೆ ಸರಾಗವಾಗಿ ನಿರ್ಮಾಣಗೊಂಡಿದೆ.

ಜೊತೆಗೆ ಎರಡು ಸಮಾನಾಂತರ ವೇದಿಕೆಗಳನ್ನು ಸಿದ್ಧಪಡಿಸಲಾಗಿದ್ದು, ಒಂದೊಂದು ವೇದಿಕೆಗಳು ಸುಮಾರು 10,000 ಜನರು ಕುಳಿತುಕೊಳ್ಳಲು ಆಸನ ವ್ಯವಸ್ಥೆಯನ್ನು ಒಳಗೊಂಡಿವೆ.

ಸಮ್ಮೇಳನಕ್ಕೆ ಬರುವ ಎಲ್ಲಾ ಸಾಹಿತ್ಯ ಅಭಿಮಾನಿಗಳಿಗೆ ಶುಚಿ ರುಚಿಯಾದ ಊಟದ ವ್ಯವಸ್ಥೆಯ ತಯಾರಿಯಲ್ಲಿ ಸಾವಿರಾರು ಜನ ತೊಡಗಿಸಿಕೊಂಡಿರುವುದು ಕಂಡುಬಂತು. ಎರಡು ದೊಡ್ಡ ಪುಸ್ತಕ ಭಂಡಾರಗಳ ಮಳಿಗೆಗಳು ನಿರ್ಮಾಣಗೊಂಡಿವೆ.

ಸಮ್ಮೇಳನಕ್ಕೆ ಬರುವವರಿಗೆ ಕುಡಿಯಲು ನೀರಿನ ವ್ಯವಸ್ಥೆಯ ಕೂಡ ಚೆನ್ನಾಗಿ ಮಾಡಲಾಗಿದೆ. ಸಮ್ಮೇಳನಕ್ಕೆ ಬರುವ ವಾಹನಗಳ ನಿಲುಗಡೆಗೆ ವಿಶಾಲವಾದ ಜಾಗವನ್ನು ವ್ಯವಸ್ಥೆ ಗೊಳಿಸಲಾಗಿದೆ.

ಸಮ್ಮೇಳನದ ಈ ಎಲ್ಲಾ ಸಿದ್ಧತೆಯನ್ನು ವೀಕ್ಷಿಸಲು ಇಂದು ಸಂಜೆ ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಹಾಗೂ ಮಾಜಿ ಅಧ್ಯಕ್ಷ ಎ.ಆರ್.ಉಜ್ಜನಪ್ಪ, ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ ಹಾಗೂ ಸಂಘಟನಾ ಕಾರ್ಯದರ್ಶಿಯಾದ ಸಿ.ಜಿ.ಜಗದೀಶ್ ಕೂಲಂಬಿ ಅವರ ತಂಡ ಹಾವೇರಿಗೆ ತೆರಳಿ ಸಮ್ಮೇಳನದ ಎಲ್ಲಾ ಸಿದ್ಧತೆಗಳನ್ನು ವೀಕ್ಷಿಸಿತು.

ಈ ಸಂದರ್ಭದಲ್ಲಿ ಹಾವೇರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಲಿಂಗಯ್ಯ ಹಿರೇಮಠ ಅವರು ಸಮ್ಮೇಳನದ ಸಿದ್ಧತೆಯ ಎಲ್ಲಾ ಮಾಹಿತಿಗಳನ್ನು ಹಂಚಿಕೊಂಡರು.

ಈ ಸಂದರ್ಭದಲ್ಲಿ ಸಮ್ಮೇಳನದ ಸಿದ್ಧತೆಯಲ್ಲಿ ತೊಡಗಿಸಿಕೊಂಡಿದ್ದ ಹಾವೇರಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ದಾವಣಗೆರೆ ಜಿಲ್ಲಾ ಕಸಾಪ ತಂಡ ಭೇಟಿ ಮಾಡಿ ಸಿದ್ಧತೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಅವರನ್ನು ಅಭಿನಂದಿಸಿತು.

# ಹರಿಹರ: ವೇದ ಚಿತ್ರ ಪ್ರಚಾರದಲ್ಲಿ ಶಿವಣ್ಣ



ಹರಿಹರ, ಜ. 5 – ಪ್ರಕೃತಿ ಹಾಗೂ ನಾಡಿನ ಸೌಂದರ್ಯವನ್ನು ಪ್ರೇಕ್ಷಕರಿಗೆ ಉಣಬಡಿಸುವಂತಹ ಮತ್ತು ಕುಟುಂಬದ ಸದಸ್ಯರೊಂದಿಗೆ ನೋಡುವ ವಿಭಿನ್ನ ರೀತಿಯಲ್ಲಿ 'ವೇದ' ಚಲನಚಿತ್ರ ಮೂಡಿ ಬಂದಿದೆ ಎಂದು ಖ್ಯಾತ ಚಲನಚಿತ್ರ ನಟ ಶಿವರಾಜ್ ಕುಮಾರ್ ಹೇಳಿದರು.

ನಗರದ ಜಯಶ್ರೀ ಟಾಕೀಸ್‌ಗೆ ವೇದ ಚಲನಚಿತ್ರ ಪ್ರಚಾರದ ಅಂಗವಾಗಿ ಆಗಮಿಸಿದ ವೇಳೆ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಕುಟುಂಬಕ್ಕೆ ಹತ್ತಿರ ಇರುವಂತಹ ವಿಚಾರಗಳನ್ನು ಈ ಚಲನಚಿತ್ರದಲ್ಲಿ ಸಾರ್ವಜನಿಕರಿಗೆ ಉಣಬಡಿಸಲಾಗಿದೆ. ಸಾರ್ವಜನಿಕರು ಯಾವುದೇ ರೀತಿಯ ಮನಸ್ಸಿನಲ್ಲಿ ಆತಂಕವನ್ನು ಇಟ್ಟುಕೊಳ್ಳದೆ ಟಾಕೀಸ್‌ಗೆ ಬರಬೇಕೆಂದು ಅವರು ಕರೆ ನೀಡಿದರು.

ದೇಶದ ಅನೇಕ ರಾಜ್ಯಗಳಲ್ಲೂ ಸಹ ಈ ಚಲನಚಿತ್ರಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ. ತೆಲುಗು, ತಮಿಳು ಭಾಷೆಯಲ್ಲಿ ಚಲನಚಿತ್ರ ನಿರ್ಮಾಣ ಮಾಡಲಾಗಿದ್ದು ಇನ್ನೂ ಕೆಲವೇ ದಿನಗಳಲ್ಲಿ ಚಲನಚಿತ್ರ ಬಿಡುಗಡೆ ಆಗಲಿದೆ ಎಂದರು.

ಈ ವೇಳೆ ಶಾಸಕ ಎಸ್. ರಾಮಪ್ಪ, ನಗರಸಭೆ ಅಧ್ಯಕ್ಷೆ ಶಾಹೀನಾಬಾನು ದಾದಾಪೀರ್, ಕಾಂಗ್ರೆಸ್ ಮುಖಂಡ ನಂದಿಗಾವಿ ಶ್ರೀನಿವಾಸ್, ಶಿವರಾಜ್ ಕುಮಾರ್ ಅಭಿಮಾನಿಗಳ ಬಳಗದ ಜಿಲ್ಲಾ ಗೌರವ ಅಧ್ಯಕ್ಷ ಬಿ. ವಾಸುದೇವ್ ಅವರು ಶಿವರಾಜ್ ಕುಮಾರ್ ರವರಿಗೆ ಶಾಲು, ಹಾರ ಹಾಕಿ ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಶಿವರಾಜ್ ಕುಮಾರ್ ಪತ್ನಿ ಗೀತಾ, ಜಯಶ್ರೀ ಟಾಕೀಸ್ ಮಾಲೀಕರಾದ ಹೆಚ್. ಸಂಜಯ್, ಸುಜಯ್ , ಜಯಶ್ರೀ ಟಾಕೀಸ್ ಗುತ್ತಿಗೆದಾರ ಮಂಜುನಾಥ್, ಪ್ರಕಾಶ್, ಭಾಗ್ಯದೇವಿ, ನಾಗಮ್ಮ, ನೇತ್ರಾವತಿ ಪ್ಯಾಟಿ, ವಿದ್ಯಾ, ಕನ್ನಡ ಪರ ಸಂಘಟನೆಯ ಮುಖಂಡರು ಹಾಗು ಇತರರು ಹಾಜರಿದ್ದರು.

ಶಿವರಾಜ್ ಕುಮಾರ್ ಆಗಮಿಸುತ್ತಿದ್ದಂತೆ, ಅಭಿಮಾನಿಗಳ ದಂಡನ್ನು ನಿಯಂತ್ರಿಸುವ ಸಲುವಾಗಿ ಪೊಲೀಸ್ ಸಿಬ್ಬಂದಿ ಹರ ಸಾಹಸ ಪಟ್ಟರು.

# ಹರಿಹರದಲ್ಲಿ ದೊಡ್ಡರಂಗೇಗೌಡರಿಗೆ ಸನ್ಮಾನ



ಹರಿಹರ, ಜ. 5 – ಹಾವೇರಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇನದ ಸಮ್ಮೇಳನಾಧ್ಯಕ್ಷರಾದ ಡಾ. ದೊಡ್ಡರಂಗೇಗೌಡರಿಗೆ ಹರಿಹರದಲ್ಲಿ ಸನ್ಮಾನಿಸಲಾಯಿತು. ಸಮ್ಮೇಳನಕ್ಕೆ ತೆರಳುವ ಮಾರ್ಗದಲ್ಲಿ ಅವರು ಹರಿಹರಕ್ಕೆ ಆಗಮಿಸಿದ್ದರು. ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ತಹಶೀಲ್ದಾರ್ ಕಚೇರಿಯ ಮುಂಭಾಗದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಗೌರವ ಕಾರ್ಯದರ್ಶಿಗಳಾದ ಬಿ.ಬಿ. ರೇವಣನಾಯ್ಕ್, ಎಂ. ಚಿದಾನಂದ ಕಂಚಿಕೇರಿ, ಜಿಲ್ಲಾ ಗೌರವ ಕಾರ್ಯದರ್ಶಿ ರೇವಣಸಿದ್ದಪ್ಪ ಅಂಗಡಿ, ಜಿಲ್ಲಾ ಸದಸ್ಯ ಎ. ರಿಯಾಜ್ ಆಹ್ಮದ್, ತಾಲ್ಲೂಕು ಸದಸ್ಯ ತಿಪ್ಪಣ್ಣರಾಜ್, ಈಶಪ್ಪ ಬೂದಿಹಾಳ, ಶೇಖರಗೌಡ ಪಾಟೀಲ್, ಹೆಚ್.ಸಿ. ಕೀರ್ತಿ ಕುಮಾರ್, ಜೆ.ಕೆ. ಪಂಚಾಕ್ಷರಿ, ಹೆಚ್. ಸುಧಾಕರ, ಆರ್.ಮಂಜುನಾಥ್, ದಾದಾಪೀರ್ ಭಾನುವಳ್ಳಿ, ಬಹುಜನ ಸಮಾಜ ಪಕ್ಷದ ಹೆಚ್. ಮಲ್ಲೇಶ್, ಬಿ.ಎನ್. ರಮೇಶ್ ಉಪಸ್ಥಿತರಿದ್ದರು.

# ಭಾರತದಲ್ಲಿ ಕ್ಯಾಂಪಸ್ ತೆರೆಯಲು ಅನುಮತಿ

**(1ನೇ ಪುಟದಿಂದ)** ಅನುಮತಿ ನೀಡಲಾಗುತ್ತಿದೆ. ಜಾಗತಿಕವಾಗಿ ಉನ್ನತ ಶ್ರೇಯಾಂಕ ಹೊಂದಿರುವ ವಿಶ್ವವಿದ್ಯಾಲಯಗಳು ಕ್ಯಾಂಪಸ್ ತೆರೆಯಲು ಅನುಮತಿ ನೀಡಲಾಗುವುದು. ಈ ವಿಶ್ವವಿದ್ಯಾಲಯಗಳ ಮೂಲಕ ಭಾರತದ ವಿದ್ಯಾರ್ಥಿಗಳು ವಿದೇಶ ಗುಣಮಟ್ಟದ ಕಲಿಕೆಯನ್ನು ಕಡಿಮೆ ವೆಚ್ಚದಲ್ಲಿ ಪಡೆಯಲು ಸಾಧ್ಯವಾಗಲಿದೆ. ಭಾರತ ಜಾಗತಿಕ ಅಧ್ಯಯನ ಕೇಂದ್ರವೂ ಆಗಲಿದೆ ಎಂದು ಕುಮಾರ್ ತಿಳಿಸಿದ್ದಾರೆ.

ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆಯ ಅನ್ವಯ ಈ ಕ್ಯಾಂಪಸ್‌ಗಳ ಹೂಡಿಕೆ ವರ್ಗಾವಣೆಗೆ ಅವಕಾಶ ಇರಲಿದೆ ಎಂದೂ ಅವರು ಹೇಳಿದ್ದಾರೆ.

ಜಾಗತಿಕ ಶ್ರೇಯಾಂಕದಲ್ಲಿ ಮೊದಲ 500 ಸ್ಥಾನಗಳಲ್ಲಿರುವ ವಿಶ್ವವಿದ್ಯಾಲಯಗಳು, ವಿಷಯವಾರು ಜಾಗತಿಕ ಶ್ರೇಯಾಂಕ ಹೊಂದಿರುವ ವಿಶ್ವವಿದ್ಯಾಲಯಗಳು ಹಾಗೂ ಸ್ವದೇಶದಲ್ಲಿ ಪ್ರತಿಷ್ಠಿತವಾಗಿರುವ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್ ತೆರೆಯಬಹುದು.

ಕ್ಯಾಂಪಸ್‌ಗಳ ಆರಂಭ ಹಾಗೂ ಕಾರ್ಯನಿರ್ವಹಣೆ ಕುರಿತು ಪರಿಶೀಲಿಸಲು ಸ್ಥಾಯಿ ಸಮಿತಿಯೊಂದನ್ನು ರಚಿಸಲಾಗುವುದು ಎಂದವರು ಹೇಳಿದರು.

# ರೆಡ್ಡಿ ಆಸ್ತಿ ಮುಟ್ಟುಗೋಲಿಗೆ ಅರ್ಜಿ

**(1ನೇ ಪುಟದಿಂದ)** ನೀಡುವಂತೆ 2022ರ ಆಗಸ್ಟ್ 30ರಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಮನವಿ ಮಾಡಲಾಗಿತ್ತು. ಈ ಮನವಿಯನ್ನು ಶೀಘ್ರದಲ್ಲಿ ಪರಿಗಣಿಸಲು ಸೂಚನೆ ನೀಡಬೇಕು ಎಂದು ಸಿಬಿಐ ತನ್ನ ಅರ್ಜಿಯಲ್ಲಿ ಕೋರಿದೆ.

ಸುಮಾರು 19.14 ಕೋಟಿ ಮೌಲ್ಯದ ಆಸ್ತಿಗಳನ್ನು ಅಕ್ರಮ ಎಂದು ಗುರುತಿಸಲಾಗಿದೆ. ಈ ಆಸ್ತಿಗಳನ್ನು ಮಾರಾಟ ಮಾಡುವುದಕ್ಕಾಗಿ ಮಾಜಿ ಸಚಿವ ಗಾಲಿ ಜನಾರ್ದನ ರೆಡ್ಡಿ ಸಾಕಷ್ಟು ಪ್ರಯತ್ನ ಮಾಡುತ್ತಿದ್ದಾರೆ.

ಆದರೆ, ರಾಜ್ಯ ಸರ್ಕಾರ ನಮ್ಮ ಮನವಿಯನ್ನು ಕಾರ್ಯಗತಗೊಳಿಸುವಲ್ಲಿ ವಿಫಲವಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದೆ. ಅಲ್ಲದೆ, ಈ ರೀತಿಯ ಆಸ್ತಿಗಳನ್ನು ಪರಭಾರೆಮಾಡಿದಲ್ಲಿನೋಂದಾಯಿಸದಂತೆ ತೆಲಂಗಾಣ ಮತ್ತು ಆಂಧ್ರಪ್ರದೇಶದ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದೆ.

ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಓಬಳಾಪುರಂ ಮೈನಿಂಗ್ ಕಂಪನಿ ಮತ್ತು ಅದರ ಸಹಭಾಗಿತ್ವದ ಮೈನಿಂಗ್ ಕಂಪನಿಗಳ ವಿರುದ್ಧ ತನಿಖೆ ನಡೆಸಲಾಗಿದೆ. ಈ ಸಂದರ್ಭದಲ್ಲಿ ಅಕ್ರಮ ಗಣಿಗಾರಿಕೆ ಮತ್ತು ಕಬ್ಬಿಣದ ಅದಿರು ಸಾಗಣೆ ಮಾಡಿದ ಆರೋಪದಲ್ಲಿ ರಾಜ್ಯ ಸರ್ಕಾರದ ಬೊಕ್ಕಸಕ್ಕೆ 198 ಕೋಟಿ ನಷ್ಟವುಂಟಾಗಿದೆ ಎಂದು ರೆಡ್ಡಿ ವಿರುದ್ಧ 2013ರಲ್ಲಿ ಆರೋಪ ಪಟ್ಟಿ ದಾಖಲಿಸಲಾಗಿದೆ.

ರೆಡ್ಡಿಗೆ ಸೇರಿದ್ದ ಸುಮಾರು 65.05 ಕೋಟಿ ರೂ.ಗಳ ಮೌಲ್ಯದ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವಂತೆ, 2015ರಲ್ಲಿ ರಾಜ್ಯ ಸರ್ಕಾರಕ್ಕೆ ಮನವಿ ಮಾಡಲಾಗಿತ್ತು. 2016ರಲ್ಲಿ ರಾಜ್ಯ ಸರ್ಕಾರ ಮನವಿಗೆ ಅನುಮೋದನೆ ನೀಡಿದೆ.

ಇದರ ಆಧಾರದಲ್ಲಿ ಸಿಬಿಐ ಅಧಿಕಾರಿಗಳು ವಿಶೇಷ ನ್ಯಾಯಾಲಯಕ್ಕೆ ಮನವಿ ಮಾಡಿದ್ದು, ಈ ಅರ್ಜಿ ವಿಚಾರಣಾ ಹಂತದಲ್ಲಿದೆ ಎಂದು ಸಿಬಿಐ ಸಲ್ಲಿಸಿರುವ ಅರ್ಜಿಯಲ್ಲಿ ಉಲ್ಲೇಖಿಸಿದೆ.

ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಜನಾರ್ದನ ರೆಡ್ಡಿ ಮತ್ತವರ ಕುಟುಂಬಸ್ಥರಿಗೆ ಸೇರಿದ 200ಕ್ಕೂ ಹೆಚ್ಚು ಆಸ್ತಿಗಳನ್ನು ಗುರುತಿಸಲಾಗಿದೆ. ಜನಾರ್ದನ ರೆಡ್ಡಿ ಅವರ ಕುಟುಂಬಸ್ಥರಿಗೆ ಸೇರಿದ ಹೆಚ್ಚುವರಿ ಆಸ್ತಿಗಳನ್ನು ಪತ್ತೆ ಹಚ್ಚುವ ಕಾರ್ಯ ಮುಂದುವರೆದಿದೆ.

ಹೀಗಾಗಿ ಈ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ವಿಶೇಷ ನ್ಯಾಯಾಲಯಕ್ಕೆಮನವಿ ಮಾಡಬೇಕಾಗಿದೆ. ಕಳೆದ ಆಗಸ್ಟ್‌ನಲ್ಲಿ ಸಲ್ಲಿಸಿರುವ ಮನವಿಯನ್ನು ಪರಿಗಣಿಸಬೇಕು ಮತ್ತು ನಿರ್ದೇಶಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

# ಜಿಲ್ಲೆಯಲ್ಲೀಗ 14 ಲಕ್ಷ ಮತದಾರರು

**(1ನೇ ಪುಟದಿಂದ)** ಸಾವಿರ ಪುರುಷ ಮತದಾರರಿಗೆ 993 ಮಹಿಳಾ ಮತದಾರರಿದ್ದಾರೆ ಎಂದವರು ಹೇಳಿದರು.

**ತಿದ್ದುಪಡಿಗಿದೆ ಅವಕಾಶ :** 2023ರ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕಕ್ಕೆ 10 ದಿನದ ಮುಂಚಿನವರೆಗೂ ತಿದ್ದುಪಡಿ ಹಾಗೂ ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಹೇಳಿದರು.

**ಯುವ ಸೇರ್ಪಡೆಯೇ ಹೆಚ್ಚು :** ಪರಿಷ್ಕರಣೆ ವೇಳೆ ಸೇರ್ಪಡೆಯಾದವರಲ್ಲಿ ಯುವ ಮತದಾರರೇ ಹೆಚ್ಚಾಗಿದ್ದಾರೆ. 18 ಹಾಗೂ 19 ವರ್ಷದ 13,973 ಮತದಾರರು ಸೇರ್ಪಡೆಯಾಗಿದ್ದಾರೆ. ಈ ವಯೋಮಾನದ ಮತದಾರರ ಸಂಖ್ಯೆ ಜಿಲ್ಲೆಯಲ್ಲೀಗ 23,139.

**ಶೇ.74.3ರ ಆಧಾರ್ ಜೋಡಣೆ :** ಇದುವರೆಗೂ 10.44 ಲಕ್ಷ ಮತದಾರರ ಮಾಹಿತಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿದೆ. ಇದು ಒಟ್ಟು ಮತದಾರರ ಶೇ.74.3ರಷ್ಟಾಗಿದೆ.

**ಯುವ ಸೇರ್ಪಡೆ ಅಭಿಯಾನ :** 18 ವರ್ಷ ತುಂಬಲಿರುವ ಯುವ ಮತದಾರರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಶುಕ್ರವಾರದಿಂದ ಅಭಿಯಾನ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಕಾಪಶಿ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಚುನಾವಣಾ ಸಮನ್ವಯ ಅಧಿಕಾರಿ ರೇಷ್ಮ ಹಾನಗಲ್ ಉಪಸ್ಥಿತರಿದ್ದರು.

# ವಿಧಾನಸೌಧದಲ್ಲಿ ಅನಧಿಕೃತವಾಗಿ ಸಾಗಿಸುತ್ತಿದ್ದ 10.50 ಲಕ್ಷ ವಶ

## ಮಂಡ್ಯದ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ಬಳಿ ಇದ್ದ ಹಣ

ಬೆಂಗಳೂರು, ಜ. 5 - ವಿಧಾನಸೌಧದಲ್ಲಿ ಅನಧಿಕೃತವಾಗಿ ಸಾಗಾಟ ಮಾಡುತ್ತಿದ್ದ ಸುಮಾರು 10.50 ಲಕ್ಷ ರೂ.ಗಳನ್ನು ಪೊಲೀಸರು ವಶಕ್ಕೆ ಪಡೆದಿರುವ ಘಟನೆ ಬುಧವಾರ ಸಂಜೆ ನಡೆದಿದೆ.

ಬುಧವಾರ ಸಂಜೆ ಸುಮಾರು 7 ಗಂಟೆ ವೇಳೆಗೆ ವಿಧಾನಸೌಧದ ಪಶ್ಚಿಮ ದ್ವಾರದ ಮೂಲಕ ಲೋಕೋಪಯೋಗಿ ಇಲಾಖೆಯ ಸಹಾಯಕ ಇಂಜಿನಿಯರ್ ಒಬ್ಬ ಅನಧಿಕೃತವಾಗಿ ಹಣ ಸಾಗಾಟ ಮಾಡುತ್ತಿದ್ದ. ಗೇಟ್‌ನಲ್ಲಿ ಪೊಲೀಸರು ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಮಂಡ್ಯ ಮೂಲದ ಈ ವ್ಯಕ್ತಿಯಿಂದ ಬ್ಯಾಗ್‌ನಲ್ಲಿ ದೊಡ್ಡ ಮೊತ್ತದ ಹಣ ಇರುವುದು ಪತ್ತೆಯಾಗಿದೆ.

ವ್ಯಕ್ತಿಯ ಬಳಿ ಹಣದ ಮೂಲದ ಕುರಿತಾಗಿ ಪೊಲೀಸರು ಪ್ರಶ್ನಿಸಿದಾಗ ಯಾವುದೇ ಸ್ಪಷ್ಟವಾದ ಮಾಹಿತಿಯನ್ನು ಆತ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಪೊಲೀಸರು ಹಣವನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಎಫ್‌ಐಆರ್ ಕೂಡಾ ದಾಖಲಾಗಿದೆ.

ಹಣ ಸಾಗಾಟ ಮಾಡುತ್ತಿದ್ದ ವ್ಯಕ್ತಿಯನ್ನು ವಿಧಾನಸೌಧ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ. ಆದರೆ ಈ ವ್ಯಕ್ತಿ ಇಷ್ಟು ಮೊತ್ತದ ಹಣವನ್ನು ವಿಧಾನಸೌಧಕ್ಕೆ ಏಕೆ ತೆಗೆದುಕೊಂಡು ಹೋಗುತ್ತಿದ್ದ ಎಂಬುದು ಇನ್ನೂ ದೃಢಪಟ್ಟಿಲ್ಲ. ಹಣದ ಮೂಲದ ಬಗ್ಗೆಯೂ ಯಾವುದೇ ಮಾಹಿತಿ ಲಭ್ಯವಾಗಿಲ್ಲ.

ಈ ಬಗ್ಗೆ ಮಾಹಿತಿ ನೀಡಿರುವ ಪೊಲೀಸರು, ಮಂಡ್ಯ ಮೂಲದ ಪಿಡಬ್ಲ್ಯೂಡಿ ಕಿರಿಯ ಎಂಜಿನಿಯರ್ ಜಗದೀಶ್ ಎಂಬುವರು ವಿಧಾನಸೌಧದಲ್ಲಿ ಅನಧಿಕೃತ ಹಣ ಸಾಗಾಟ ಮಾಡುತ್ತಿದ್ದುದು ಕಂಡುಬಂದಿದೆ. ಜಗದೀಶ್ ಹಣದೊಂದಿಗೆ ಮಂಡ್ಯಕ್ಕೆ ತೆರಳಬೇಕಿತ್ತು.

ಅದಕ್ಕೂ ಮುನ್ನ ವಿಧಾನಸೌಧಕ್ಕೆ ಹಣ ಸಮೇತ ಒಳ ಹೋಗಲು ಬಂದಿದ್ದಾರೆ. ಈ ವೇಳೆ ಭದ್ರತಾ ಸಿಬ್ಬಂದಿ ಚೆಕ್ ಮಾಡಿದ್ದು, ಸೂಕ್ತ ದಾಖಲಾತಿ ತೋರಿಸದ ಹಿನ್ನೆಲೆಯಲ್ಲಿ ಹಣವನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಜಗದೀಶ್‌ನನ್ನು ವಿಚಾರಣೆಗೆ ಒಳಪಡಿಸಲಾಗಿದೆ ಎಂದಿದ್ದಾರೆ.

ಇಷ್ಟು ದೊಡ್ಡ ಮೊತ್ತವನ್ನು ವಿಧಾನಸೌಧಕ್ಕೆ ತಂದಿದ್ದ ಉದ್ದೇಶ ಏನು? ಯಾರಿಗೆ ನೀಡಲು ಹಣವನ್ನು ತಂದಿದ್ದ ಎಂಬುವುದು ಸ್ಪಷ್ಟವಾಗಿಲ್ಲ. ಸದ್ಯ ಪೊಲೀಸರು ಪ್ರಕರಣವನ್ನು ಎನ್‌ಸಿಆರ್ ಮಾಡಿದ್ದು, ಕೋರ್ಟ್‌ಗೆ ಹಣ ಜಮಾವಣೆ ಮಾಡಿ ತನಿಖೆ ಪ್ರಾರಂಭಿಸಿದ್ದಾರೆ. ಯಾವ ವಿಚಾರಕ್ಕೆ ಹಣ ತಂದಿದ್ದ, ಯಾರಿಗೆ ಹಣ ತಲುಪಿಸಲಾಗುತ್ತಿತ್ತು ಎಂಬುದರ ಬಗ್ಗೆ ತನಿಖೆಯನ್ನು ಪೊಲೀಸರು ನಡೆಸುತ್ತಿದ್ದಾರೆ.

# ಮುಂದಿನ ವರ್ಷ ಮಂಗಳೂರು - ಚೆನ್ನೈ ಎಕ್ಸ್‌ಪ್ರೆಸ್‌ವೇ ಸಿದ್ಧ

ಬೆಂಗಳೂರು, ಜ. 5 – ಮಂಗಳೂರು - ಚೆನ್ನೈ ಎಕ್ಸ್‌ಪ್ರೆಸ್‌ವೇ ಮುಂದಿನ ವರ್ಷ ಸಿದ್ಧವಾಗಲಿದೆ ಎಂದು ಕೇಂದ್ರ ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

17 ಸಾವಿರ ಕೋಟಿ ರೂ. ವೆಚ್ಚದಲ್ಲಿ ಬೆಂಗಳೂರು - ಚೆನ್ನೈ ಎಕ್ಸ್‌ಪ್ರೆಸ್‌ವೇ ನಿರ್ಮಿಸಲಾಗುತ್ತಿದೆ. ಮಾರ್ಚ್ 2024ಕ್ಕೆ ಇದು ಸಿದ್ಧವಾಗಲಿದೆ ಎಂದು ಗಡ್ಕರಿ ತಿಳಿಸಿದ್ದಾರೆ. ಬರುವ ಫೆಬ್ರವರಿ ಒಳಗೆ ಬೆಂಗಳೂರು - ಮೈಸೂರು ಹೆದ್ದಾರಿ ಯೋಜನೆ ಪೂರ್ಣಗೊಳ್ಳಲಿದೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ಇಲ್ಲವೇ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಉದ್ಘಾಟನೆಗೆ ಆಹ್ವಾನಿಸಲಾಗುವುದು ಎಂದವರು ಹೇಳಿದ್ದಾರೆ.

# ರಾಜ್ಯದಲ್ಲಿ 5.05 ಕೋಟಿ ಮತದಾರರು

**(1ನೇ ಪುಟದಿಂದ)** ಮನೋಜ್‌ಕುಮಾರ್ ಮೀನಾ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದು 221 ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪರಿಷ್ಕೃತ ಪಟ್ಟಿಯಾಗಿದ್ದು, ಉಳಿದಿರುವ ಮೂರು ವಿಧಾನಸಭಾ ಕ್ಷೇತ್ರಗಳ ಪಟ್ಟಿ ಜ.15ರ ನಂತರ ಪ್ರಾದೇಶಿಕ ಆಯುಕ್ತರ ವರದಿ ಬಂದ ನಂತರ ಪ್ರಕಟಿಸುವುದಾಗಿ ಹೇಳಿದರು.

ಮಹದೇವಪುರ, ಶಿವಾಜಿನಗರ ಮತ್ತು ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರಗಳಲ್ಲಿ ಮತದಾರರ ಹೆಸರನ್ನು ಪಟ್ಟಿಯಿಂದ ಕೈ ಬಿಡಲಾಗಿದೆ ಎಂಬ ಆರೋಪ ಕೇಳಿ ಬಂದಿತ್ತು.

ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಆಯುಕ್ತರಿಂದ ತನಿಖೆ ನಡೆಸಿ, ಒಂದು ವೇಳೆ ದುರುದ್ದೇಶ ಪೂರ್ವಕವಾಗಿ ಹೆಸರುಗಳನ್ನು ಕೈ ಬಿಟ್ಟಿದ್ದರೆ ಸೇರ್ಪಡೆ ಮಾಡಬೇಕೆಂದು ಸೂಚಿಸಲಾಗಿದೆ. ವರದಿ ಬಂದ ನಂತರ ಈ ಮೂರೂ ಕ್ಷೇತ್ರಗಳ ಪಟ್ಟಿಯನ್ನು ಪ್ರಕಟಿಸುವುದಾಗಿ ವಿವರಿಸಿದರು.

ಇಂದು ಜಿಲ್ಲಾಕಾರಿಗಳು, ಸಹಾಯಕ ಚುನಾವಣಾಕಾರಿಗಳು, ಚುನಾವಣಾ ನೋಂದಣಿ ಅಧಿಕಾರಿಗಳ ಜತೆ ಸಭೆ ನಡೆಸಿ ಮತದಾರರ ಪಟ್ಟಿ ಪ್ರಕಟಿಸಲು ಸೂಚನೆ ನೀಡಲಾಗಿದೆ.

ಒಂದು ವೇಳೆ ಯಾವುದೇ ಒಬ್ಬ ವ್ಯಕ್ತಿಯ ಹೆಸರು ಬಿಟ್ಟು ಹೋಗಿದ್ದರೆ ತಕ್ಷಣವೇ ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಸೇರ್ಪಡೆ ಮಾಡಿಕೊಳ್ಳಬಹುದು. ನಿಜವಾದ ಮತದಾರರು ಮತದಾನದ ಹಕ್ಕು ಕಳೆದುಕೊಳ್ಳಬಾರದು ಎಂದು ಮನೋಜ್‌ಕುಮಾರ್ ಮೀನಾ ಮನವಿ ಮಾಡಿದ್ದಾರೆ.

221 ಕ್ಷೇತ್ರಗಳ ಪೈಕಿ ಹೆಚ್ಚುವರಿಯಾಗಿ 5,80,531 ಪುರುಷರ ಮತಗಳನ್ನು ಸೇರ್ಪಡೆ ಮಾಡಲಾಯಿತು. ಇದರಲ್ಲಿ 3,07,174 ಹೆಸರುಗಳನ್ನು ತೆಗೆದು (ಡಿಲೀಟ್) ಹಾಕಲಾಗಿದೆ. ಮಹಿಳಾ ಮತದಾರರಲ್ಲಿ 6,50,667 ಹೆಸರುಗಳು ಸೇರ್ಪಡೆಯಾಗಿದ್ದವು, 3,11,748 ಮತಗಳನ್ನು ತೆಗೆದು ಹಾಕಲಾಗಿದೆ ಎಂದರು.

342 ತೃತೀಯ ಲಿಂಗಿ ಮತಗಳು ಸೇರ್ಪಡೆಯಾಗಿದ್ದವು. 43 ಹೆಸರುಗಳನ್ನು ಕೈ ಬಿಡಲಾಗಿದೆ. ಒಟ್ಟು ಹೊಸದಾಗಿ 26,38,990 ಮತಗಳು ಸೇರ್ಪಡೆಯಾಗಿವೆ ಎಂದು ಅವರು ವಿವರಿಸಿದರು.

2,62,854 ಮತದಾರರು ಮೃತಪಟ್ಟಿದ್ದರೆ, 3,27,488 ಮತದಾರರನ್ನು ವರ್ಗಾವಣೆ ಮಾಡಲಾಗಿದೆ. 24,137 ಪುನರಾವರ್ತಿತರಾಗಿದ್ದರು.

2023ರ ಚುನಾವಣೆಯಲ್ಲಿ 3,88,064 ಪುರುಷರು, 3,13,040 ಮಹಿಳೆಯರು, 139 ತೃತೀಯ ಲಿಂಗಿಗಳು ಸೇರಿದಂತೆ ಒಟ್ಟು 7,01,243 ಯುವ ಮತದಾರರು ಸೇರ್ಪಡೆಯಾಗಿದ್ದಾರೆ.

2011ರಲ್ಲಿ ಲಿಂಗಾನುಪಾತ 973 ಇದ್ದರೆ, ಈ ಬಾರಿ 988ಕ್ಕೆ ಏರಿಕೆಯಾಗಿದೆ. ಲೈಂಗಿಕ ಕಾರ್ಯಕರ್ತೆಯರು 1,00,834, ಬುಡಕಟ್ಟು ವಾಸಿಗಳು 30,517, ವಿಶೇಷಚೇತನರು 5,09,553 ಹಾಗೂ ತೃತೀಯ ಲಿಂಗಿಗಳು 41,317 ಸೇರಿದ್ದಾರೆ.


**IN THE COURT OF HON'BLE II ADDL. DISTRICT AND SESSIONS JUDGE AT DAVANAGERE.**

P & SC NO. 50/2022

**Petitioner :** **1.** SRI. Gangadharaiah.B.M. S/o Late. Gurusiddiah, Age 45 yrs, R/o Bussenahalli Village Channagiri Taluk, Davanagere District. **2.** SMT. Chaithra. G. W/o Prabhu D/o Late. Gurusiddiah, Age 29 Yrs R/o # 280/2, Post office road, Sanyasikodamagge, Shivamogga- 577243 - V/s - **Respondents :** Nil

**CITATION**

Whereas the petitioners have filed the above petition for issue of probate certificate in respect of the will dated: 02.09.1998 executed by the deceased Nanjaiah S/o Basaiah in respect of the schedule properties.

Now the above petition is posted to P.P. ON 2-2-2023 If Anyone having any sort of claim or objections for issue of the Probate certificate in favour of the petitioners may appear on 2-2-2023 at 11.00 AM either personally or through an advocate and contest the petition, failing which all further proceedings will take place in accordance with law.

**SCHEDULE**

**ITEM NO.1 :** The land bearing Sy. No. 10/1B measuring 00 Acres 0.13 Guntas Situated at Bussenahalli village, Kasaba hobli, Channagiri taluk, Davanagere district and it is bounded by:-
East - Land of Gurusiddiah, West - Land of Shivaiah
North - Land of Ajjihalli Basappa, South - Land of Shanmukhappa

**ITEM NO. 2 :** The land bearing Sy. No. 8/1 measuring 00 Acres 15 Guntas Situated at Bussenahalli village, Kasaba hobli, Channagiri taluk, Davanagere district and it is bounded by:-
East - Land of Shivaiah, West - Land of Gurusiddiah
North - Land of Mahadevappa, South - Land of Gurumurthappa

**ITEM NO. 3 :** The property bearing Panchayath Assessment No.137/A, within the limits of Mudigere Grama Panchayath, Channagiri taluk and Davanagere district measuring 2½ Ankana red tiled house and back side garden and front side vacant land and it is bounded by:-
East - Property of Gurusiddiah, West - Property of Neetigere Veerappa, North - House of Jayanna, South - Panchayath Road

Given under My hand and seal on 4th Day of January 2023 at Davanagere.

**K.B.Shivakumar**
**Advocate for Petitioner**
Date: 03.01.2023
Place: Davanagere

**By order of the Court**
**Chief Administrative Officer**
**Pri. District and Sessions Judge**
**Davanagere.**

# ಕರ್ನಾಟಕ ರಾಜ್ಯ ಲಾಟರಿ ಪುನರಾರಂಭಕ್ಕೆ ಒತ್ತಾಯ


ಸಾಂದರ್ಭಿಕ ಚಿತ್ರ

ಬೆಂಗಳೂರು, ಜ.5- ಪ್ರಸಕ್ತ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯ ಲಾಟರಿ ಯೋಜನೆಯನ್ನು ಜಾರಿಗೆ ತರುವಂತೆ ಲಾಟರಿ ಚಿಲ್ಲರೆ ಮಾರಾಟಗಾರರ ರಾಜ್ಯ ಸಂಘವು ಸರ್ಕಾರವನ್ನು ಒತ್ತಾಯಿಸಿದೆ. ರಾಜ್ಯದಲ್ಲಿ ಕಳೆದ 2007 ರಿಂದ ಲಾಟರಿ ನಿಷೇಧವಿದ್ದರೂ ಅಕ್ರಮವಾಗಿ ಆನ್‌ಲೈನ್ ಲಾಟರಿಗಳು ನಡೆಯುತ್ತಿವೆ. ಇದರಿಂದ ಕರ್ನಾಟಕಕ್ಕೆ ವಾರ್ಷಿಕ 6000 ಕೋಟಿ ರೂ.ಗಳ ಆದಾಯ ನಷ್ಟವಾಗು ತ್ತಿದೆ. ನೆರೆಯ ಕೇರಳ ರಾಜ್ಯ ಸರ್ಕಾರವು ಲಾಟರಿ ಯೋಜ ನೆಯನ್ನು ಪರಿಣಾಮಕಾರಿ ಯಾಗಿ ನಿರ್ವಹಿಸುತ್ತಾ ವಾರ್ಷಿಕ 6 ರಿಂದ 7 ಸಾವಿರ ಕೋಟಿ ರೂ ಲಾಭ ಮಾಡುತ್ತಿದೆ ಎಂದು ಸಂಘದ ಅಧ್ಯಕ್ಷ ಸಿ.ರಾಮಕೃಷ್ಣ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಹಾಗಾಗಿ ಕೇರಳ ಮಾದರಿ ಯೋಜನೆಯನ್ನು ಜಾರಿ ಗೊಳಿಸಿ, ಅದರಿಂದ ಬರುವ ಲಾಭವನ್ನು ಬಡವರ ಕಲ್ಯಾಣ ಕಾರ್ಯಕ್ರಮಗಳಿಗೆ ಬಳಸಬಹುದು ಎಂದು ತಿಳಿಸಿದರು.

ಹಲವಾರು ರಾಜ್ಯಗಳ ಲಾಟರಿಗಳು ಮತ್ತು ಇ-ಲಾಟರಿಗಳು ಹುಲುಸಾಗಿ ಅಭಿವೃದ್ಧಿ ಹೊಂದು ತ್ತಿರುವಾಗ ನಮ್ಮ ರಾಜ್ಯದಲ್ಲಿ ನಿಷೇಧ ಹೇರಿರುವು ದರಲ್ಲಿ ಅರ್ಥವಿಲ್ಲ. ಅಲ್ಲದೇ ಅನಧಿಕೃತ ಲಾಟರಿ ವ್ಯವಹಾ ರವನ್ನು ನಿಲ್ಲಿಸಲು ಸಹಾಯ ವಾಗಲಿದೆ ಎಂದರು. ಈ ಲಾಟರಿ ಯೋಜ ನೆಯನ್ನು ಸರ್ಕಾರಕ್ಕೆ ಹೊರಯಾಗದ ರೀತಿಯಲ್ಲಿ ಖರ್ಚು-ವೆಚ್ಚಗಳನ್ನು ನಿರ್ವಹಿಸಲಾಗುವು ದು. ಮುದ್ರಿತ ವಾದ ಎಲ್ಲ ಟಿಕೆಟ್‌ಗಳ ಹಣವನ್ನು ಮುಖ್ಯ ದಾಸ್ತಾನುಗಾ ರರು ಪಾವತಿಸುತ್ತಾರೆ.

ಮಾರಾಟವಾಗದೆ ಉಳಿದ ಟಿಕೆಟ್‌ಗಳನ್ನು ಎಂಎಸ್‌ಐಎಲ್‌ಗೆ ಹಿಂತಿರುಗಿಸುವ ಪದ್ಧತಿ ಇಲ್ಲ. ಅಲ್ಲದೇ ಪ್ರಚಾರ ಮತ್ತು ಟಿಕೆಟ್‌ಗಳ ಮುದ್ರಣಕ್ಕೆ ತಗಲುವ ಖರ್ಚನ್ನು ಮುಖ್ಯ ದಾಸ್ತಾನುಗಾರರೇ ಮಾಡುತ್ತಾರೆ ಎಂದು ರಾಮಕೃಷ್ಣ ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಎ.ಮೈಕಲ್ ರಾಜ್, ಕಾರ್ಯದರ್ಶಿ ಪದ್ಮಜಾರಾವ್, ಖಜಾಂಚಿ ಪಿ.ಸ್ವಾಮಿ ಧರಣೇಂದ್ರಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

# ಹೊನ್ನಾಳಿ ಎಸ್‌ಡಿಎಂಸಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ


ತಾಲ್ಲೂಕು ಶಾಲಾಭಿವೃದ್ಧಿ ಸಮಿತಿ ಕಾರ್ಯಾಗಾರದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ತಿಪ್ಪೇಶಪ್ಪ

ಹೊನ್ನಾಳಿ, ಜ.5- ತಾಲ್ಲೂಕಿನ ಎಸ್‌ಡಿಎಂಸಿ ಸಮಿತಿಯು ಉತ್ತಮವಾಗಿ ಕೆಲಸ ನಿರ್ವಹಿಸಿ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ ಎಂದು ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ತಿಪ್ಪೇಶಪ್ಪ ಹೇಳಿದರು.

ಹೊನ್ನಾಳಿ ಪಟ್ಟಣದ ಸರ್ಕಾರಿ ಪ್ರೌಢಶಾಲೆಯಲ್ಲಿ ತಾಲ್ಲೂಕು ಎಸ್‌ಡಿಎಂಸಿ ಸಮನ್ವಯ ವೇದಿಕೆ ಮತ್ತು ವನಯಾತ್ರಿ ಸಮಾನ ಮನಸ್ಕರ ಬಳಗ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ತಾಲ್ಲೂಕು ಶಾಲಾಭಿವೃದ್ಧಿ ಸಮಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲ್ಲೂಕು ಎಸ್‌ಡಿಎಂಸಿ ಸಮಿತಿಯು ಸಂಸ್ಥೆಗಳು, ದಾನಿಗಳ ಸಹಾಯದಿಂದ ತಾಲ್ಲೂಕಿನ ಸುರಹೊನ್ನೆ, ಅರಬಗಟ್ಟೆ, ನೇರಲಗುಂಡಿಗಳಲ್ಲಿ ಉತ್ತಮ ಗುಣಮಟ್ಟದ ಎಲ್ಲಾ ಸೌಕರ್ಯ ಹೊಂದಿದ ಸರ್ಕಾರಿ ಶಾಲೆ ಕಟ್ಟುವ ಮೂಲಕ ಸ್ಥಳೀಯರ ಪ್ರಶಂಸೆಗೆ ಕಾರಣವಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ತಾಲ್ಲೂಕು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಎ.ಎಸ್.ಶಿವಲಿಂಗಪ್ಪ, ಸಮಿತಿ ಉತ್ತಮ ರಚನಾತ್ಮಕ ಕಾರ್ಯಗಳಿಗೆ ಮುಂದಾಗಿದೆ, ಇದಕ್ಕೆಲ್ಲಾ ಹಿಂದಿನ ಬಿಆರ್‌ಸಿ ಅಧಿಕಾರಿ ಉಮಾಶಂಕರ ಕಾರಣ ಎಂದರು.

ಉಮಾಶಂಕರ ಮಾತನಾಡಿ, ವಿದ್ಯಾರ್ಥಿಗಳು ದೇವರ ಸಮಾನ ಎನ್ನುವ ನಾವು ಶಿಕ್ಷಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಉತ್ತಮ ಗುಣಗುಟ್ಟದ ಶಿಕ್ಷಣ ದೊರೆಯುವಂತೆ ಮುಂದಾಗಬೇಕಿದೆ, ಶಾಲೆ ಮುಖ್ಯೋಪಾಧ್ಯಾಯರ ಹಾಗೂ ಸಹ ಶಿಕ್ಷಕರ ಜಗಳಗಳಿಂದ ವಿದ್ಯಾರ್ಥಿಗಳ ಗುಣಮಟ್ಟದ ಶಿಕ್ಷಣ ಕುಂಠಿತವಾಗದಿರುವಂತೆ ಸಲಹೆ ನೀಡಿ, ಹೊನ್ನಾಳಿ ಸಮಿತಿ ಉತ್ತಮ ಕೆಲಸ ನಿರ್ವಹಿಸಿ ಕ್ರಿಯಾಶೀಲ ತಂಡವಾಗಿದೆ ಎಂದರು.

ಹೊನ್ನಾಳಿ ಪ್ರೌಢಶಾಲೆಯ ಸದಸ್ಯ, ನಿವೃತ್ತ ಪ್ರಾಂಶುಪಾಲ ಶಿವಶಂಕರಯ್ಯ ಮಾತನಾಡಿ ಕೌಶಲ್ಯ, ಕುಶಲತೆ, ಪರಿಣಿತಿ ಹೊಂದಿದ ವಿದ್ಯಾರ್ಥಿಗಳನ್ನು ಇಲಾಖೆ ಗೌರವಿಸಿ ಹುದ್ದೆ ದೊರೆಯುಂತೆ ಮಾಡುತ್ತದೆ. ಇದರ ಲಾಭ ಪಡೆಯಲು ಸಮಿತಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಬೇಕಾಗಿದೆ ಎಂದರು.

ಶಾಲಾಭಿವೃದ್ಧಿ ಸಮಿತಿ ರಾಜ್ಯ ಸಂಘಟನಾ ಕಾರ್ಯದರ್ಶಿ ರುದ್ರನಾಯ್ಕ, ಅಕ್ಷರ ದಾಸೋಹ ಅಧಿಕಾರಿ ರುದ್ರಪ್ಪ, ಬಿಆರ್‌ಪಿ ಅರುಣ್‌ಕು ಮಾರ, ಉಪಪ್ರಾಂಶುಪಾಲ ರಂಗನಾಥ, ಕೆ.ಬಿ.ಸುಭಾಶ್, ಸಾವಿತ್ರಮ್ಮ, ಸತೀಶ್, ರಮೇಶ್, ಪಾರ್ವತಮ್ಮ, ಮಂಜುನಾಥ್, ರತ್ನಮ್ಮ ಸೇರಿ ದಂತೆ ಇತರರು ಕಾರ್ಯಕ್ರಮದಲ್ಲಿ ಯುಪುಸ್ಥಿತರಿದ್ದರು.

# ಅಂತರರಾಷ್ಟ್ರೀಯ ಜಾಂಬೂರಿಯಲ್ಲಿ ಶಿವಗಂಗೋತ್ರಿ ಶಾಲೆ ಸ್ಕೌಟ್ಸ್ ಸಾಧನೆ




ದಾವಣಗೆರೆ, ಜ.5- ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದರೆಯ ಆಳ್ವಾಸ್ ವಿದ್ಯಾಸಂಸ್ಥೆಯಲ್ಲಿ ಕಳೆದ ವಾರ ನಡೆದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಅಂತರರಾಷ್ಟ್ರೀಯ ಸಾಂಸ್ಕೃತಿಕ ಜಾಂಬೂರಿ ಕಾರ್ಯಕ್ರಮದಲ್ಲಿ ತೋಳಹುಣಸೆಯ ಶಿವಗಂಗೋತ್ರಿ ಪಿ.ಎಸ್.ಎಸ್.ಇ.ಎಂ.ಆರ್.ಶಾಲೆಯ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಭಾಗವಹಿಸಿ 'ಕರ್ನಾಟಕದ ಉತ್ತಮ ಬ್ಯಾಂಡ್ ತಂಡ ಪ್ರಶಸ್ತಿ' ಪಡೆದಿರುತ್ತಾರೆ.

ಈ ಶಾಲಾ ಬ್ಯಾಂಡ್ ತಂಡದಲ್ಲಿ 29 ಸ್ಕೌಟ್ಸ್ ವಿದ್ಯಾರ್ಥಿಗಳು, 11 ಗೈಡ್ಸ್ ವಿದ್ಯಾರ್ಥಿಗಳು, ಸ್ಕೌಟ್ಸ್ ಮತ್ತು ಬ್ಯಾಂಡ್‌ನ ಮಾಸ್ಟರ್ ಷಡಾಕ್ಷರದೇವ ಮತ್ತು ಗೈಡ್ ಕ್ಯಾಪ್ಟನ್ ವೀಣಾರವರು ಜಾಂಬೂರಿಯಲ್ಲಿ ಭಾಗವಹಿಸಿದ್ದರು.

ಶಾಲಾ ಆಡಳಿತ ಮಂಡಳಿ, ಶಾಲಾ ಮುಖ್ಯಸ್ಥರಾದ ಮಂಜುನಾಥ್ ರಂಗರಾಜು, ಮತ್ತಿತರರು ಮಕ್ಕಳನ್ನು ಅಭಿನಂದಿಸಿದ್ದಾರೆ.

# ಇಂದು 'ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ' ತೆರೆಗೆ

ದಾವಣಗೆರೆ, ಜ.5- ಸೃಜನ ಪ್ರೊಡಕ್ಷನ್ಸ್ ನಿರ್ಮಿಸಿರುವ ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ ಸಿನಿಮಾ ನಾಳೆ ದಿನಾಂಕ 6ರಂದು ರಾಜ್ಯಾದ್ಯಂತ ತೆರೆ ಕಾಣಲಿದೆ ಎಂದು ಚಿತ್ರದ ನಿರ್ದೇಶಕ, ನಟ ರಾಜೇಶ್ ಧ್ರುವ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ ಸಿನಿಮಾವು ದಾವಣಗೆರೆಯ ಮೂವಿಟೈಮ್ ಸೇರಿದಂತೆ ರಾಜ್ಯದ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆ ಕಾಣಲಿದೆ ಎಂದು ಹೇಳಿದರು.

ಬಹುತೇಕ ಹೊಸಬರೇ ಬಣ್ಣ ಹಚ್ಚಿರು ವ ಶ್ರೀ ಬಾಲಾಜಿ ಫೋಟೋ ಸ್ಟುಡಿಯೋ ಸಿನಿಮಾವು ಫೋಟೋಗ್ರಾರ್ಸ್ ಮುಂದಿರುವ ಸವಾಲುಗಳು, ಸಂಕಷ್ಟದ ಜೊತೆ, ಜೊತೆಗೆ ಛಾಯಾಗ್ರಾಹಕನ ಜೀವನಗಾಥೆಯ ಕಥಾಹಂದರ ಹೊಂದಿದೆ. ಅಲ್ಲದೆ, ಫೋಟೋಗ್ರಾರ್ಸ್ ನಡುವೆ ಇರುವ ಅಹಮ್ಮಿನ ಬಗ್ಗೆಯು ಚಿತ್ರದಲ್ಲಿ ತೋರಿಸಲಾಗಿದೆ ಎಂದರು.

ನೈಸರ್ಗಿಕವಾಗಿ ಸುರಿಯುತ್ತಿದ್ದ ಮಳೆಯಲ್ಲಿಯೇ ಸಿರಶಿ, ಯಲ್ಲಾಪುರ, ಹೊನ್ನಾವರ, ಗೋಕಾಕ್ ಸೇರಿದಂತೆ ನಾನಾ ಕಡೆ ಚಿತ್ರೀಕರಿಸಲಾಗಿದೆ. ಚಿತ್ರದಲ್ಲಿ ಉತ್ತರ ಕನ್ನಡ ಭಾಷೆಯಲ್ಲಿ ಸಂಭಾಷಣೆ ಇದೆ. ಎರಡು ಹಾಡುಗಳನ್ನು ಹೊಂದಿದ್ದು, ಚಿತ್ರ ಅತ್ಯುತ್ತಮವಾಗಿ ಮೂಡಿಬಂದಿದೆ. ಆದ್ದರಿಂದ ಸಿನಿರಸಿಕರು ಚಿತ್ರವನ್ನು ಚಿತ್ರ ಮಂದಿರಲ್ಲಿ ವೀಕ್ಷಿಸುವ ಮೂಲಕ ಹೊಸಬರ ಪ್ರಯತ್ನವನ್ನು ಬೆಂಬಲಿಸಿ ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಮನೋಜ್, ಸಂಪತ್, ರವಿ ಸಾಲಿಯಾನ್, ಶರತ್, ಫೋಟೋಗ್ರಾರ್ ್ಸ ಅಸೋಸಿಯೇಷನ್‌ನ ಎಚ್.ಕೆ.ಸಿ. ರಾಜು, ವಿಜಯ್ ಜಾಧವ್, ತಿಪ್ಪೇಶ್, ಕಿರಣ್, ಶಶಿ, ನವೀನ್ ಇದ್ದರು.

# ತಾ.ಪಂ, ಜಿ.ಪಂ ಚುನಾವಣೆ ಆಕ್ಷೇಪಣೆ ಸಲ್ಲಿಸಲು 16 ಕೊನೆ ದಿನ

## ಜಗಳೂರು ತಹಶೀಲ್ದಾರ್ ಜಿ.ಸಂತೋಷ್ ಕುಮಾರ್

ಜಗಳೂರು,ಜ.5- ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಇದೇ ದಿನಾಂಕ 16 ರೊಳಗೆ ಸಲ್ಲಿಸಲು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ತಿಳಿಸಿದೆ ಎಂದು ತಹಶೀಲ್ದಾರ್ ಜಿ.ಸಂತೋಷ್ ಕುಮಾರ್ ಹೇಳಿದರು.

ಪಟ್ಟಣದ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಆಕ್ಷೇಪಣಾ ಅರ್ಜಿಯನ್ನು ಆನ್ ಲೈನ್ ವೆಬ್ ಸೈಟ್ ವಿಳಾಸ http://rdpr.Karnataka.gov.in./rdc/public/" ಅಥವಾ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ, 3 ನೇ ಗೇಟ್, 2 ನೇ ಮಹಡಿ, ಕೊಠಡಿ ಸಂಖ್ಯೆ 222/0 ಬಹುಮಹಡಿ ಕಟ್ಟಡ ಅಂಬೇಡ್ಕರ್ ವೀದಿ, ಬೆಂಗಳೂರು-560001 ವಿಳಾಸಕ್ಕೆ ಸಲ್ಲಿಸಬಹುದು ಎಂದರು.

ತಾಲ್ಲೂಕಿನಲ್ಲಿ ಬಸವನಕೋಟೆ, ಗುರುಸಿದ್ದಾಪುರ, ಸೊಕ್ಕೆ, ಹೊಸಕೆರೆ, ಅಣಬೂರು, ಹಿರೇಮಲ್ಲನಹೊಳೆ, ಹನುಮಂತಾಪುರ, ಕೆಚ್ಚೇನಹಳ್ಳಿ, ಪಲ್ಲಾಗಟ್ಟೆ, ಅಸಗೋಡು, ಬಿಳಿಚೋಡು, ದೇವಿಕೆರೆ, ಗುತ್ತಿದುರ್ಗ, ಬಿದರಕೆರೆ, ತೋರಣಗಟ್ಟೆ, ದೊಣ್ಣೆಹಳ್ಳಿ ಸೇರಿದಂತೆ 16 ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳು, ಸೊಕ್ಕೆ, ಅಣಬೂರು, ಬಿಳಿಚೋಡು, ದೊಣ್ಣೆಹಳ್ಳಿ ಸೇರಿ 4 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳನ್ನೊಳಗೊಂಡಿದೆ ಎಂದು ಮಾಹಿತಿ ನೀಡಿದರು.

**ಮತದಾರರ ಪಟ್ಟಿಗೆ ಹೊಸ ಸೇರ್ಪಡೆಗೆ ಅವಕಾಶ:** ವಿಧಾನ ಸಭಾ ಕ್ಷೇತ್ರದ 262 ಬೂತ್ ಗಳಲ್ಲಿ ಒಟ್ಟು 189209 ಮತದಾರರಿದ್ದು, ಗಂಡು 95928 ಜನ ಹೆಣ್ಣು 93269 ಜನ, ಇತರೆ 12 ಜನ, ಒಟ್ಟು 189209 ಜನ ಮತದಾರರನ್ನೊಳಗೊಂಡಿದ್ದು.ದಿನಾಂಕ: 9-11-2023ರಿಂದ ದಿನಾಂಕ:5-1-2023 ರವರೆಗೆ ಒಟ್ಟು 3476 ಮತದಾರರು ಹೊಸ ಸೇರ್ಪಡೆಗೊಂಡಿವೆ. ಉಳಿದ ಅರ್ಹರು ಅರ್ಜಿ ಸಲ್ಲಿಸಿ ಮತದಾರರ ಪಟ್ಟಿಗೆ ಹೊಸ ಸೇರ್ಪಡೆ ಹಾಗೂ ಪರಿಷ್ಕರಣೆಗೆ ಅವಕಾಶವಿದೆ. ಕ್ಷೇತ್ರದ ಜನರು ಸದುಪಯೋಗಪಡೆದುಕೊಳ್ಳಬೇಕು ಎಂದರು.

ಕ್ಷೇತ್ರದಲ್ಲಿ ವಿಶೇಷ ವಿಕಲಚೇತನರು ಒಟ್ಟು 2329 ಮತದಾರರಿದ್ದು. ಚುನಾವಣೆ ಸಂದರ್ಭದಲ್ಲಿ ಮತದಾನಕ್ಕೆ ವಾಹನ ಇತರೆ ಸೌಲಭ್ಯ ಕಲ್ಪಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಲೋಕ್ಯಾನಾಯ್ಕ, ಶಿರಸ್ತೇದಾರ್ ಚಂದ್ರಪ್ಪ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಎಸ್‌ಎಸ್‌ಎಂಬಿ ಶಾಲಾ ವಾರ್ಷಿಕೋತ್ಸವ

ದಾವಣಗೆರೆ ಎಜುಕೇಶನಲ್ ಅಸೋಸಿಯೇಷನ್ ನ ಶ್ರೀಮತಿ ಸರ್ವಮಂಗಳಮ್ಮ ಮಾಗನೂರು ಬಸಪ್ಪ ನರ್ಸರಿ, ಹಿರಿಯ ಪ್ರಾಥಮಿಕ, ಪ್ರೌಢಶಾಲೆ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆಗಳ ವಾರ್ಷಿಕೋತ್ಸವ, ವಿದ್ಯಾರ್ಥಿ ಸಂಘದ ಸಮಾರೋಪ, ಸಾಂಸ್ಕೃತಿಕ ಚಟುವಟಿಕೆಗಳ ಸಮಾರಂಭವು ಇಂದು ಮಧ್ಯಾಹ್ನ 3 ಗಂಟೆಗೆ ಶಾಲಾ ಆವರಣದಲ್ಲಿ ನಡೆಯಲಿದೆ.

ಸಂಸ್ಥೆಯ ಉಪಾಧ್ಯಕ್ಷ ಎಂ.ಬಿ. ಸಂಗಮೇಶ್ವರಗೌಡರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಲೆಯ ಹಿರಿಯ ವಿದ್ಯಾರ್ಥಿಗಳಾದ ಚಾರ್ಟರ್ಡ್ ಅಕೌಂಟೆಂಟ್ ಬಸವರಾಜಪ್ಪ ಬೆಳಗಾವಿ, ನಿವೃತ್ತ ಕಾರ್ಯನಿರ್ವಾಹಕ ಅಭಿಯಂತರ ಸಿ.ಬಿ. ವೀರಣ್ಣ, ಶರಣ ಮಾಗನೂರು ಬಸಪ್ಪ ಪ್ರತಿಷ್ಠಾನದ ಉಪಾಧ್ಯಕ್ಷರಾದ ಸುನಂದಾದೇವಿ ಸಂಗಮೇಶ್ವರಗೌಡ್ರು, ದಾವಣಗೆರೆ ಎಜುಕೇಶನಲ್ ಸದಸ್ಯ ಎಂ.ಆರ್. ಪ್ರಭುದೇವ್, ಮುಖ್ಯೋಪಾಧ್ಯಾಯರಾದ ಕೆ. ಬಿ. ಪಂಚಾಕ್ಷರಪ್ಪ, ಜಿ.ಎಸ್. ಉಜ್ಜನಪ್ಪ, ಪ್ರಭಾರಿ ಮುಖ್ಯೋಪಾಧ್ಯಾಯ ಹೆಚ್.ಐ. ಗಿರೀಶ್ ಭಾಗವಹಿಸಲಿದ್ದಾರೆ.

# ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾವಿತ್ರಿ ಬಾಪುಲೆ ಜಯಂತಿ ಆಚರಣೆ



ದಾವಣಗೆರೆ, ಜ.5- ನಗರದ ನೂತನ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾವಿತ್ರಿ ಬಾಪುಲೆ ಅವರ 192ನೇ ಜಯಂತಿ ಆಚರಿಸಲಾಯಿತು. ಪ್ರಾಚಾರ್ಯ ಡಾ. ಕೆ.ಎಸ್.ದಿವಾಕರ್ ನಾಯ್ಕ್ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿ, 'ಇತಿಹಾಸವನ್ನು ಓದದೇ ಇರುವವರು ಇತಿಹಾಸ ನಿರ್ಮಿಸಲಾರರು' ಎಂದರು. ಸಾವಿತ್ರಿ ಬಾಪುಲೆ ಅವರನ್ನು 'ನಾರಿ ಶಕ್ತಿ' ಎಂದು ವರ್ಣಿಸಿದರು.

ಪ್ರತಿ ಭಾರತೀಯ ಹೆಣ್ಣು ಮಕ್ಕಳು ಸಾವಿತ್ರಿ ಬಾಪುಲೆಯವರಿಗೆ ಚಿರಋಣಿಯಾಗಿರಬೇಕು. ಏಕೆಂದರೆ ಅವರು ಅಕ್ಷರ ಕ್ರಾಂತಿಯನ್ನು ನಡೆಸಿ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿದರು. ಸಮ ಸಮಾಜದ ನಿರ್ಮಾಣಕ್ಕಾಗಿ ಅವಿರತವಾಗಿ ಶ್ರಮಿಸಿದರು. ಭಾರತದಲ್ಲಿ ಹೆಣ್ಣುಮಕ್ಕಳಿಗಾಗಿ ಪ್ರಪ್ರಥಮವಾಗಿ ಶಾಲೆಯನ್ನು ತೆರೆದರು ಎಂದು ಅವರ ಜೀವನ ವೃತ್ತಾಂತದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಕು. ಪಿ.ಜಿ.ಐಶ್ವರ್ಯ ಹಾಗೂ ಕು.ಎಸ್.ಸ್ಫೂರ್ತಿ ಪ್ರಾರ್ಥಿಸಿದರು. ರಹಸ್ಯ ರೈ ಸ್ವಾಗತಿಸಿದರು. ಕು. ಆಯೇಷಾ ಶಬನಮ್ ಸಾವಿತ್ರ ಬಾಪುಲೆಯವರ ಕುರಿತು ಮಾತನಾಡಿದರು. ಕು. ಫಾತಿಮಾ ರುಕ್ಸಾರ್ ವಂದಿಸಿದರು. ಶ್ರೀಮತಿ ರುಕ್ಸಾರ್ ಬಾನು ನಿರೂಪಿಸಿದರು.

# ವಿಮಾನದಲ್ಲಿ ಮಹಿಳೆ ಮೇಲೆ ಮೂತ್ರ ವಿಸರ್ಜಿಸಿದ ಮತ್ತೊಂದು ಪ್ರಕರಣ

ನವದೆಹಲಿ, ಜ. 5 – ಏರ್ ಇಂಡಿಯಾದ ಪ್ಯಾರಿಸ್ - ದೆಹಲಿ ವಿಮಾನದಲ್ಲಿ ಮಹಿಳೆಯ ಮೇಲೆ ವ್ಯಕ್ತಿಯೋರ್ವ ಮೂತ್ರ ವಿಸರ್ಜನೆ ಮಾಡಿದ ಇನ್ನೊಂದು ಘಟನೆ ಬೆಳಕಿಗೆ ಬಂದಿದೆ.

ಈ ಹಿಂದೆ ನವೆಂಬರ್ 26ರಂದು ನ್ಯೂಯಾರ್ಕ್ - ದೆಹಲಿ ನಡುವಿನ ಏರ್ ಇಂಡಿಯಾ ವಿಮಾನದಲ್ಲಿ ನಡೆದ ಘಟನೆ ಬೆಳಕಿಗೆ ಬಂದಿತ್ತು. ಈ ಬಗ್ಗೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಡಿಸೆಂಬರ್ 6ರಂದು ಏರ್ ಇಂಡಿಯಾದ ಪ್ಯಾರಿಸ್ - ದೆಹಲಿ ವಿಮಾನದಲ್ಲಿ ಮತ್ತೊಂದು ಘಟನೆ ನಡೆದಿತ್ತು. ನಂತರ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಳ್ಳಲಾಗಿತ್ತು ಎಂದು ಏರ್ ಇಂಡಿಯಾ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪಾನಮತ್ತನಾಗಿದ್ದ ಪುರುಷ ಪ್ರಯಾಣಿಕ ಮಹಿಳೆಯ ಕಂಬಳಿ ಮೇಲೆ ಮೂತ್ರ ವಿಸರ್ಜನೆಯ ಕೃತ್ಯ ಎಸಗಿದ್ದ. ಈ ಬಗ್ಗೆ ಮಹಿಳೆ ಮೊದಲು ದೂರು ನೀಡಿದ್ದರು. ಆದರೆ, ಪೊಲೀಸರಲ್ಲಿ ಪ್ರಕರಣ ದಾಖಲಿಸಲು ನಿರಾಕರಿಸಿದ್ದರು. ಈ ಹಿನ್ನೆಲೆಯಲ್ಲಿ ಆತನನ್ನು ಬಿಟ್ಟು ಕಳಿಸಲಾಗಿತ್ತು ಎಂದು ಏರ್ ಇಂಡಿಯಾ ಹೇಳಿದೆ.

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ
ಶಿವಸಂಗಮ ಚಿಟ್ಸ್ ಪ್ರೈ.ಲಿ., ಶಿವಸಂಗಮ ಫೈನಾನ್ಸ್ (ರಿ.)
ಸ್ಥಳ : ಡಾ|| ಬಿ.ಆರ್. ಶಿವಶಂಕರ್ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ.
ಶಾಖೆಗೆ ಸಂಪರ್ಕಿಸಿ : ಬೆಳಗ್ಗೆ 10 ರಿಂದ ಸಂಜೆ 6ರ ವರೆಗೆ
8197220933, 7353329440

**1BHK ಮನೆ ಲೀಸ್‌ಗೆ ಇದೆ**
ಬನಶಂಕರಿ ಬಡಾವಣೆ ವಿದ್ಯಾನಗರದಲ್ಲಿ ವಿವೇಕಾನಂದ ಶಾಲೆ ಹತ್ತಿರ 1 BHK ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ.
91485 64617

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಸೈಟುಗಳು ಮಾರಾಟಕ್ಕಿವೆ**
S.S. 'B' Block, ಉತ್ತರ 30×44, 40×60, ಬಸವೇಶ್ವರ ಬಡಾವಣೆ ಪೂರ್ವ 40×60, ಬನಶಂಕರಿ ಬಡಾವಣೆ ಪೂರ್ವ 40×61, ಪಶ್ಚಿಮ-ದಕ್ಷಿಣ ಕಾರ್ನರ್, 40×60, ಪಶ್ಚಿಮ 30×60 ಅಕ್ಕ ಪಕ್ಕ
ಐಗೂರು ವಿಜಯಕುಮಾರ್
99457 02495

**ಅಡುಗೆ ಕೆಲಸದವರು ಬೇಕಾಗಿದ್ದಾರೆ**
SS ಲೇಔಟ್ ಬಿ ಬ್ಲಾಕ್, 3ನೇ ಮುಖ್ಯ ರಸ್ತೆಯಲ್ಲಿರುವ ಮನೆಗೆ, ಮನೆ ಕೆಲಸಕ್ಕೆ ಮತ್ತು ಅಡುಗೆ ಮಾಡುವುದರಲ್ಲಿ ನುರಿತ ಮಹಿಳೆ ಬೇಕಾಗಿದ್ದಾರೆ.
99807 05864

**ಸೈಟುಗಳು ಮಾರಾಟಕ್ಕಿವೆ**
ರಶ್ಮಿ ಹಾಸ್ಟೆಲ್ ಹಿಂಭಾಗ 30x60 GMT ಪಕ್ಕದಲ್ಲಿ 30x50 ಉತ್ತರ ಎಂಸಿಸಿ 'ಬಿ ಬ್ಲಾಕ್ 30x40 ದಕ್ಷಿಣ ಕೆಹೆಚ್‌ಬಿ ಪಕ್ಕದಲ್ಲಿ 30x40 ಉತ್ತರ
97418 11694

**ಮನೆ ಬಾಡಿಗೆಗೆ ಇದೆ**
ಜೆ.ಹೆಚ್. ಪಟೇಲ್ ಬಡಾವಣೆಯ ಪೋದಾರ್ ಇಂಟರ್‌ನ್ಯಾಷನಲ್ ಸ್ಕೂಲ್ ಎದುರಿನ ಪಾರ್ಕ್ ಪಕ್ಕದಲ್ಲಿ 20x30 ಅಳತೆಯಲ್ಲಿರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ.
98442 94446

**ಹೊಸ ಮನೆಗಳು ಮಾರಾಟಕ್ಕಿವೆ**
ಬಸವೇಶ್ವರ ಬಡಾವಣೆ ಪೂರ್ವ 30×40 (2BHK) ಮೇಲೆ ಸಿಂಗಲ್ ಅಟ್ಯಾಚ್ ರೂಂ., ಜೆ.ಹೆಚ್. ಪಟೇಲ್ ಬಡಾವಣೆ ಉತ್ತರ 30×50 (ಮೇಲೆ ಸಿಂಗಲ್ ಅಟ್ಯಾಚ್ ರೂಂ.) ಎಸ್.ಎಸ್. ಮಾಲ್ ಎದುರು, ದಕ್ಷಿಣ 30×40, ಡೂಪ್ಲೆಕ್ಸ್ (ಹಳೇ ಮನೆ)
ಐಗೂರು ವಿಜಯಕುಮಾರ್
99457 02495

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ, ಶನೇಶ್ವರ ದೇವಸ್ಥಾನ ಹಿಂಭಾಗ, 30x50 South, 30x50 North, 30x42 South, 30x40 East, 60x40 East, 30x40 East ಅಕ್ಕಪಕ್ಕ, Rate : 1950 ರಿಂದ 2600 ರವರೆಗೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಪೂಜಿ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಹೋಟೆಲ್ ನಡೆಸುವವರು ಬೇಕಾಗಿದ್ದಾರೆ**
ಶಿವ ರೆಸಿಡೆನ್ಸಿಯಲ್ಲಿ ಹೋಟೆಲ್ ನಡೆಸುವವರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ
ಶಿವ ರೆಸಿಡೆನ್ಸಿ
93410 00773

**HOUSE FOR RENT**
1 BHK, 2 BHK 1st Floor, 4 BHK Duplex Independent Car Parking, Near Nuthan College
DAKSHITH IYNAHALLI
77955 06795

**ಸೈಟುಗಳು ಮಾರಾಟಕ್ಕಿವೆ**
ಗ್ಲಾಸ್‌ಹೌಸ್ ಹತ್ತಿರ ಬಂಗ್ಲೆ ಸೈಟ್, 65×147 East, Rate : 2500/- ಹರಿಹರದ KHBಯಲ್ಲಿ 20×30 Corner ಸೈಟ್, Rate : 12 Lakhಕ್ಕೆ
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110

**ಬೇಕಾಗಿದ್ದಾರೆ**
ದಾವಣಗೆರೆಯ ವಿಶಾಖ ಪ್ಲಾಸ್ಟಿಕ್ ಪೈಪ್ಸ್ ಪ್ರೈ.ಲಿ.ನಲ್ಲಿ ಅಕೌಂಟ್ಸ್ ಕೆಲಸ ಮಾಡಲು ಬೇಕಾಗಿದ್ದಾರೆ. ಸಂಪರ್ಕಿಸಿ.
95131 93061, 08192 296256

**ಬೇಕಾಗಿದ್ದಾರೆ**
ಟೀ ಅಂಗಡಿಯಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಹುಡುಗರು ಅಥವಾ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ.
99800 32310

**ASP.NET WEB DEVELOPER ಬೇಕಾಗಿದ್ದಾರೆ**
Send your CV to Shajmathews@gmail.com
(SHAJMA THEWS@GMAIL.COM)

**ಮನೆ ಬಾಡಿಗೆಗೆ ಇದೆ**
3 BHK ಮನೆ ನೂತನ ಕಾಲೇಜ್ ಹತ್ತಿರ, ಸರ್ಕಾರಿ ಬಾಲಕಿಯರ ಪದವಿ ಕಾಲೇಜ್ ಹತ್ತಿರ, ಆಂಜನೇಯ ಬಡಾವಣೆ, 14ನೇ ಕ್ರಾಸ್‌ನಲ್ಲಿರುವ 3 BHK ಮನೆ, ನೆಲ ಅಂತಸ್ತು 2000 ಅಡಿ, ನಂದಿ ಬಾಗಿಲು, ವಾಸ್ತುಪ್ರಕಾರವಿದೆ, ಬೋರ್ & ನಲ್ಲಿ ನೀರಿನ ಸೌಲಭ್ಯವಿದೆ.
94490 23364, 90192 22404

**REQUIRED**
Experienced office assistant having knowledge in TALLY and GST filing
99000 22030

**Wanted**
**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಬೇಕಾಗಿದ್ದಾರೆ.
ಕೆಲಸದ ಸಮಯ :ಬೆಳಿಗ್ಗೆ 6 ರಿಂದ 12 ಹಾಗು ಸಂಜೆ 4 ರಿಂದ 9:30
99004 38052, 97401 53513

**PART TIME WORK**
**ಮನೆಯಲ್ಲೇ ಉದ್ಯೋಗ**
ಮನೆಯಲ್ಲಿಯೇ ಕುಳಿತು ಬಿಡುವಿನ ವೇಳೆಯಲ್ಲಿ ಕೆಲಸ/ Job ತಿಂಗಳಿಗೆ ಸಂಬಳ 12000 ದಿಂದ 18000ದವರೆಗೂ ಸಂಪಾದಿಸಿ. (ಕೋರಿಯರ್ ಸೌಲಭ್ಯವಿದೆ.)
ಸಂಪರ್ಕಿಸಿ :
91487 33213

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 11,000
99161 43003

**ಮಾರಾಟಕ್ಕೆ**
ಶಕ್ತಿನಗರ (ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು, 3 ಫ್ಲೋರ್ ಇರುವ ಮನೆ 20×30, ಲಕ್ಷ್ಮಿ ಲೇಔಟ್ (ಜಯನಗರ) ಸೈಟ್ (ಪೂರ್ವ) 25×35
78996 36597, 99165 25828

**ಮನೆ ಮಾರಾಟಕ್ಕಿದೆ**
ಕೆಟಿಜೆ ನಗರ 8ನೇ ಕ್ರಾಸ್‌ನಲ್ಲಿರುವ 30x40 ಅಳತೆಯ 3 ಅಂತಸ್ತಿನ ಮನೆ ಮಾರಾಟಕ್ಕಿದೆ.
ಹೆಚ್ಚಿನ ವಿವರಗಳಿಗಾಗಿ
96118 89513

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಸೇಲ್ಸ್‌ಗರ್ಲ್ಸ್ ಬೇಕಾಗಿದ್ದಾರೆ.
81971 71170

**ಸಣ್ಣ ವ್ಯಾಪಾರ**
ಅದ್ಭುತ ಆದಾಯ ಹೊಚ್ಚ ಹೊಸ ವ್ಯಾಪಾರ ಅವಕಾಶ. ಪ್ರತಿದಿನ ಆದಾಯ ಗಳಿಸಿ
ಸಂಪರ್ಕಿಸಿ.
79759 08688

**ತಕ್ಷಣ ಬೇಕಾಗಿದ್ದಾರೆ**
ಸೆಕ್ಯೂರಿಟಿ ಕೆಲಸಕ್ಕೆ ಆಫೀಸ್‌ಗೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
ಪಾಪ್ಯುಲರ್ ಸೆಕ್ಯೂರಿಟಿ & ಅಲೈಡ್ ಸರ್ವೀಸ್
RMC ಲಿಂಕ್ ರಸ್ತೆ, ದಾವಣಗೆರೆ.
81237 95376

**ಮಾರಾಟಕ್ಕಿವೆ**
ಹೋಟೆಲ್ ಸಾಮಾನುಗಳು ಮಾರಾಟಕ್ಕಿವೆ
Hotel Items for Sale.
M : 90603 81807

**ಮನೆ ಮಾರಾಟಕ್ಕಿದೆ**
ಭಗತ್‌ಸಿಂಗ್ ನಗರ 12ನೇ ಕ್ರಾಸ್ 15x40 ಅಳತೆಯ 2 ಮಹಡಿಯ ಮನೆ ಮಾರಾಟಕ್ಕಿದೆ.
78992 18059, 99641 18919

**ತ್ಯಾವಣಿಗೆಯಲ್ಲಿ ಅಂಗಡಿ ಮಳಿಗೆ/ಮನೆ ಬಾಡಿಗೆಗಿದೆ**
ಚನ್ನಗಿರಿ ತಾಲ್ಲೂಕು ತ್ಯಾವಣಿಗೆಯಲ್ಲಿ 55 ಅಡಿ ಉದ್ದ, 23 ಅಡಿ ಅಗಲ ಇರುವ ಅಂಗಡಿ ಮಳಿಗೆ ಮತ್ತು ಮನೆ ಬಾಡಿಗೆಗಿದೆ. ಸಂಪರ್ಕಿಸಿ.
ಟಿ.ಎಸ್.ಬಸವರಾಜಪ್ಪ ತ್ಯಾವಣಿಗಿ
99806 24688

**ಬೇಕಾಗಿದ್ದಾರೆ**
ದಾವಣಗೆರೆ ಬೆಣ್ಣೆ ದೋಸೆ ಮಾಡುವ ಮಾಸ್ಟರ್ ಬೇಕಾಗಿದ್ದಾರೆ. ಸ್ಥಳ : ಮಾರತಹಳ್ಳಿ, ಬೆಂಗಳೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಫೋ. : 86600 84490

**ಕಚೇರಿಗೆ ಯೋಗ್ಯವಾಗಿರುವ ಮನೆ ಬಾಡಿಗೆಗೆ ಇದೆ**
ಕೆ. ಬಿ. ಬಡಾವಣೆ ಕಿರುವಾಡಿ ಲೇಔಟ್‌ನಲ್ಲಿರುವ ಜೈನ ಮಂದಿರದ ಎದುರು ಮನ ಬಾಡಿಗೆಗೆ ಇದೆ. ಇದು ಕಚೇರಿಗೂ ಯೋಗ್ಯವಾಗಿರುತ್ತದೆ.
ಸಂಪರ್ಕಿಸಿ :
99451-59582

**COMMERCIAL SITE FOR SALE**
B.I.E.T. Road, Corner site, opposite Hemavathi Hostel, Total measurement 3200/sq. Feets. Contact no.
97424 34049

**ಸೈಟುಗಳು ಮಾರಾಟಕ್ಕಿವೆ**
1) ಎಸ್. ನಿಜಲಿಂಗಪ್ಪ ಬಡಾವಣೆ, 30×29 North-East Coner, 60ft. ರೋಡ್‌ಗೆ ಇದೆ. 2) ಚಿಕ್ಕನಹಳ್ಳಿ ಹೊಸ ಬಡಾವಣೆ, 30×70 North Facing, (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಸಂಪರ್ಕಿಸಿ
63601 51212
80951 55777

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಕೆಲಸ ಮಾಡಲು ರಿಸೆಪ್ಷನಿಸ್ಟ್, ರೂಂ ಬಾಯ್ ಮತ್ತು ದಾವಣಗೆರೆಯಲ್ಲಿ ರಿಸೆಪ್ಷನಿಸ್ಟ್, ರೂಂ ಬಾಯ್, ಸೆಕ್ಯೂರಿಟಿ ಸೂಪರ್‌ವೈಸರ್ ಬೇಕಾಗಿದ್ದಾರೆ. ಕೆಲವು ಕಡೆ ಊಟ ಮತ್ತು ವಸತಿ ವ್ಯವಸ್ಥೆ ಇರುತ್ತದೆ ಮತ್ತು ಆಕರ್ಷಕ ಸಂಬಳವಿರುತ್ತದೆ. ಕೂಡಲೇ ಸಂಪರ್ಕಿಸಿ :
ಮೊ. : 7411307071, 6362479957, 8217793007

**ಸೈಟುಗಳು ದೊರೆಯುತ್ತವೆ**
ಡಾಲರ್ಸ್ ಕಾಲೋನಿ ಬನಶಂಕರಿ ಬಡಾವಣೆ, ಶಕ್ತಿನಗರ, ಡಿಸಿಎಂ, ಶಿವಕುಮಾರ ಸ್ವಾಮಿ ಬಡಾವಣೆ, ಶಿ ಫ್ಯಾಕ್ಟರಿ ಎದುರುಗಡೆಯ ಲೇಔಟ್‌ನಲ್ಲಿ ಹಾಗೂ ಇತರೆ ಬಡಾವಣೆಗಳಲ್ಲಿ 30x40, 30x50 ಸೈಟುಗಳು & ಕಮರ್ಷಿಯಲ್ ಸೈಟುಗಳು ಉತ್ತಮ ದರದಲ್ಲಿ ದೊರೆಯುತ್ತವೆ.
97315 12365

**ಕಮರ್ಷಿಯಲ್ ಕಾಂಪ್ಲೆಕ್ಸ್ ಬಾಡಿಗೆಗಿದೆ**
ಚೇತನ್ ಹೋಟೆಲ್ ರಸ್ತೆ ದಾವಣಗೆರೆಯಲ್ಲಿ ಲಿಫ್ಟ್ ಸೌಕರ್ಯ ಇರುವ ಗ್ರೌಂಡ್ ಫ್ಲೋರ್ 1450 ಅಡಿ, ಫಸ್ಟ್ ಫ್ಲೋರ್ 1750 ಅಡಿ, ಸೆಕಂಡ್ ಫ್ಲೋರ್ 1750 ಬಾಡಿಗೆಗೆ ಲಭ್ಯವಿದೆ.
ಸಂಪರ್ಕಿಸಿ.
94480 56468

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸಮಯ : ಬೆಳಗ್ಗೆ 8.30 ರಿಂದ ಸಂಜೆ 7 ಗಂಟೆಯವರೆಗೆ ಸಂಬಳ : 12 ಸಾವಿರ ರೂಪಾಯಿ
ಸಂಪರ್ಕಿಸಿ. 99161 43300
ಶ್ರೀ ಸಾಯಿ ವಾಟರ್ ಸರ್ವೀಸ್
ಭೂಮಿಕ ನಗರ, ದಾವಣಗೆರೆ.

**WANTED**
1) SALES MAN - Paint Section,
2) SALES MAN - Cement Section
3) Lady Accoutant with tally.
Qualification : Till PUC
Contcat :
Ananda Hardware & Paints, Mandipete, Davanagere.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ವಯೋವೃದ್ಧರ ಆರೈಕೆ ಕೇಂದ್ರ**
ನಮ್ಮಲ್ಲಿ ವೃದ್ಧ ದಂಪತಿಗಳು ವಯೋವೃದ್ದರುಗಳನ್ನು ನಮ್ಮಲ್ಲಿ ಇರಿಸಿಕೊಂಡು ಊಟ, ವಸತಿಯೊಂದಿಗೆ ನೋಡಿಕೊಳ್ಳಲಾಗುವುದು. ಸ್ಪೆಷಲ್ ರೂಂಗಳಿರುತ್ತವೆ.
89711 92936, 97410 64663

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ವಯೋವೃದ್ಧರ ಆರೈಕೆ ಕೇಂದ್ರ**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಡೈಪರ್ ಚೇಂಜ್, ಸ್ನಾನ ಮಾಡಿಸುವುದು ಈ ಸೇವೆಗಳನ್ನು ನೀಡಿ ಊಟ ವಸತಿಯೊಂದಿಗೆ ನಮ್ಮಲ್ಲಿ ಇರಿಸಿಕೊಂಡು ನೋಡಿಕೊಳ್ಳಲಾಗುವುದು.
89711 92936, 97410 64663

**91.6 GOLD ANTIC**
& Special Temple Jewellery ಗೆ ಒಮ್ಮೆ ಭೇಟಿ ಕೊಡಿ.
JEWEL PALACE
Car Parking Available Chowkipet Cross, AM Galli, Davanagere.
89700 11711

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ. ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ ವಯಸ್ಸು : 25 ರಿಂದ 40 ರ ಒಳಗೆ ಕೆಲಸದ ಸಮಯ : ಬೆಳಿಗ್ಗೆ 10 ರಿಂದ ಸಂಜೆ 8.30
ಪರಿಮಳ ಕಾಫೀ ಕಂಪನಿ, ಮಂಡಿಪೇಟೆ, ದಾವಣಗೆರೆ.
94482 72734

**ತಕ್ಷಣ ಬೇಕಾಗಿದ್ದಾರೆ**
ಪೂಜಾ ಹಾರ್ಡ್‌ವೇರ್‌ನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ. ಪುರುಷರು, ವಿದ್ಯಾಭ್ಯಾಸ, ಪಿಯುಸಿ, ಡಿಗ್ರಿ ಆದವರು ಬೇಕಾಗಿದ್ದಾರೆ. ಅರುಣ ಟಾಕೀಸ್ ಹತ್ತಿರ, ಪಿ.ಬಿ. ರೋಡ್, ದಾವಣಗೆರೆ.
ಫೋ. : 94498 14968

**ಬೇಕಾಗಿದ್ದಾರೆ**
ನೂತನ ACE TRACTOR SHOWROOM ಗಾಗಿ ITI ಆಗಿರುವ ಸೇಲ್ಸ್ ಮನ್‌ಗಳು ಬೇಕಾಗಿದ್ದಾರೆ.
U & T Enterprises
91085 12030, 82777 47785

# ಹಾವೇರಿಯಲ್ಲಿ ಇಂದಿನಿಂದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಇಂದಿನಿಂದ ಮೂರು ದಿನ ಹಾವೇರಿ ನಗರದ ಶ್ರೀ ಅಜ್ಜಯ್ಯನ ದೇವಸ್ಥಾನದ ಎದುರು ಕನಕ-ಶರೀಫ ಮತ್ತು ಸರ್ವಜ್ಞ ವೇದಿಕೆ ಹಾಗೂ ಎರಡು ಸಮಾನಾಂತರ ವೇದಿಕೆಯಲ್ಲಿ ಜರುಗಲಿದೆ.

**ಧ್ವಜಾರೋಹಣ:** ಇಂದು ಬೆಳಿಗ್ಗೆ 7 ರಿಂದ 7-30ರವರೆಗೆ ಧ್ವಜಾರೋಹಣ ಕಾರ್ಯಕ್ರಮ ಜರುಗಲಿದೆ. ಕಾರ್ಮಿಕ ಖಾತೆ ಸಚಿವರೂ ಆಗಿರುವ ಸಮ್ಮೇಳನ ಸ್ವಾಗತ ಸಮಿತಿ ಅಧ್ಯಕ್ಷ ಅರಬೈಲ್ ಶಿವರಾಮ ಹೆಬ್ಬಾರ ಅವರು ರಾಷ್ಟ್ರಧ್ವಜಾರೋಹಣ ನೆರವೇರಿಸಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಅವರು ಪರಿಷತ್‌ನ ಧ್ವಜಾರೋಹಣ ನೆರವೇರಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಲಿಂಗಯ್ಯ ಹಿರೇಮಠ ಅವರು ನಾಡ ಧ್ವಜಾರೋಹಣ ನೆವೇರಿಸಲಿದ್ದಾರೆ.

**ಮೆರವಣಿಗೆ:** ಇಂದು ಬೆಳಿಗ್ಗೆ 7-30ರಿಂದ 10-30ರವರೆಗೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಜರುಗಲಿದೆ. ಶ್ರೀ ಸಿದ್ದೇಶ್ವರ ದೇವಸ್ಥಾನದಿಂದ ಬಸ್ ನಿಲ್ದಾಣ, ಆರ್‌ಟಿಒ ಕಚೇರಿ ಮಾರ್ಗವಾಗಿ ಸಮ್ಮೇಳನ ವೇದಿಕೆ ತಲುಪಲಿದೆ. ನಗರಸಭೆ ಅಧ್ಯಕ್ಷ ಸಂಜೀವಕುಮಾರ ನೀರಲಗಿ ಮೆರವಣಿಗೆ ಉದ್ಘಾಟಿಸಲಿದ್ದಾರೆ. ಮಾಜಿ ಸಚಿವ ಬಸವರಾಜ ಶಿವಣ್ಣನವರ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ರಘುನಂದನ್ ಮೂರ್ತಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಹಮ್ಮದ್ ರೋಷನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಜಯಕುಮಾರ ಸಂತೋಷ್, ಉಪವಿಭಾಗಾಧಿಕಾರಿಗಳಾದ ಶಿವಾನಂದ ಉಳ್ಳಾಗಡ್ಡಿ, ರಾಯಪ್ಪ ಹುಣಸಗಿ, ಜಿ.ಪಂ.ಉಪ ಕಾರ್ಯದರ್ಶಿ ಎಸ್.ಬಿ. ಮುಳ್ಳಳ್ಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ ಹೂಗಾರ, ಜಿಲ್ಲಾ ನೌಕರರ ಸಂಘದ ಅಧ್ಯಕ್ಷ ಅಮೃತಗೌಡ ಪಾಟೀಲ, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದರಾಜ ಕಲಕೋಟಿ, ಜಾತ್ಯತೀತ ಜನತಾದಳದ ಜಿಲ್ಲಾಧ್ಯಕ್ಷ ಜಯಾನಂದ ಜಾವಣ್ಣನವರ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಎಂ.ಎಂ.ಹಿರೇಮಠ ಪಾಲ್ಗೊಳ್ಳಲಿದ್ದಾರೆ.

**ಸಮಾರಂಭದ ಉದ್ಘಾಟನೆ:** ಬೆಳಿಗ್ಗೆ 10-30ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾ ಟನೆ ನೆರವೇರಿಸಿ, ಉದ್ಘಾಟನಾ ನುಡಿಗಳನ್ನಾಡುವರು. ವಿಧಾನ ಪರಿಷತ್ ಸಭಾಪತಿಗಳಾದ ಬಸವರಾಜ ಹೊರಟ್ಟಿ ಅವರ ಘನ ಉಪಸ್ಥಿತಿಯಲ್ಲಿ ಶಾಸಕರು ಹಾಗೂ ಸಮ್ಮೇಳನ ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ನೆಹರು ಓಲೇಕಾರ ಅವರು ಸ್ವಾಗತಿಸುವರು.

ಕಾರ್ಮಿಕ ಖಾತೆ ಅರಬೈಲ್ ಶಿವರಾಮ ಹೆಬ್ಬಾರ ಅವರಿಂದ ಮೊದಲ ಮಾತು, ನಾಡೋಜ ಡಾ.ಮಹೇಶ ಜೋಶಿ ಅವರಿಂದ ಆಶಯ ನುಡಿ, ಸಮ್ಮೇಳನಾಧ್ಯಕ್ಷ ಡಾ. ದೊಡ್ಡರಂಗೇಗೌಡರಿಂದ ಭಾಷಣ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಂದ ವಿಶೇಷ ಅಂಚೆ ಲಕೋಟೆ ಬಿಡುಗಡೆ, ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರಿಂದ ಪರಿಷತ್ತಿನ ಪುಸ್ತಕಗಳ ಬಿಡುಗಡೆ, ಕನ್ನಡ ಮತ್ತು ಸಂಸ್ಕೃತಿ, ಇಂಧನ ಖಾತೆ ಸಚಿವರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆ, ಕೃಷಿ ಸಚಿವ ಬಿ.ಸಿ.ಪಾಟೀಲ ಅವರಿಂದ ವೇದಿಕೆ ಉದ್ಘಾಟನೆ, ಸಂಸದ ಶಿವಕುಮಾರ ಉದಾಸಿ ಅವರಿಂದ ಹಾವೇರಿ ಜಿಲ್ಲಾ ಪುಸ್ತಕಗಳ ಬಿಡುಗಡೆ, ಶಾಸಕರಾದ ವಿರುಪಾಕ್ಷಪ್ಪ ಬಳ್ಳಾರಿ ಅವರು ಚಿತ್ರಕಲಾ ಪ್ರದರ್ಶನ, ಶಾಸಕ ಅರುಣಕುಮಾರ ಪೂಜಾರ ಅವರು ವಾಣಿಜ್ಯ ಮಳಿಗೆ ಹಾಗೂ ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ ಅವರು ಪುಸ್ತಕ ಮಳಿಗೆ ಉದ್ಘಾಟಿಸುವರು. ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಸ್ಮರಣ ಸಂಚಿಕೆ ಬಿಡುಗಡೆಗೊಳಿಸುವರು. ವಿಧಾನ ಪರಿಷತ್ ಸದಸ್ಯ ಆರ್.ಶಂಕರ್ ವಸ್ತು ಪ್ರದರ್ಶನ ಹಾಗೂ ಪ್ರದೀಪ ಶೆಟ್ಟರ ಮಾಧ್ಯಮ ಕೇಂದ್ರ ಉದ್ಘಾಟಿಸಲಿದ್ದಾರೆ.

ನಗರಸಭೆ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ವಾಯುವ್ಯ ರಸ್ತೆ ಸಾರಿಗೆ ಸಂಸ್ಥೆ ಉಪಾಧ್ಯಕ್ಷ ಬಸವರಾಜ ಕೇಲಗಾರ, ವಿಧಾನ ಸಭೆ ಮಾಜಿ ಸಭಾಧ್ಯಕ್ಷ ಕೆ.ಬಿ.ಕೋಳಿವಾಡ, ಮಾಜಿ ಸಚಿವ ಬಸವರಾಜ ಶಿವಣ್ಣನವರ, ಮನೋಹರ ತಹಶೀಲ್ದಾರ್, ರುದ್ರಪ್ಪ ಲಮಾಣಿ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಉಪಸ್ಥಿತರಿರುವರು.

**ಸಾಮರಸ್ಯದ ಭಾವ - ಕನ್ನಡದ ಜೀವ:** ಮಧ್ಯಾಹ್ನ 2 ರಿಂದ 4ರವರೆಗೆ ಕನಕ-ಶರೀಫ-ಸರ್ವಜ್ಞ ಪ್ರಧಾನ ವೇದಿಕೆಯಲ್ಲಿ ಗೋಷ್ಠಿ-1 ಸಾಮರಸ್ಯದ ಭಾವ-ಕನ್ನಡದ ಜೀವ ಜರುಗಲಿದ್ದು, ಚಿತ್ರದುರ್ಗ ಸಿರಿಗೆರೆ ತರಳಬಾಳು ಜಗದ್ಗುರು ಬೃಹನ್ಮಠದ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಗಳು ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ಶಿಕ್ಷಣ ತಜ್ಞ ಡಾ.ಗುರುರಾಜ ಕರ್ಜಗಿ ಅವರಿಂದ ಆಶಯ ನುಡಿ, ಕನಕರ ಭಾವೈಕ್ಯತಾ ದೃಷ್ಟಿ ಕುರಿತು ಡಾ.ವೈ.ಎಂ.ಯಾಕೊಳ್ಳಿ, ಶರೀಫರ ಸಾಮರಸ್ಯ ದೃಷ್ಟಿ ಕುರಿತು ಡಾ.ಅಡಿವೆಪ್ಪ ವಾಲಿ ಹಾಗೂ ಸರ್ವಜ್ಞರ ಸಾಮಾಜಿಕ ದೃಷ್ಟಿ ಕುರಿತು ಡಾ.ನಾಗರಾಜ ದ್ಯಾಮನಕೊಪ್ಪ ವಿಷಯ ಮಂಡನೆ ಮಾಡಲಿದ್ದಾರೆ.

ಗೋಷ್ಠಿ 2 ಸಂಜೆ 4 ರಿಂದ 6ರವರೆಗೆ ಜರುಗಲಿದ್ದು, ಹಿರಿಯ ಕವಿ ಸರಜೂ ಕಾಟ್ಕರ್ ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರಿನ ಹಿರಿಯ ಕವಯತ್ರಿ ಡಾ.ವಿ ಜಯಶ್ರೀ ಸಬರದ ಅವರು ಆಶಯ ನುಡಿಗಳನ್ನಾಡಲಿದ್ದಾರೆ. ಕವಿಗೋಷ್ಠಿಯಲ್ಲಿ 25 ಕವಿಗಳು ಭಾಗವಹಿಸಲಿದ್ದಾರೆ.

**ಸಾಧಕರಿಗೆ ಸನ್ಮಾನ:** ಸಂಜೆ 6 ರಿಂದ 7 ಗಂಟೆವರೆಗೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ಜರುಗಲಿದ್ದು, ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದು, ಚಲನಚಿತ್ರ ಕಲಾವಿದ ರಮೇಶ ಅರವಿಂದ ಆಶಯ ನುಡಿಗಳನ್ನಾಡುವರು. ವಿಶ್ರಾಂತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗ್ಡೆ ಸನ್ಮಾನಿಸುವರು.

**ಸನ್ಮಾನಿತರು:** ನಿವೃತ್ತ ನ್ಯಾಯಾಧೀಶರು ಹಾಗೂ ಹಿರಿಯ ಸಾಹಿತಿ ಜಿನದತ್ತ ದೇಸಾಯಿ, ಫೀಲ್ಡ್ ಮಾರ್ಷಲ್ ಕಾರಿಯಪ್ಪನವರ ಮಗ ನಿವೃತ್ತ ಹಿರಿಯ ಸೇನಾಧಿಕಾರಿ ಏರ್ ಮಾರ್ಷಲ್ ಕೆ.ಸಿ. ಕಾರಿಯಪ್ಪ, ಶಿಕ್ಷಣ ತಜ್ಞ ಗುರುರಾಜ ಕರ್ಜಗಿ, ಕರ್ನಾಟಕ ಬ್ಯಾಂಕ್ ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿ ಮಹಾಬಲೇಶ್ವರ ಎಂ.ಎಸ್., ಫರ್ಡಿನೆಂಡ್ ಕಿಟ್ಟೆಲ್ ಅವರ ಮರಿಮೊಮ್ಮಗ ಯಾರ್ಕ್‌ಕಿಟ್ಟೆಲ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿಗಮದ ಸಿಇಒ ಹರಿಮಾರರ್, ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ ಕುಲಾಧಿಪತಿ ಮಾಲ್ಡೀವ್ ದೇಶದ ಗೌರವ ಕೌನ್ಸಿಲ್ ಜನರಲ್ ಡಾ.ವಿ.ಜಿ.ಜೋಸೆಫ್, ಚಲನಚಿತ್ರ ಕಲಾವಿದ ರಮೇಶ್ ಅರವಿಂದ, ಹಿರಿಯ ವೈದ್ಯ ಡಾ.ಶರಣ ಪಾಟೀಲ, ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ ವ್ಯವಸ್ಥಾಪಕ ನಿರ್ದೇಶಕ ಎಂ.ಜಿ.ಹಿರೇಮಠ, ನವದೆಹಲಿ ಅಂಚೆ ಸೇವಾ ಮಂಡಳಿ ಸದಸ್ಯ ಚಾರ್ಲ್ಸ್ ಲೋಬೋ, ಹಿರಿಯ ಪೊಲೀಸ್ ಅಧಿಕಾರಿ ಅಮರ್‌ಕುಮಾರ್ ಪಾಂಡೆ, ಹೊರನಾಡ ಕನ್ನಡಿಗ ಬ್ರಹ್ಮಾಕುಮಾರ ಮೃತ್ಯುಂಜಯ, ಹಿರಿಯ ಸಾಹಿತಿ ಬ.ಫ.ಯಲಿಗಾರ, ರಂಗಭೂಮಿ ಕಲಾವಿದ ಗೋಪಾಲಕೃಷ್ಣ ನಾಯರಿ, ಜರ್ಮನಿ ನಗರಸಭಾ ಸದಸ್ಯ ವಿದುಷಿ ನಂದಿನಿ ನಾರಾಯಣ್, ಹಿರಿಯ ಪತ್ರಕರ್ತ ಅಶೋಕ ಹಾಸ್ಯಗಾರ, ಹಿರಿಯ ಸಾಹಿತಿ ಶ್ರೀಮತಿ ವಿದ್ಯಾವತಿ ಅಂಕಲಗಿ, ಹಿರಿಯ ಸಾಹಿತಿ ವಿದ್ಯಾವಾಚಸ್ಪತಿ ಡಾ. ಕವಿತಾಕೃಷ್ಣ, ರಂಗಕರ್ಮಿ ಡಿ.ವಿ.ಎಸ್.ಗುಪ್ತ, ಸಹಕಾರ ಕ್ಷೇತ್ರದ ಸಾಧಕರಾದ ಶ್ರೀಮತಿ ಶಕುಂತಲಾ ಭಟ್ ಹಳೆಯಂಗಡಿ, ಹಿರಿಯ ಸಾಹಿತಿ ಪ್ರೊ. ಅನ್ನದಾನಿ ಹಿರೇಮಠ, ಸಮಾಜ ಸೇವಕ ಚಂದ್ರಶೇಖರ ಬಾಳೆ, ಕನ್ನಡ ಸೇವಾನಿರತರಾದ ರಾಮಲಿಂಗ ಶೆಟ್ಟಿ, ಹೊರದೇಶದ ಕನ್ನಡಿಗರಾದ ಕನ್ನಡತಿ ಭಾಗೀರಥಿ, ಕನ್ನಡಪರ ಹೋರಾಟಗಾರ ಮಹಾದೇವ ತಳವಾರ, ಸಂಘಟಕ ಟಿ.ಸಿ.ವೆಂಕಟಾಚಲಪತಿ, ಸಾಮಾಜಿಕ ಹೋರಾಟಗಾರ ಫಕೀರಪ್ಪ ಹೊತ್ನಳ್ಳಿ, ಹಿರಿಯ ಪತ್ರಕರ್ತ ರಾಜು ನದಾಫ, ಹಿರಿಯ ಸಂಶೋಧಕ ಡಾ.ಎಸ್.ಡಿ.ಶೆಟ್ಟಿ ಅವರನ್ನು ಸನ್ಮಾನಿಸಲಾಯಿತು. ಸಂಜೆ 7 ರಿಂದ ರಾತ್ರಿ 10ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

**ವೇದಿಕೆ-2 ಪಾಪು-ಚಂಪಾ ವೇದಿಕೆ ಹೆಳವನಕಟ್ಟೆ ಗಿರಿಯಮ್ಮ ಮಹಾಮಂಟಪ:** ಜನವರಿ 6 ರಂದು ಮಧ್ಯಾಹ್ನ 2 ರಿಂದ 4 ಗಂಟೆವರೆಗೆ ಹಾವೇರಿ ಜಿಲ್ಲಾ ದರ್ಶನ ಗೋಷ್ಠಿ-1 ಜರುಗಲಿದೆ. ಹಿರಿಯ ಸಾಹಿತಿ ಹನುಮಂತ ಗೌಡ ಗೊಲ್ಲರ ಅಧ್ಯಕ್ಷತೆ ವಹಿಸಲಿದ್ದು, ಸಾಹಿತಿ ಜೀವರಾಜ ಛತ್ರದ ಆಶಯ ನುಡಿಗಳನ್ನಾಡಲಿದ್ದಾರೆ. ರಜತ ಸಂಭ್ರಮದಲ್ಲಿ ಹಾವೇರಿ ಜಿಲ್ಲೆಯ ಕುರಿತು ವೈ.ಬಿ.ಆಲದಕಟ್ಟಿ, ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಜಿಲ್ಲೆಯ ಕೊಡುಗೆ ಕುರಿತು ಡಾ.ಎಸ್.ಪಿ.ಗೌಡರ್. ಕರ್ನಾಟಕ ಏಕೀಕರಣದಲ್ಲಿ ಹಾವೇರಿ ಜಿಲ್ಲೆಯ ಪಾತ್ರ ಕುರಿತು ಮಾರುತಿ ಶಿಡ್ಲಾಪುರ ಹಾಗೂ ಜಿಲ್ಲೆಯ ಐತಿಹಾಸಿಕ ಸ್ಮಾರಕಗಳ ಕುರಿತು ಡಾ. ರಮೇಶ ತೆವರಿ ಮಾತನಾಡಲಿದ್ದಾರೆ.

ಗೋಷ್ಠಿ-2 ಸ್ವಾತಂತ್ರ್ಯ ಅಮೃತ ಮಹೋತ್ಸವಕ್ಕೆ ಕರ್ನಾಟಕದ ಕೊಡುಗೆ ಸಂಜೆ 4 ರಿಂದ 5 ಗಂಟೆವರೆಗೆ ಜರುಗಲಿದೆ. ಬೆಂಗಳೂರು ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೋಡೆ ಪಿ.ಕೃಷ್ಣ ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಕನ್ನಡ ಸಾಹಿತ್ಯದ ಕೊಡುಗೆ ಕುರಿತು ಪ್ರೊ.ಟಿ.ಜಿ.ಹರೀಶ್ ಹಾಗೂ ಸ್ವಾತಂತ್ರ್ಯ ಹೋರಾಟಕ್ಕೆ ಕನ್ನಡ ಪ್ರತಿಕೋದ್ಯಮದ ಕೊಡುಗೆ ಕುರಿತು ವಿಲಾಸ ಮೇಲಗಿರಿ ಅವರು ಮಾತನಾಡಲಿದ್ದಾರೆ.

ಗೋಷ್ಠಿ-3 ಕನ್ನಡ ದಿಗ್ಗಜರು ಸಂಜೆ 5 ರಿಂದ 7 ಗಂಟೆವರೆಗೆ ಜರುಗಲಿದೆ. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಡಾ.ಆರ್.ಕೆ.ನಲ್ಲೂರು ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯ ಸಾಹಿತಿ ಡಾ.ಎಚ್.ಎಸ್.ಸತ್ಯನಾರಾಯಣ ಆಶಯ ನುಡಿಗಳನ್ನಾಡಲಿದ್ದಾರೆ.

ನಾಡೋಜ ಡಾ.ಪಾಟೀಲ ಪುಟ್ಟಪ್ಪ ಕುರಿತು ಡಾ.ಮಲ್ಲಿಕಾರ್ಜುನ ಸಿದ್ದಣ್ಣನವರ, ಪ್ರೊ.ಚಂದ್ರಶೇಖರ ಪಾಟೀಲ ಕುರಿತು ವಿಜಯಕಾಂತ ಪಾಟೀಲ, ಡಾ.ಮಹಾದೇವ ಬಣಕಾರ ಕುರಿತು ಡಾ.ಪ್ರೇಮಾನಂದ ಲಕ್ಕಣ್ಣನವರ ಹಾಗೂ ಡಾ.ಶ್ರೀನಿವಾಸ ಹಾವನೂರ ಕುರಿತು ಸಂಜಯ ಹಾವನೂರ ಅವರು ಮಾತನಾಡಲಿದ್ದಾರೆ. ಸಂಜೆ 7 ರಿಂದ ರಾತ್ರಿ 10-30ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

**ವೇದಿಕೆ-3 ಶ್ರೀ ಹಾನಗಲ್ ಕುಮಾರ ಶಿವಯೋಗಿಗಳ ವೇದಿಕೆ:** ಗೋಷ್ಠಿ-1 ಶತಮಾನ-ಪುರುಷರು ಈ ಮಹನೀಯರ ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ ಮಧ್ಯಾಹ್ನ 2 ರಿಂದ 3-30ರವರೆಗೆ ಜರುಗಲಿದೆ. ಹಿರಿಯ ಜಾನಪದ ವಿದ್ವಾಂಸ ನಾಡೋಜ ಡಾ.ಗೊ.ರು.ಚನ್ನಬಸಪ್ಪ ಅಧ್ಯಕ್ಷತೆ ವಹಿಸಲಿದ್ದು, ಹಿರಿಯ ಬರಹಗಾರ ಬಾಬು ಕೃಷ್ಣಮೂರ್ತಿ ಅವರು ಆಶಯ ನುಡಿಗಳನ್ನಾಡಲಿದ್ದಾರೆ.

ಜಿ.ನಾರಾಯಣ ಕುರಿತು ಕೆ.ಟಿ. ಶ್ರೀಕಂಠೇಗೌಡ, ಡಾ.ಹಿರೇಮಲ್ಲೂರು ಈಶ್ವರನ್ ಕುರಿತು ಪ್ರೊ.ಶಶಿಧರ ತೋಡ್ಕರ್, ಸು.ರಂ.ಎಕ್ಕುಂಡಿ ಕುರಿತು ಜೆ.ಎಂ. ರಾಜಶೇಖರ, ಶಾಂತವೇರಿ ಗೋಪಾಲಗೌಡ ಕುರಿತು ನೆಂಪೆ ದೇವರಾಜ, ಹಾಸ್ಯ ನಟ ನರಸಿಂಹರಾಜು ಕುರಿತು ಶ್ರೀಮತಿ ಸುಧಾ ನರಸಿಂಹರಾಜು ಅವರು ಮಾತನಾಡಲಿದ್ದಾರೆ.

**ಗೋಷ್ಠಿ-2:** ಮಧ್ಯಾಹ್ನ 3-30 ರಿಂದ 5-15ರವರೆಗೆ ಸಂಕೀರ್ಣ ಗೋಷ್ಠಿ ಜರುಗಲಿದೆ. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹರಿಕೃಷ್ಣ ಪುನರೂರು ಅಧ್ಯಕ್ಷತೆ ವಹಿಸಲಿದ್ದು, ಗಮಕ ಕಲೆ ಅಳಿವು, ಉಳಿವು ಕುರಿತು ಡಾ.ಎ.ವಿ.ಪ್ರಸನ್ನ, ಲಿಂಗತ್ವ ಅಲ್ಪಸಂಖ್ಯಾತರ ಭವಿಷ್ಯ ಮತ್ತು ಭರವಸೆಗಳು ಕುರಿತು ಶ್ರೀಮತಿ ಕೆ.ಸಿ.ಅಕ್ಷತಾ, ಮೊಬೈಲ್: ಸಾಧಕ ಮತ್ತು ಬಾಧಕಗಳು ಕುರಿತು ಡಾ. ಶುಭಾ ಮರವಂತೆ, ಪೊಲೀಸ್ ಸಾಹಿತ್ಯ ಕುರಿತು ಡಿ.ಸಿ.ರಾಜಪ್ಪ ಅವರು ಮಾತನಾಡಲಿದ್ದಾರೆ.

**ಗೋಷ್ಠಿ-3:** ಸಂಜೆ 5 ರಿಂದ 15 ರಿಂದ 7 ಗಂಟೆವರೆಗೆ ಬೆಳ್ಳಿತೆರೆ-ಕಿರುತೆರೆ ಜರುಗಲಿದೆ. ಹಿರಿಯ ಕಲಾವಿದ ಎಚ್.ಜಿ. ದತ್ತಾತ್ರೇಯ(ದತ್ತಣ್ಣ) ಅವರು ಅಧ್ಯಕ್ಷತೆ ವಹಿಸಲಿದ್ದಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ ಕಶ್ಯಪ್ ಆಶಯ ನುಡಿಗಳನ್ನಾಡಲಿದ್ದಾರೆ.

ಚಲನಚಿತ್ರ ಸಾಹಿತ್ಯ ಪರಂಪರೆ ಕುರಿತು ಎನ್.ಎಸ್.ಶ್ರೀಧರಮೂರ್ತಿ, ಸಮಾಜದ ಮೇಲೆ ಧಾರಾವಾಹಿಗಳ ಪರಿಣಾಮ ಕುರಿತು ಶ್ರೀಮತಿ ಕುಸುಮ ಆಯರಹಳ್ಳಿ ಹಾಗೂ ಕನ್ನಡ ಚಲನಚಿತ್ರ ಗಳಲ್ಲಿ ದೇಶಭಕ್ತಿ ಮತ್ತು ಕನ್ನಡಪರ ಗೀತಗೆಳು ಕುರಿತು ಪ್ರಕಾಶ್ ಮಲ್ಪೆ ಅವರು ಮಾತನಾಡಲಿದ್ದಾರೆ. ಸಂಜೆ 7 ರಿಂದ ರಾತ್ರಿ 10ರವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

## ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆ ಜಿಲ್ಲೆಯ ಪ್ರಾತಿನಿಧ್ಯ

ಏಲಕ್ಕಿ ಕಂಪಿನ ಹಾವೇರಿ ನಗರದಲ್ಲಿ ಆಯೋಜನೆಗೊಂಡಿರುವ ಅಖಿಲ ಭಾರತ 86ನೇಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆ ಜಿಲ್ಲೆಯ ಕವಿಗಳು ಕಲಾವಿದರು ಗಣನೀಯ ಪ್ರಮಾಣದಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ ತಿಳಿಸಿದರು.

ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಹರಿಹರದ ಕೆ. ರವಿಕುಮಾರ್ ಮತ್ತು ತಂಡದ ವೀರಗಾಸೆ, ಹೊನ್ನಾಳಿ ತಾಲ್ಲೂಕು ನರಸಗೊಂಡನಹಳ್ಳಿಯ ಹೆಚ್.ಇ. ಬಸವರಾಜ್ ಅವರ ಕೀಲುಕುದುರೆ ಕಲಾತಂಡ ಭಾಗವಹಿಸಲಿದೆ.

ಶುಕ್ರವಾರ ಮಧ್ಯಾಹ್ನ ಪ್ರಧಾನ ವೇದಿಕೆಯಲ್ಲಿ ಜರುಗುವ ಸಾಮರಸ್ಯ ಭಾವ - ಕನ್ನಡ ಜೀವ ಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಶುಕ್ರವಾರ ಪ್ರಧಾನ ವೇದಿಕೆಯಲ್ಲಿ 4ಕ್ಕೆ ನಡೆಯುವ ಒಂದನೇ ಕವಿಗೋಷ್ಠಿಯಲ್ಲಿ ಹೆಚ್.ಬಿ. ಇಂದ್ರಕುಮಾರ್, ಮುದ್ದುವೀರಸ್ವಾಮಿ ಹಿರೇಮಳಲಿ ಮತ್ತು ಸದಾಶಿವ ಸೊರಟೂರು ಕಾವ್ಯ ವಾಚನ ಮಾಡಲಿದ್ದಾರೆ.

ಶನಿವಾರ ಬೆಳಗ್ಗೆ 10.30ಕ್ಕೆ ಮೂರನೇಯ ವೇದಿಕೆಯಲ್ಲಿ ನಡೆಯುವ ಮರೆಯಲಾಗದ ಮಹನೀಯರು ಗೋಷ್ಠಿಯ ಅಧ್ಯಕ್ಷತೆಯನ್ನು ಹೆಚ್.ಎ. ಭಿಕ್ಷಾವರ್ತಿಮಠ ವಹಿಸುವರು. ಅಂದು ಮಧ್ಯಾಹ್ನ 2ಕ್ಕೆ ಎರಡನೇಯ ವೇದಿಕೆಯಲ್ಲಿ ನಡೆಯುವ ಎರಡನೇ ಕವಿಗೋಷ್ಠಿಯಲ್ಲಿ ಪಾಪುಗುರು ಕಾವ್ಯನಾಮದ ಎಸ್. ಗುರುಬಸವರಾಜ್ ಕವಿತೆ ವಾಚಿಸಲಿದ್ದಾರೆ.

ಪ್ರತಿದಿನ ಸಂಜೆ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅನುಭವ ಮಂಟಪ ಶಾಲಾ ವಿದ್ಯಾರ್ಥಿಗಳಿಂದ ಎಲ್ಲಮ್ಮ ನೃತ್ಯ, ಮೀನಾಕ್ಷಿ ಮತ್ತು ಸಂಗಡಿಗರಿಂದ ಜನಪದ ನೃತ್ಯ ಮತ್ತು ವಿದುಷಿ ಮಾಧವಿ ಗೋಪಾಲಕೃಷ್ಣ ಅವರ ನಮನ ಅಕಾಡೆಮಿಯಿಂದ ಭರತ ನಾಟ್ಯ ಪ್ರದರ್ಶನ ನೀಡಲಿದ್ದಾರೆ. ಭಾನುವಾರ ನಡೆಯುವ ಸಾಧಕರಿಗೆ ಸನ್ಮಾನದಲ್ಲಿ ಶಾಸಕ ಎಸ್.ಎ.ರವೀಂದ್ರನಾಥ ಅವರಿಗೆ ಗೌರವ ಸಮರ್ಪಣೆ ನೆರವೇರಲಿದೆ.

## ಕಸಾಪ ಸಮ್ಮೇಳನಕ್ಕಾಗಿ ಹೆಚ್ಚುವರಿ ರೈಲು ವ್ಯವಸ್ಥೆ

ಹಾವೇರಿಯಲ್ಲಿ ನಡೆಯುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಾಹಿತ್ಯಾಸಕ್ತರಿಗೆ ಭಾರತೀಯ ರೈಲ್ವೆ ಇಲಾಖೆಯು ಹಾವೇರಿ-ಹುಬ್ಬಳ್ಳಿ ಮತ್ತು ಹಾವೇರಿ-ಹರಿಹರ ನಡುವೆ ಸಾಹಿತ್ಯ ಸಮ್ಮೇಳನ ನಡೆಯುವ ಮೂರು ದಿನಗಳ ಕಾಲ ಕ್ರಮವಾಗಿ 07311 ರಿಂದ 07318 ರವರೆವರೆಗೆ 08 ವಿಶೇಷ ಡೆಮೋ ರೈಲುಗಳನ್ನು ಪ್ರತಿ ಗಂಟೆಗೆ ಒಂದರಂತೆ ಬೆಳಿಗ್ಗೆ 7.45ರಿಂದ ರಾತ್ರಿ 11.50 ರವರೆಗೆ ಓಡಿಸುತ್ತಿದೆ.

16501, 16502, 16505, 16506, 16507, 16508, 16517 ಎಲ್ಲಾ ಸಂಖ್ಯೆಯ ವಿಶೇಷ 07 ಎಕ್ಸ್‌ಪ್ರೆಸ್ ರೈಲುಗಳನ್ನು ಸಾಹಿತ್ಯ ಸಮ್ಮೇಳನ ನಡೆಯುವ ಮೂರು ದಿನಗಳ ಕಾಲ ಹಾವೇರಿ-ಯಶವಂತಪುರ ನಡುವೆ ಓಡಿಸಲಾಗುತ್ತಿದೆ. ಅಷ್ಟೇ ಅಲ್ಲದೆ ನಿಲುಗಡೆ ಇಲ್ಲದ 20653, 20654, 22685, 22686, 22498, 16587, 14806 ಎಲ್ಲಾ ಸಂಖ್ಯೆ 07 ಎಕ್ಸ್‌ಪ್ರೆಸ್ ನಾನ್ ಸ್ಟಾಪ್ ರೈಲುಗಳನ್ನು ಹಾವೇರಿ ರೈಲು ನಿಲ್ದಾಣದಲ್ಲಿ ತಾತ್ಕಾಲಿಕವಾಗಿ ನಿಲುಗಡೆಗೊಳಿಸಲಾಗಿದೆ.

## ತಂತ್ರಜ್ಞಾನ ವೆಚ್ಚದಲ್ಲಿ ಭಾರತ ಮುಂದುವರಿದ ದೇಶಗಳ ಸಾಲಿನಲ್ಲಿ

**ನಡೆಲ್ಲಾ**

ಬೆಂಗಳೂರು, ಜ. 5 – ತಂತ್ರಜ್ಞಾನಕ್ಕೆ ವೆಚ್ಚ ಮಾಡುವ ಪ್ರಮಾಣದಲ್ಲಿ ಭಾರತವು ವಿಶ್ವದ ಮೊದಲ ಹತ್ತು ದೇಶಗಳ ಸಾಲಿನಲ್ಲಿದೆ ಎಂದು ಮೈಕ್ರೋಸಾಫ್ಟ್ ಅಧ್ಯಕ್ಷ ಹಾಗೂ ಸಿಇಒ ಸತ್ಯ ನಡೆಲ್ಲಾ ಹೇಳಿದ್ದಾರೆ. ಭಾರತದ ಆರ್ಥಿಕತೆ ಕುರಿತ ಪ್ರಶ್ನೆಗೆ ಉತ್ತರಿಸುತ್ತಿದ್ದ ಅವರು, ಭಾರತದ ಒಟ್ಟಾರೆ ಆರ್ಥಿಕತೆಗೆ ಹೋಲಿಸಿದರೆ ತಂತ್ರಜ್ಞಾನ ವಲಯದಲ್ಲಿ ಮಾಡುತ್ತಿರುವ ವೆಚ್ಚ ಹೆಚ್ಚಾಗುತ್ತಿದೆ. ತಂತ್ರಜ್ಞಾನಕ್ಕಾಗಿ ಮಾಡುತ್ತಿರುವ ವೆಚ್ಚ ಮುಂದುವರಿದ ದೇಶಗಳನ್ನು ಹೋಲುವಂತಿದೆ ಎಂದರು.

## ನಗರದ ಹಳೇ ಬೇತೂರು ರಸ್ತೆಯ ಬನಶಂಕರಿ ದೇವಸ್ಥಾನದಲ್ಲಿ ದೀಪಾರಾಧನೆ



ಹಳೇ ಬೇತೂರು ರಸ್ತೆಯಲ್ಲಿರುವ ಶ್ರೀ ಬನಶಂಕರಿ ದೇವಸ್ಥಾನದಲ್ಲಿ 30ನೇ ವರ್ಷದ ಬನದ ಹುಣ್ಣಿಮೆ ದಿನವಾದ ಇಂದು ಬೆಳಗಿನಜಾವ 5 ಗಂಟೆಗೆ ದೀಪಾರಾಧನೆ ಹಾಗೂ ಅಭಿಷೇಕ ಬೆಳಿಗ್ಗೆ 9 ಕ್ಕೆ ಶ್ರೀ ದೇವಿಗೆ ವಿಶೇಷ ಹೂವಿನ ಅಲಂಕಾರ ನಂತರ ತೀರ್ಥ ಪ್ರಸಾದ ವಿನಿಯೋಗ ಸಂಜೆ 5.30 ಕ್ಕೆ ಶ್ರೀ ಪೂಜ್ಯನೀಯರಿಂದ ರಥೋತ್ಸವಕ್ಕೆ ಚಾಲನೆ ನೀಡಲಾಗುತ್ತದೆ.

## ನಗರದ ಶಿವಗಂಗೋತ್ರಿಯಲ್ಲಿ ಇಂದು ಸಾಂಸ್ಕೃತಿಕ ಸ್ಪರ್ಧೆಗಳು

ಶಿವಗಂಗೋತ್ರಿ 2023 ಯುವ ಜನೋತ್ಸವದ ಆಶ್ರಯದಲ್ಲಿ ಅಂತರ್ ವಿಭಾಗ ಸಾಂಸ್ಕೃತಿಕ ಸ್ಪರ್ಧೆಗಳನ್ನು ದಾವಣಗೆರೆ ವಿಶ್ವವಿದ್ಯಾನಿಲಯದ ಎಂ.ಬಿ.ಎ. ಆಡಿಟೋರಿಯಂನಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಅಧ್ಯಕ್ಷತೆಯನ್ನು ದಾವಣಗೆರೆ ವಿವಿ ಕುಲಪತಿಗಳಾದ ಡಾ. ಬಿ.ಡಿ. ಕುಂಬಾರ ವಹಿಸುವರು. ಕಾರ್ಯಕ್ರಮವನ್ನು ದಾವಣಗೆರೆ ವಿವಿ ಕುಲಸಚಿವರಾದ ಶ್ರೀಮತಿ ಜಿ.ಬಿ. ಸರೋಜ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಪರೀಕ್ಷಾಂಗ ಕುಲಸಚಿವರಾದ ಡಾ. ಶಿವಶಂಕರ್ ಕೆ., ವಿವಿಯ ಹಣಕಾಸು ಅಧಿಕಾರಿಗಳಾದ ಶ್ರೀಮತಿ ಪ್ರಿಯಾಂಕ ಡಿ. ಆಗಮಿಸುವರು.

ಕಾರ್ಯಕ್ರಮದಲ್ಲಿ ಪ್ರೊ. ಪಿ. ಲಕ್ಷ್ಮಣ್, ಪ್ರೊ. ರಾಮಲಿಂಗಪ್ಪ, ಪ್ರೊ. ವೆಂಕಟೇಶ್ ಕೆ., ಪ್ರೊ. ವೆಂಕಟರಾವ್ ಪಲಾಟೆ ಉಪಸ್ಥಿತರಿರುವರು.

## ನಗರದಲ್ಲಿ ಇಂದು ಎಸ್‌ಆರ್‌ಪಿ ಸಂಭ್ರಮ

ಎಸ್.ಆರ್.ಪಿ. ಕಾನ್ವೆಂಟ್ ಹಾಗೂ ಎಸ್.ಆರ್.ಪಿ. ಹೈಸ್ಕೂಲ್‌ನ 26ನೇ ವಾರ್ಷಿಕೋತ್ಸವದ ಅಂಗವಾಗಿ ಎಸ್.ಆರ್.ಪಿ. ಸಂಭ್ರಮ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10 ಗಂಟೆಗೆ ನಗರದ ಹದಡಿ ರಸ್ತೆಯ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಸಾನ್ನಿಧ್ಯವನ್ನು ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆಯನ್ನು ತ್ಯಾವಣಗಿ ವೀರಭದ್ರಸ್ವಾಮಿ ವಹಿಸುವರು. ಮುಖ್ಯ ಅತಿಥಿಗಳಾಗಿ ಡಿ. ದೇವೇಂದ್ರಪ್ಪ, ರಮೇಶ್ ಜಂಬಣ್ಣ ಗಣಪ, ಶ್ರೀಮತಿ ನಾಗರತ್ನ ಎಸ್.ಎಂ. ಇವರುಗಳು ಆಗಮಿಸುವರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಅನಸೂಯಮ್ಮ ಚಂದ್ರಶೇಖರಯ್ಯ ಜ್ಞಾಪಕಾರ್ಥವಾಗಿ 2021-22ನೇ ಸಾಲಿನ ಎಸ್ಸೆಸ್ಸೆಲ್ಸಿಯಲ್ಲಿ ವಿಶಿಷ್ಟ ದರ್ಜೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು.

## ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಬನದ ಹುಣ್ಣಿಮೆಯ ವಿಶೇಷ ಪೂಜೆ



ದೇವರಾಜ ಅರಸು ಬಡಾವಣೆ ಎ ಬ್ಲಾಕ್ ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದು ಬನದ ಹುಣ್ಣಿಮೆ ಪೂಜೆ ನಡೆಯಲಿದೆ. ಬೆಳಿಗ್ಗೆ ನವಗ್ರಹ ಹೋಮ, ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯುವುದು.

ಶ್ರೀಮತಿ ಶ್ರೀ ಗುತ್ತಿದುರ್ಗದ ನೀಲಕಂಠಪ್ಪ ಹಾಗೂ ಸಹಕುಟುಂಬದವರು ಪೂಜಾ ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ.

## ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಬಿಇಎ ಪ್ರೌಢಶಾಲೆ ವಿದ್ಯಾರ್ಥಿಗಳು ಪ್ರಥಮ



ದಾವಣಗೆರೆ, ಜ. 5 - ನಗರದ ಪಿ.ಜೆ. ಬಡಾವಣೆಯ ಬಿಇಎ ಪ್ರೌಢಶಾಲೆ, ಶಾಲೆಯ ವಿದ್ಯಾರ್ಥಿಗಳಾದ ಅಂಜಲಿ ಬಿ.ಆರ್. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯ ಭರತನಾಟ್ಯದಲ್ಲಿ ಪ್ರಥಮ ಸ್ಥಾನ ಹಾಗು ರುದ್ರೇಶ್ ಜಿಲ್ಲಾ ಮಟ್ಟದ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ನಡೆದ ಕ್ರೀಡಾ ಕೂಟದಲ್ಲಿ ಭಾಗವಹಿಸಿ ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನ ಪಡೆದಿದ್ದು, ಇಬ್ಬರೂ ರಾಜ್ಯ ಮಟ್ಟ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಇವರನ್ನು ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಶಾಮನೂರು ಶಿವಶಂಕರಪ್ಪ, ಶಾಲಾ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಕಿರುವಾಡಿ ಗಿರಿಜಮ್ಮ, ಶಾಲಾ ಮುಖ್ಯೋಪಾಧ್ಯಾಯ ರವಿ ಅವರು ಅಭಿನಂದಿಸಿದ್ದಾರೆ.

## ದೊಡ್ಡ ರಂಗೇಗೌಡರ ವ್ಯಂಗ್ಯ ಭಾವಚಿತ್ರವನ್ನು ಸ್ಥಳದಲ್ಲೇ ರಚಿಸಿದ ಎಚ್.ಬಿ.ಮಂಜುನಾಥ್





ದಾವಣಗೆರೆ, ಜ.5- ನಾಳೆ ಆರಂಭವಾಗುತ್ತಿರುವ ಅಖಿಲ ಭಾರತ 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿರುವ ಡಾ. ದೊಡ್ಡರಂಗೇಗೌಡರು ನಗರದ ಕುವೆಂಪು ಕನ್ನಡ ಭವನಕ್ಕೆ ಇಂದು ಆಗಮಿಸಿದ ಸಂದರ್ಭದಲ್ಲಿ ಅವರ ವ್ಯಂಗ್ಯ ಭಾವಚಿತ್ರವನ್ನು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ, ಹಿರಿಯ ವ್ಯಂಗ್ಯಚಿತ್ರಕಾರರೂ ಆದ ಹೆಚ್.ಬಿ.ಮಂಜುನಾಥ್ ಅವರು, ಸ್ಥಳದಲ್ಲೇ ರಚಿಸಿದರು. ಅದನ್ನು ನೋಡಿ ಮೆಚ್ಚಿಗೆ ವ್ಯಕ್ತಪಡಿಸಿದ ದೊಡ್ಡರಂಗೇಗೌಡರು, 'ಕಲಾ ಸರಸ್ವತಿಯೇ ನಿಮಗೆ ಒಲಿದಿದ್ದಾಳೆ' ಎಂದು ಹೇಳಿದರಲ್ಲದೇ 'ನಿಮ್ಮ ಸೃಜನೆಗೆ ನನ್ನ ನಮನ' ಎಂದು ಬರೆದು ಹಸ್ತಾಕ್ಷರ ಸಹ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ. ವಾಮದೇವಪ್ಪ, ಪದಾಧಿಕಾರಿಗಳು, ಕನ್ನಡಾಭಿಮಾನಿಗಳು ಉಪಸ್ಥಿತರಿದ್ದರು.

## ಆವರಗೆರೆಯಲ್ಲಿ ಬನಶಂಕರಿ ದೇವಿ ಜಾತ್ರೆ

ದಾವಣಗೆರೆ, ಜ. 5 - 30ನೇ ವಾರ್ಡ್ ಆವರಗೆರೆಯಲ್ಲಿರುವ ಶ್ರೀ ಬನಶಂಕರಿ ದೇವಿ ದೇವಸ್ಥಾನದಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಜಾತ್ರಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ.


ಶ್ರೀ ಬನಶಂಕರಿ ದೇವಸ್ಥಾನ ಟ್ರಸ್ಟ್ ವತಿಯಿಂದ ಜಾತ್ರಾ ಮಹೋತ್ಸವ ಅಂಗವಾಗಿ ಬೆಳಿಗ್ಗೆ 7.30ಕ್ಕೆ ಗಂಗಾ ಪೂಜೆ ಶಾರಾಂಬರಿ ವ್ರತ, ಪಂಚಾಮೃತ ಅಭಿಷೇಕ ಹಾಗೂ ದೇವಿಗೆ ವಿಶೇಷ ಮಹಾಮಂಗಳಾರತಿ ಹಾಗೂ ವಿಶೇಷ ಅಲಂಕಾರ ಮಾಡಲಾಗುತ್ತದೆ. 30ನೇ ವಾರ್ಡಿನ ಪ್ರಮುಖ ಬೀದಿಗಳಲ್ಲಿ ದೇವಿ ಮೆರವಣಿಗೆ ಏರ್ಪಡಿಸಲಾಗಿದೆ. ಎಂದು ದೇವಸ್ಥಾನ ಸಮಿತಿ ಅಧ್ಯಕ್ಷರು ಹಾಗೂ ಹಿರಿಯ ನ್ಯಾಯವಾದಿ ಎಸ್.ಪರಮೇಶ ತಿಳಿಸದ್ದಾರೆ.

## ಹರಿಹರ : ಅಂತಿಮ ಮತದಾರರ ಪಟ್ಟಿ ಪಕ್ಷಗಳಿಗೆ ವಿತರಣೆ

ಹರಿಹರ, ಜ. 5 – ವಿಧಾನಸಭಾ ಕ್ಷೇತ್ರದ ಮತದಾರರ ಅಂತಿಮ ಪಟ್ಟಿಯನ್ನು ತಹಶೀಲ್ದಾರ್ ಎ.ಬಿ. ಅಶ್ವತ್ಥ್ ಅವರು ತಮ್ಮ ಕಚೇರಿಯಲ್ಲಿ ವಿವಿಧ ಪಕ್ಷದ ಮುಖಂಡರಿಗೆ ವಿತರಣೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಜೆಡಿಸ್ ಪಕ್ಷದ ನಗರ ಘಟಕದ ಅಧ್ಯಕ್ಷ ಹಬೀಬುಲ್ಲಾ, ಕಲ್ಲಯ್ಯ ಸ್ವಾಮಿ, ಕಾಂಗ್ರೆಸ್ ಪಕ್ಷದ ನಗರ ಘಟಕದ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಕೆ.ಬಿ. ರಾಜಶೇಖರ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಅಜಿತ್ ಸಾವಂತ್, ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ಹೆಚ್.ಕೆ. ಕೊಟ್ರಪ್ಪ, ಬಹುಜನ ಸಮಾಜ ಪಕ್ಷದ ಅಧ್ಯಕ್ಷ ಕೇಶವ ಮತ್ತು ಚುನಾವಣೆ ಶಾಖೆಯ ಸೋಮಶೇಖರ, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಉತ್ಸವಾಂಭ ದೇವಿ ಜಾತ್ರೆ



ವಸಂತ ರಸ್ತೆಯ ಹಾಲಸ್ವಾಮಿ ಪ್ರಿಂಟಿಂಗ್ ಪ್ರೆಸ್ ಹಿಂಭಾಗದಲ್ಲಿರುವ ಶ್ರೀ ಉತ್ಸವಾಂಭದೇವಿ, ಶ್ರೀ ಚೌಡೇಶ್ವರಿದೇವಿ, ಶ್ರೀ ಗಣೇಶ, ಶ್ರೀ ಆದಿಶಕ್ತಿ, ಮಹಾಲಕ್ಷ್ಮೀ ದೇವಿ ದೇವರುಗಳ ಜಾತ್ರಾ ಮಹೋತ್ಸವವು ಇಂದು ನಡೆಯಲಿದೆ. ಬೆಳಗಿನ ಜಾವ 4.30ಕ್ಕೆ ತಾಯಿಗೆ ರುದ್ರಾ ಭಿಷೇಕ, ಸಹಸ್ರ, ಬಿಲ್ವಾರ್ಚನೆ, ಪುಷ್ಪ ಅಲಂಕಾರ ಪೂಜೆ ಹಾಗೂ 9.30 ರಿಂದ ಸರ್ವ ಭಕ್ತಾದಿಗಳಿಂದ ಉಡಿ ಅಕ್ಕಿ ಸೇವೆ ಮತ್ತು ಮಧ್ಯಾಹ್ನ 12 ಗಂಟೆಗೆ ಪ್ರಸಾದ ವಿನಿಯೋಗ ಕಾರ್ಯಕ್ರಮವಿರುತ್ತದೆ. ಸಂಜೆ 5.30ರಿಂದ ಮಾತೋಶ್ರೀಯವರ ಮೆರವಣಿಗೆ ಇರುತ್ತದೆ.

## ನಗರದಲ್ಲಿ ಇಂದು ದೇವಾಂಗ ಪೇಟೆ ಬನಶಂಕರಿ ದೇವಿ ಉತ್ಸವ



ಹಳೇಭಾಗದ ದೇವಾಂಗ ಪೇಟೆಯಲ್ಲಿ ಬನದ ಹುಣ್ಣಿಮೆ ಪ್ರಯುಕ್ತ ಇಂದು ಬೆಳಿಗ್ಗೆ ಬನಶಂಕರಿ ದೇವಿಮೂರ್ತಿಗೆ ಅಭಿಷೇಕ, ವಿಶೇಷ ಪೂಜೆ, ಹೂವಿನ ಅಲಂಕಾರ, ಸಂಜೆ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಮೆರವಣಿಗೆ ಮಾಡಲಾಗುವುದು ಎಂದು ದೇವಾಂಗ ಸಮಾಜದ ಟಿ.ರಾಜಣ್ಣ ತಿಳಿಸಿದ್ದಾರೆ.

## ಬನಶಂಕರಿ ದೇವಿಗೆ ಬೆಳ್ಳಿ ಮೂರ್ತಿ ಸಮರ್ಪಣೆ



ದಾವಣಗೆರೆ, ಜ.5- ನಗರದ ಡಿಸಿಎಂ ಟೌನ್‌ಶಿಪ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಿಗೆ ಬನದ ಹುಣ್ಣಿಮೆ ಪ್ರಯುಕ್ತ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಶ್ರೀಮತಿ ಗೌರಮ್ಮಗೌಡ್ರ ಜಯಪ್ಪ ಮತ್ತು ಮಕ್ಕಳು ಚಾರಿಟೇಬಲ್ ಟ್ರಸ್ಟ್ (ಆವರಗೆರೆ) ಇವರಿಂದ ಶ್ರೀ ಬನಶಂಕರಿ ದೇವಿಗೆ ಬೆಳ್ಳಿಮೂರ್ತಿ ಸಮರ್ಪಣೆ ಮಾಡಲಾಯಿತು.

## ಗೋಣಿವಾಡದಲ್ಲಿ ಇಂದಿನ ಸೋಮೇಶ್ವರೋತ್ಸವಕ್ಕೆ ಪ್ರೊ. ಕೃಷ್ಣೇಗೌಡ



ಚನ್ನಗಿರಿ ಮುಖ್ಯರಸ್ತೆಯ ಗೋಣಿವಾಡದಲ್ಲಿರುವ ಶ್ರೀ ಸೋಮೇಶ್ವರ ವಸತಿಯುತ ವಿದ್ಯಾಲಯದಲ್ಲಿ ಸೋಮೇಶ್ವರೋತ್ಸವ-2023 ಕಾರ್ಯಕ್ರಮದ ಉದ್ಘಾಟನಾ ಸಮಾರಂಭವು ಇಂದು ಸಂಜೆ 5.45ಕ್ಕೆ ಜರುಗಲಿದೆ. ಬೆಳಗಾವಿ ಜಿಲ್ಲೆಯ ಹುಕ್ಕೇರಿ ಹಿರೇಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜರುಗುವ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಉದ್ಘಾಟಿಸಲಿದ್ದಾರೆ. ಖ್ಯಾತ ವಾಗ್ಮಿ ಪ್ರೊ. ಎಂ. ಕೃಷ್ಣೇಗೌಡ ಅವರು 'ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪೋಷಕರ ಪಾತ್ರ' ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮಾಜಿ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಶಾಸಕ ಮಾಡಾಳು ವಿರೂಪಾಕ್ಷಪ್ಪ, ಮಾಜಿ ಮೇಯರ್ ಬಿ.ಜಿ. ಅಜಯಕುಮಾರ್, ಅರ್ಬನ್ ಕೋ-ಆಪ್ ಬ್ಯಾಂಕ್‌ನ ನಿರ್ದೇಶಕ ಕಂಚಿಕೇರಿ ಮಹೇಶ್ ಪಾಲ್ಗೊಳ್ಳಲಿದ್ದು, ಶಾಲೆಯ ಅಧ್ಯಕ್ಷ ಹೆಚ್.ಆರ್. ಅಶೋಕ ರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ವೇಳೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.98.72 ಅಂಕ ಗಳಿಸಿದ ಶಾಲೆಯ ವಿದ್ಯಾರ್ಥಿನಿ ಜಿ.ಬಿ. ಜೀವಿತ ಅವರಿಗೆ 'ಸೋಮೇಶ್ವರ ಸಾಧನ ಸಿರಿ' ಪ್ರಶಸ್ತಿ ನೀಡಿ ಗೌರವಿಸಲಾಗುವುದು.

ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ

ಸ್ಟೋರ್ ಹಾಗೂ ಗೋಡೌನ್‌ನಲ್ಲಿ ಸ್ಟಾಕ್ ತೆಗೆಯಲು ಹಾಗೂ ಕಾರ್‌ಸೆಂಟರ್‌ನಲ್ಲಿ ಕೆಲಸ ಮಾಡಲು PUC/ ITI/ Diploma ಆದ ಹುಡುಗರು ಬೇಕಾಗಿದ್ದಾರೆ. ಆಕರ್ಷಕ ಸಂಬಳ, ಬೋನಸ್, ಮಧ್ಯಾಹ್ನ ಹಾಗೂ ರಾತ್ರಿಯ ಊಟದ ವ್ಯವಸ್ಥೆ ಇರುತ್ತದೆ

ಎ.ಕೆ. ಫಾರ್ಮ

ಹದಡಿ ರೋಡ್, ತರಳಬಾಳು ಸ್ಕೂಲ್ ಎದುರು, ಶ್ರೀನಿವಾಸ ನಗರ, ದಾವಣಗೆರೆ.

Call : 88678 57260, 96117 26499

Whatsapp : 98800 00260

# ಕನ್ನಡ ಮಾನವೀಯ ನೆಲೆಯುಳ್ಳ ಭಾಷೆ

## 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಡಾ. ದೊಡ್ಡ ರಂಗೇಗೌಡ

**ಜಿಲ್ಲಾ ಕಸಾಪದಿಂದ ದೊಡ್ಡ ರಂಗೇಗೌಡರಿಗೆ ಆತ್ಮೀಯ ಸನ್ಮಾನ**

**ಕುವೆಂಪು ಭವನದಲ್ಲಿ ಬೆಣ್ಣೆ ದೋಸೆ ಸವಿದ ಹಿರಿಯ ಕವಿ, ಚಿಂತಕ**

ದಾವಣಗೆರೆ, ಜ. 5- ಕನ್ನಡ ಧೀಮಂತ ಭಾಷೆ, ಮಧುರವಾದ ಭಾಷೆ, ಮಾನವೀಯ ನೆಲೆಯುಳ್ಳ ಭಾಷೆ ಎಂದು ಹಿರಿಯ ಕವಿ ಡಾ. ದೊಡ್ಡ ರಂಗೇಗೌಡ ಹೇಳಿದರು.

ಹಾವೇರಿಯಲ್ಲಿ ನಾಳೆಯಿಂದ ಆರಂಭವಾಗಲಿರುವ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ ವಹಿಸಿಕೊಳ್ಳಲಿರುವ ಅವರು, ಹಾವೇರಿಗೆ ಹೋಗುವ ಮಾರ್ಗದಲ್ಲಿ ನಗರದ ಕುವೆಂಪು ಕನ್ನಡ ಭವನಕ್ಕೆ ಆಗಮಿಸಿ ಜಿಲ್ಲಾ ಕಸಾಪ ಹಾಗೂ ಅಭಿಮಾನಿಗಳ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ನಮ್ಮಲ್ಲಿ ಇಚ್ಛಾಶಕ್ತಿ ಇದ್ದರೆ ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರವನ್ನು ಕನ್ನಡದಲ್ಲಿ ಹೇಳಲು ಸಾಧ್ಯವಿದೆ. ವೈದ್ಯಕೀಯ ಶಾಸ್ತ್ರವನ್ನು ಕನ್ನಡದಲ್ಲಿ ಹೇಳಿದ ಮಹನೀಯರಿದ್ದಾರೆ. ಯೋಮ ವಿಜ್ಞಾನವನ್ನು ಕನ್ನಡದಲ್ಲಿ ಹೇಳಬಲ್ಲ ಬೇಕಾದಷ್ಟು ಕನ್ನಡಿಗರಿದ್ದಾರೆ. ಕನ್ನಡದಲ್ಲಿ ಸುಲಿದ ಬಾಳೆಯ ಹಣ್ಣಿನಂತೆ ಹೇಳುವ ವಿದ್ವಾಂಸರು ನಮ್ಮಲ್ಲಿದ್ದಾರೆ ಎಂದು ಹೇಳಿದರು.

ಕನ್ನಡಿಗರು ಯಾವತ್ತೂ ಎದೆ ಸೆಟೆಸಿ ಮುಂದೆ ಹೋಗಬೇಕು. ನಾವು ಪರಂಪರಾನುಗತವಾದ ಎಲ್ಲಾ ಪರಾಕ್ರಮವನ್ನು, ತೇಜಸ್ಸನ್ನು ಪಡೆದುಕೊಂಡಿದ್ದೇವೆ ಎಂದರು.

ಕನ್ನಡ ನಾಡಿನ ಅಂಗುಲಂಗುಲ ನೆಲವನ್ನು ಕೂಡ ನಾವು ಮರಾಠಿಗರಿಗೆ ಬಿಟ್ಟು ಕೊಡುವುದಿಲ್ಲ ಎಂಬುದು ನಮ್ಮ ಕಾರ್ಯತಂತ್ರವಾಗಬೇಕು. ಇದಕ್ಕೆ ಬೇಕಾದಷ್ಟು ಆಧಾರಗಳಿವೆ. ನೀವೆಲ್ಲ ಮಹಾಜನ್ ವರದಿಯನ್ನು ಓದಬೇಕು. ಮಹಾಜನ್ ವರದಿ ಹೇಳುವ ಪ್ರಕಾರ ಬೆಳಗಾವಿ ಕರ್ನಾಟಕಕ್ಕೆ ಸೇರಬೇಕು ಎಂದಿದೆ ಎಂದರು.

ಕೇರಳದಲ್ಲಿ ಇತ್ತೀಚಿನ ದಿನಗಳಲ್ಲಿ ಒಂದಷ್ಟು ಕಿರುಕುಳಗಳು ಪ್ರಾರಂಭವಾಗಿವೆ. ಕೇರಳದ ಶಾಲೆಗಳಲ್ಲಿ ಕನ್ನಡದ ಮಕ್ಕಳಿಗೆ ಕನ್ನಡವನ್ನು ಹೇಳಿಕೊಡುತ್ತಿಲ್ಲ. ಅಲ್ಲಿ ಕನ್ನಡದ ಅಧ್ಯಾಪಕರೇ ಇಲ್ಲ. ಕನ್ನಡದ ಮಕ್ಕಳಿಗೆ ಅಲ್ಲಿ ವಿದ್ಯಾಭ್ಯಾಸವಿಲ್ಲದೆ ಸೊರಗಿ ಹೋಗುತ್ತಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪನವರು ಜಿಲ್ಲಾಡಳಿತ, ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಡಾ. ದೊಡ್ಡರಂಗೇಗೌಡ ಅವರನ್ನು ಸ್ವಾಗತಿಸಿ, ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ವಾಮದೇವಪ್ಪ, ಹಿರಿಯ ಸಾಹಿತಿಗಳು, ಚಿಂತಕರೂ ಆದ ಡಾ.ದೊಡ್ಡ ರಂಗೇಗೌಡರು 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ ಸಂಘಟನಾ ಕಾರ್ಯದರ್ಶಿ ಜಿ. ರುದ್ರಯ್ಯ, ಮಾಜಿ ಅಧ್ಯಕ್ಷ ಎ.ಆರ್. ಉಜ್ಜನಪ್ಪ, ಜಿಲ್ಲಾ ಗೌರವ ಕಾರ್ಯದರ್ಶಿಗಳಾದ ಬಿ. ದಿಳ್ಳೆಪ್ಪ, ರೇವಣಸಿದ್ದಪ್ಪ ಅಂಗಡಿ, ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ, ಸಂಘಟನಾ ಕಾರ್ಯದರ್ಶಿ ಸಿ.ಜಿ. ಜಗದೀಶ್ ಕೂಲಂಬಿ, ಜಿಗಳಿ ಪ್ರಕಾಶ್, ಬಾ.ಮ. ಬಸವರಾಜಯ್ಯ, ಹೆಚ್.ಬಿ. ಮಂಜುನಾಥ್, ಕೆ.ಬಿ. ಕೊಟ್ರೇಶ್, ಜಿಲ್ಲಾ ಪದಾಧಿಕಾರಿಗಳಾದ ರುದ್ರಾಕ್ಷಿ ಬಾಯಿ, ಭೈರೇಶ್, ಮಧುಕುಮಾರ್ ಎಲ್.ಜಿ, ಪತ್ರಕರ್ತ ರವಿ ಬಾಬು, ವಿವೇಕ್, ಸಿಂಗಾಪುರದ ಪರಮೇಶ್ವರಪ್ಪ, ಮಾರುತಿ ಸಂತೆಬೆನ್ನೂರು ಇತರರಿದ್ದರು.



# ಜಿಲ್ಲೆಯಲ್ಲಿ ಈಗ 14 ಲಕ್ಷ ಮತದಾರರು



(1ನೇ ಪುಟದಿಂದ) ಸಾವಿರ ಪುರುಷ ಮತದಾರರಿಗೆ 993 ಮಹಿಳಾ ಮತದಾರರಿದ್ದಾರೆ ಎಂದವರು ಹೇಳಿದರು.

**ತಿದ್ದುಪಡಿಗಿದೆ ಅವಕಾಶ :** 2023ರ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸುವ ಕೊನೆಯ ದಿನಾಂಕಕ್ಕೆ 10 ದಿನದ ಮುಂಚಿನವರೆಗೂ ತಿದ್ದುಪಡಿ ಹಾಗೂ ಸೇರ್ಪಡೆಗೆ ಅರ್ಜಿ ಸಲ್ಲಿಸಬಹುದು ಎಂದು ಜಿಲ್ಲಾಧಿಕಾರಿ ಹೇಳಿದರು.

**ಯುವ ಸೇರ್ಪಡೆಯೇ ಹೆಚ್ಚು :** ಪರಿಷ್ಕರಣೆ ವೇಳೆ ಸೇರ್ಪಡೆಯಾದವರಲ್ಲಿ ಯುವ ಮತದಾರರೇ ಹೆಚ್ಚಾಗಿದ್ದಾರೆ. 18 ಹಾಗೂ 19 ವರ್ಷದ 13,973 ಮತದಾರರು ಸೇರ್ಪಡೆಯಾಗಿದ್ದಾರೆ. ಈ ವಯೋಮಾನದ ಮತದಾರರ ಸಂಖ್ಯೆ ಜಿಲ್ಲೆಯಲ್ಲೀಗ 23,139.

**ಶೇ.74.3ರ ಆಧಾರ್ ಜೋಡಣೆ :** ಇದುವರೆಗೂ 10.44 ಲಕ್ಷ ಮತದಾರರ ಮಾಹಿತಿಯನ್ನು ಆಧಾರ್‌ಗೆ ಜೋಡಣೆ ಮಾಡಲಾಗಿದೆ. ಇದು ಒಟ್ಟು ಮತದಾರರ ಶೇ.74.3ರಷ್ಟಾಗಿದೆ.

**ಯುವ ಸೇರ್ಪಡೆ ಅಭಿಯಾನ :** 18 ವರ್ಷ ತುಂಬಲಿರುವ ಯುವ ಮತದಾರರ ಹೆಸರನ್ನು ಮತದಾರರ ಪಟ್ಟಿಗೆ ಸೇರ್ಪಡೆ ಮಾಡಲು ಶುಕ್ರವಾರದಿಂದ ಅಭಿಯಾನ ಆರಂಭಿಸಲಾಗುವುದು ಎಂದು ಜಿಲ್ಲಾಧಿಕಾರಿ ಕಾಪಶಿ ಹೇಳಿದರು. ಪತ್ರಿಕಾಗೋಷ್ಠಿ ಯಲ್ಲಿ ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಪಾಲಿಕೆ ಆಯುಕ್ತ ವಿಶ್ವನಾಥ ಮುದಜ್ಜಿ, ಚುನಾವಣಾ ಸಮನ್ವಯ ಅಧಿಕಾರಿ ರೇಷ್ಮ ಹಾನಗಲ್ ಉಪಸ್ಥಿತರಿದ್ದರು.

## ಖಾಸಗಿ ವೆಬ್ ತಾಣಗಳಲ್ಲಿ ಮತದಾರರ ಮಾಹಿತಿ

**ಖಾಸಗಿಯವರ ಬಳಿ ಗುರುತಿನ ಚೀಟಿ ಪಡೆಯಬಾರದು : ಜಿಲ್ಲಾಧಿಕಾರಿ ಕಾಪಶಿ**

ದಾವಣಗೆರೆ, ಜ. 5- ಮತದಾರರ ಗುರುತಿನ ಚೀಟಿಯ ಮಾಹಿತಿ ನೂರಕ್ಕೂ ಹೆಚ್ಚು ಖಾಸಗಿ ವೆಬ್ ತಾಣಗಳಲ್ಲಿರುವುದು ಕಂಡು ಬಂದಿದೆ. ಈ ತಾಣಗಳಿಂದ ಮಾಹಿತಿ ಪಡೆದು ಖಾಸಗಿಯವರು ಅಕ್ರಮವಾಗಿ ಗುರುತಿನ ಚೀಟಿ ಮುದ್ರಿಸುತ್ತಿದ್ದಾರೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮತದಾರರ ಗುರುತಿನ ಚೀಟಿ ವ್ಯವಸ್ಥೆ ಪಾರದರ್ಶಕವಾಗಿ ರಬೇಕೆಂಬ ಉದ್ದೇಶದಿಂದ ಗುರುತಿನ ಚೀಟಿ ಮಾಹಿತಿಯನ್ನು ರಾಜಕೀಯ ಪಕ್ಷಗಳು ಹಾಗೂ ಸಾರ್ವಜನಿಕರ ಜೊತೆ ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದೇ ಮಾಹಿತಿ ದುರ್ಬಳಕೆಯಾಗುತ್ತಿದೆ ಎಂದವರು ವಿಷಾದಿಸಿದರು.

ಖಾಸಗಿ ವೆಬ್ ತಾಣಗಳಲ್ಲಿ ಭಾವಚಿತ್ರ ರಹಿತ ಗುರುತಿನ ಚೀಟಿ ಸಿಗುತ್ತಿದೆ. ಇದನ್ನು ಕೆಲ ಅಂಗಡಿಯವರು ಡೌನ್‌ಲೋಡ್ ಮಾಡಿಕೊಂಡು ಡೂಪ್ಲಿಕೇಟ್ ಕಾರ್ಡ್ ಮುದ್ರಿಸುತ್ತಿದ್ದಾರೆ. ಈ ಗುರುತಿನ ಚೀಟಿ ಹಿಂದಿನ ಅಧಿಕಾರಿಯ ಸಹಿ ನಕಲಿಯಾಗಿದೆ ಎಂದವರು ಹೇಳಿದರು.

ಈ ಅಂಗಡಿಗಳ ವಿರುದ್ಧ ಈಗಾಗಲೇ ಪ್ರಕರಣ ದಾಖಲಿಸಲಾಗಿದೆ. ವೆಬ್ ತಾಣಗಳ ವಿರುದ್ಧ ಕ್ರಮಕ್ಕೆ ವರದಿ ಕಳಿಸಲಾಗಿದೆ ಎಂದು ಕಾಪಶಿ ಹೇಳಿದರು.

ಜನರು ಖಾಸಗಿ ಅಂಗಡಿಗಳ ಬಳಿ ಗುರುತಿನ ಚೀಟಿ ಪಡೆಯಬಾರದು. ಚುನಾವಣಾ ಆಯೋಗದ ವ್ಯವಸ್ಥೆಯಿಂದಲೇ ಅಧಿಕೃತ ಗುರುತಿನ ಚೀಟಿ ಪಡೆಯಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಂಪರ್ಕ ಸಂಖ್ಯೆ : 1950 ಇಲ್ಲವೇ ಜಿಲ್ಲಾ ದೂರು ನಿರ್ವಹಣಾ ಸಂಪರ್ಕ ಸಂಖ್ಯೆಯಾದ : 08192 272953 ಸಂಪರ್ಕಿಸಬಹುದು. ಇಲ್ಲವೇ ಓಟರ್ ಹೆಲ್ಪ್‌ಲೈನ್ ಆಪ್ ಮೂಲಕ ಮೊಬೈಲ್‌ನಲ್ಲೇ ಅಗತ್ಯ ಮಾಹಿತಿ ತಾವೇ ಪಡೆಯಬಹುದು. ಗುರುತಿನ ಚೀಟಿಗೆ ಖಾಸಗಿಯವರ ಮೊರೆ ಹೋಗಬಾರದು ಎಂದರು.

## ದಾರಿ ಯಾವುದಯ್ಯಾ ಅಣಜಿ ಕೆರೆ ನೀರಿಗೆ?

**ಕೋಡಿ ನೀರು ಹೋಗುವ ದಾರಿ ಸಂಪೂರ್ಣ ಒತ್ತುವರಿ**

ದಾವಣಗೆರೆ, ಜ. 5 – ತಾಲ್ಲೂಕಿನ ಅಣಜಿ ಕೆರೆ ತುಂಬಿದಾಗ ಹಿನ್ನೀರು ಹಾಗೂ ಕೋಡಿಯಿಂದ ಹೊರ ಹೋಗುವ ನೀರುಗಳೆರಡೂ ಜಮೀನುಗಳನ್ನು ಆವರಿಸುತ್ತಿದೆ. ಈ ಸಮಸ್ಯೆ ಮರುಕಳಿಸದಂತೆ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ದಶಕಗಳ ನಂತರ ಕೆರೆ ತುಂಬಿದೆ. ಈ ಸಂದರ್ಭದಲ್ಲಿ ಹಿನ್ನೀರಿನ 125 ಎಕರೆ ಜಮೀನಿನಲ್ಲಿನ ಅಡಿಕೆ ಹಾಗೂ ತೆಂಗು ಮುಳುಗಿತ್ತು. ತಿಂಗಳುಗಳ ಕಾಲ ನೀರಿನಲ್ಲಿದ್ದ ಅಡಿಕೆ ಮರಗಳು ಈಗ ನಾಶವಾಗಿವೆ ಎಂದರು.

ಬೆಳೆಗಷ್ಟೇ ಪರಿಹಾರ ನೀಡದೇ, ಸಂಪೂರ್ಣ ಹೊಲಕ್ಕೆ ಆಗಿರುವ ನಷ್ಟ ಭರಿಸಬೇಕು. ಇಲ್ಲವಾದರೆ ಸರ್ಕಾರವೇ ಜಮೀನು ಖರೀದಿಸಬೇಕು ಎಂದು ರೈತರು ಆಗ್ರಹಿಸಿದ್ದಾರೆ ಎಂದು ಹೇಳಿದರು. ಆದರೆ, ಈ ಜಮೀನಿನಲ್ಲಿ ಕೆರೆಯ ಒತ್ತುವರಿ ಎಷ್ಟು ಎಂಬುದು ಸ್ಪಷ್ಟವಾಗಿಲ್ಲ. ಈ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ. ನಂತರವೇ ಪರಿಹಾರ ಸಾಧ್ಯ ಎಂದವರು ಹೇಳಿದರು.

ಕೋಡಿ ನೀರಿನ ಕಾಲುವೆಯನ್ನು ರೈತರು ಸಂಪೂರ್ಣ ಒತ್ತುವರಿ ಮಾಡಿಕೊಂಡಿದ್ದಾರೆ. ಹೀಗಾಗಿ ಕೋಡಿ ಬಿದ್ದಾಗ ನೀರು ರೈತರ ಜಮೀನುಗಳಿಗೆ ನುಗ್ಗುತ್ತಿದೆ.

ನಕಾಶೆಯ ಅನ್ವಯ ಕಾಲುವೆಯನ್ನು ಮತ್ತೆ ರೂಪಿಸುವಂತೆ ರೈತರು ಒತ್ತಾಯಿಸಿದ್ದಾರೆ. ಈ ಬಗ್ಗೆಯೂ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂದವರು ಹೇಳಿದರು.

## ಕಳೆದ ಚುನಾವಣೆಗಿಂತ ಮತದಾರರ ಸಂಖ್ಯೆ ಇಳಿಕೆ

ಕಳೆದ 2018ರ ಚುನಾವಣೆಗೆ ಹೋಲಿಸಿದರೆ ಜಿಲ್ಲೆಯಲ್ಲಿ ಈ ಬಾರಿ ಮತದಾರರ ಸಂಖ್ಯೆ 51 ಸಾವಿರದಷ್ಟು ಕಡಿಮೆಯಾಗಿದೆ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ಅವರು ಪರಿಷ್ಕರಣೆಗೆ ಮುಂಚೆ ತಿಳಿಸಿದ್ದರು. ಪರಿಷ್ಕರಣೆ ನಂತರ ಮತದಾರರ ಸಂಖ್ಯೆ 17 ಸಾವಿರದಷ್ಟು ಹೆಚ್ಚಾಗಿದೆ. ಹೀಗಾಗಿ ಕಳೆದ ಚುನಾವಣೆಗೆ ಹೋಲಿಸಿದರೆ ಈ ಬಾರಿ ಮತದಾರರ ಸಂಖ್ಯೆಯಲ್ಲಿ 33 ಸಾವಿರದಷ್ಟು ಇಳಿಕೆಯಾದಂತಾಗಿದೆ.

**ದೊಡ್ಡ ಪ್ರಮಾಣದಲ್ಲಿ ಮತದಾರರ ಕಡಿತದ ಬಗ್ಗೆ ದೂರಿಲ್ಲ :** ದೊಡ್ಡ ಪ್ರಮಾಣದಲ್ಲಿ ಮತದಾರರ ಸಂಖ್ಯೆ ಕಡಿತಗೊಳಿಸಿರುವ ಬಗ್ಗೆ ಯಾರೂ ದೂರು ಸಲ್ಲಿಸಿಲ್ಲ ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದ್ದಾರೆ. ದೊಡ್ಡ ಸಂಖ್ಯೆಯಲ್ಲಿ ಮತದಾರರ ಪಟ್ಟಿಯಿಂದ ಹೆಸರು ತೆಗೆದು ಹಾಕಲಾಗಿದೆ ಎಂದು ಹರಿಹರ ಶಾಸಕ ಎಸ್. ರಾಮಪ್ಪ ಆರೋಪಿಸಿದ್ದರು. ಈ ಬಗ್ಗೆ ವಿವರ ತಿಳಿಸುವಂತೆ ಅವರಿಗೆ ನೋಟಿಸ್ ಕಳಿಸಲಾಗಿತ್ತು. ಆದರೆ, ಇದುವರೆಗೂ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ ಎಂದವರು ಹೇಳಿದರು. ಪಾಲಿಕೆ ಸದಸ್ಯ ಎ. ನಾಗರಾಜ್ ಅವರು ಕೆಲ ಮತದಾರರ ಹೆಸರು ಬಿಟ್ಟು ಹೋಗಿರುವ ಬಗ್ಗೆ ದೂರು ನೀಡಿದ್ದಾರೆ. ಈ ಬಗ್ಗೆ ಮನೆ ಮನೆಗೆ ಭೇಟಿ ನೀಡಿ ಪರಿಶೀಲಿಸಲು ಬಿ.ಎಲ್.ಒ.ಗಳಿಗೆ ತಿಳಿಸಲಾಗಿತ್ತು ಎಂದು ಜಿಲ್ಲಾಧಿಕಾರಿ ಹೇಳಿದರು.

# ಮೈಸೂರು, ಹಂಪಿಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ

**ಕೇಂದ್ರದ ಪ್ರವಾಸೋದ್ಯಮ ಯೋಜನೆಗೆ ಸೇರ್ಪಡೆ**

ಬೆಂಗಳೂರು, ಜ. 5 - ಸ್ವದೇಶಿ ದರ್ಶನ ಯೋಜನೆಯಡಿ ಮೈಸೂರು ಹಾಗೂ ಹಂಪಿಯನ್ನು ಸಮಗ್ರ ಪ್ರವಾಸೋದ್ಯಮ ಕೇಂದ್ರಗಳಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಕೇಂದ್ರ ಪ್ರವಾಸೋದ್ಯಮ ಮತ್ತು ಸಂಸ್ಕೃತಿ ಸಚಿವಾಲಯವು ಮೈಸೂರು ಹಾಗೂ ವಿಜಯನಗರ ಜಿಲ್ಲೆಯ ಹಂಪಿಯನ್ನು ಪ್ರವಾಸೋದ್ಯಮ ಸರ್ಕ್ಯೂಟ್ ಕೇಂದ್ರವಾಗಿ ಪರಿಗಣಿಸಿದೆ.

ಸ್ವದೇಶಿ ದರ್ಶನ-2.0 ಯೋಜನೆಯಡಿ ಕೇಂದ್ರ ಸರ್ಕಾರ ರಾಷ್ಟ್ರದ ಕೆಲವು ಪ್ರವಾಸೋದ್ಯಮ ಕೇಂದ್ರಗಳನ್ನು ಅಭಿವೃದ್ಧಿಪಡಿಸಲು 2014-15ರಲ್ಲಿ ಕೈಗೆತ್ತಿಕೊಂಡಿತ್ತು. ರಾಷ್ಟ್ರದ 19 ರಾಜ್ಯಗಳ 36 ಪ್ರವಾಸೋದ್ಯಮ ಕೇಂದ್ರಗಳನ್ನು ಗುರುತಿಸಿ, ಅಭಿವೃದ್ಧಿ ಪಡಿಸಲಾಗುತ್ತಿದೆ.

ಇದರಡಿ ಸ್ಥಳೀಯ ನಿರುದ್ಯೋಗ ಸಮಸ್ಯೆ, ಸ್ಥಳೀಯ ಉತ್ಪನ್ನಗಳ ವ್ಯಾಪಾರ ವಹಿವಾಟಿಗೆ ಉತ್ತೇಜನ ಹಾಗೂ ಗುರುತಿಸಲ್ಪಟ್ಟಿರುವ ಪ್ರವಾಸಿ ಕೇಂದ್ರಗಳನ್ನು ನೂರಾರು ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುವುದು.

ಕೇಂದ್ರದ ಈ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟ್ವೀಟ್ ಮೂಲಕ ಪ್ರಶಂಸಿಸಿದ್ದಾರೆ.

# ಜಾರ್ಖಂಡ್ ಪರಸ್ನಾಥ್ ಬೆಟ್ಟದ ಪ್ರವಾಸೋದ್ಯಮ ಕಾಮಗಾರಿಗೆ ತಡೆ

ನವದೆಹಲಿ, ಜ. 5 – ಜೈನ ಸಮುದಾಯದ ಪ್ರತಿಭಟನೆಯ ನಂತರ ಪರಸ್ನಾಥ್ ಬೆಟ್ಟದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಕ್ರಮಕ್ಕೆ ಕೇಂದ್ರ ಸರ್ಕಾರ ತಡೆ ಹಾಕಿದೆ.

ಕೇಂದ್ರ ಪರಿಸರ ಖಾತೆ ಸಚಿವ ಭೂಪೇಂದ್ರ ಯಾದವ್ ಅವರು ಜೈನ ಸಮುದಾಯದ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದರು. ನಂತರ ಜಾರ್ಖಂಡ್ ಸರ್ಕಾರಕ್ಕೆ ಈ ಬಗ್ಗೆ ಸೂಚನೆ ನೀಡಲಾಗಿದೆ.

ಪರಸ್ನಾಥ್ ದೇವಾಲಯ ಇರುವ ವನ್ಯಧಾಮದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಜಾರ್ಖಂಡ್ ಸರ್ಕಾರಕ್ಕೆ ಕೇಂದ್ರ ಪರಿಸರ ಸಚಿವಾಲಯ ಆಗಸ್ಟ್ 2019ರಲ್ಲಿ ಅನುಮತಿ ನೀಡಿತ್ತು.

ಪರಸ್ನಾಥ್ ಬೆಟ್ಟದ ಬಳಿ ಮದ್ಯ ಹಾಗೂ ಸಸ್ಯಾಹಾರೇತರ ಆಹಾರ ಮಾರಾಟವಾಗದಂತೆ ನಿರ್ಬಂಧಿಸಬೇಕು ಎಂದೂ ಕೇಂದ್ರ ಸರ್ಕಾರ ತಿಳಿಸಿದೆ.

ಈ ನಡುವೆ, ಸಂಥಲ್ ಬುಡಕಟ್ಟು ಸಮುದಾಯದ ಮುಖಂಡರು ಹೇಳಿಕೆ ನೀಡಿದ್ದು, ಪರಸ್ನಾಥ್ ಬೆಟ್ಟ ವಾಸ್ತವಿಕವಾಗಿ 'ಮರಂಗ್ ಬರು' ಆಗಿದೆ. ಇದು ತಮಗೆ ಸೇರಿದ್ದು ಎಂದು ಹೇಳಿದ್ದಾರೆ.

ಬ್ರಿಟಿಷರ ಕಾಲದಿಂದಲೂ ಈ ಬೆಟ್ಟ ತಮ್ಮ ಸಮುದಾಯಕ್ಕೆ ಸೇರಿದ್ದು. 1956ರ ಗೆಜೆಟ್‌ನಲ್ಲೂ ಇದನ್ನು ಮರಂಗ್ ಬರು ಎಂದು ಗುರುತಿಸಲಾಗಿದೆ ಎಂದು ತಿಳಿಸಿದ್ದಾರೆ.

ಈ ಹಿಂದೆ ಬೆಟ್ಟಕ್ಕಾಗಿ ನಡೆಸಿದ ಕಾನೂನು ಹೋರಾಟದಲ್ಲಿ ಜೈನ ಸಮುದಾಯ ಸೋತಿತ್ತು ಎಂದು ಅಂತರ ರಾಷ್ಟ್ರೀಯ ಸಂತಲ್ ಮಂಡಳಿಯ ಕಾರ್ಯಕಾರಿ ಅಧ್ಯಕ್ಷ ನರೇಶ್ ಕುಮಾರ್ ಮುರ್ಮು ಹೇಳಿಕೆ ನೀಡಿದ್ದಾರೆ.

# 'ವೇದ' ಉತ್ತಮ ಸಂದೇಶದ ಚಿತ್ರ: ಶಿವರಾಜ್ ಕುಮಾರ್

**ಡೈಲಾಗ್, ಹಾಡುಗಳ ಮೂಲಕ ಜನರನ್ನು ರಂಜಿಸಿದ ಶಿವಣ್ಣ**



ದಾವಣಗೆರೆ, ಜ.5- ಡಾ.ಶಿವರಾಜ್ ಕುಮಾರ್ ಅವರು ತಮ್ಮ 125ನೇ ಸಿನಿಮಾ 'ವೇದ' ಪ್ರಚಾರಕ್ಕಾಗಿ ಗುರುವಾರ ಪತ್ನಿ ಗೀತಾ ಶಿವರಾಜ್ ಕುಮಾರ್ ಹಾಗೂ ಚಿತ್ರತಂಡ ದೊಂದಿಗೆ ನಗರಕ್ಕೆ ಆಗಮಿಸಿದ್ದರು.

ನಿಟುವಳ್ಳಿಯ ಶ್ರೀ ದುರ್ಗಾಂಬಿಕಾ ದೇವಿಗೆ ಪೂಜೆ ಸಲ್ಲಿಸಿದ ಅವರು, ನಂತರ ತೆರೆದ ವಾಹನದ ಮೂಲಕ ಅಶೋಕ ಚಿತ್ರಮಂದಿರಕ್ಕೆ ತೆರಳಿ, ಪ್ರೇಕ್ಷಕರನ್ನುದ್ದೇಶಿಸಿ ಮಾತನಾಡಿದರು.

'ನಾ ಸುಮ್ನೆ ಬಂದ್ರೆ ಅತಿಥಿ, ಹುಡ್ಕೊಂಡ್ ಬಂದ್ರೆ ನಿಮ್ಗಳ ತಿಥಿ', 'ಟಗರು ಕೋಪ ಬಂದ್ರೆ ಎಗರು' ಡೈಲಾಗ್ ಹೇಳುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು, ಅಷ್ಟೇ ಅಲ್ಲ, 'ಆಡಿಸಿಯೇ ನೋಡು, ಬೀಳಿಸಿಯೇ ನೋಡು...' 'ಎಲ್ಲಿಂದ ಬಂದ್ನಪ್ಪೋ ...' ಹಾಡುಗಳನ್ನು ಹೇಳಿ ಶಿಳ್ಳೆ, ಚಪ್ಪಾಳೆ ಗಿಟ್ಟಿಸಿಕೊಂಡರು.

ನನ್ನ 125ನೇ ಚಿತ್ರ ವೇದದಲ್ಲಿ ಉತ್ತಮ ಸಂದೇಶವಿದೆ. ಮಹಿಳೆಯರಿಗಾಗಿ ಮಾಡಿದ ಚಿತ್ರವಿದು. ಮಹಿಳೆಯರನ್ನು ಕಾಪಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಚಿತ್ರ ಮಹಿಳೆಯರಲ್ಲಿ ಧೈರ್ಯ ತುಂಬಲಿದೆ ಎಂದು ಹೇಳಿದರು.

ಚಿತ್ರಕ್ಕೆ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ಸಿನಿಮಾದ ಸಂದೇಶವನ್ನು ಜನತೆ ಚೆನ್ನಾಗಿ ಸ್ವೀಕರಿಸಿದ್ದಾರೆ, ಅದು ಹೆಮ್ಮೆಯ ವಿಚಾರ. ಕುಟುಂಬ ಸಹಿತ ಕುಳಿತು ನೋಡಬೇಕಾದ ಸಿನಿಮಾ ಇದು ಎಂದು ಹೇಳಿದರು.

ಚಿತ್ರ ನೂರು ದಿನ ಓಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ ಶಿವರಾಜ್ ಕುಮಾರ್, ನೂರನೇ ದಿನದ ಸಂಭ್ರಮಕ್ಕೆ ಮತ್ತೊಮ್ಮೆ ದಾವಣಗೆರೆಗೆ ಬರುತ್ತೇನೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಅಭಿಮಾನಿಗಳು ಬೃಹತ್ ಹಾರ ಹಾಕಿ ಶಿವಣ್ಣ ಅವರನ್ನು ಅಭಿನಂದಿಸಿದರು.

ಚಿತ್ರದ ನಿರ್ಮಾಪಕಿ ಗೀತಾ ಶಿವರಾಜ್ ಕುಮಾರ್, ಶಿವಣ್ಣನ ಮಗಳಾಗಿ ನಟಿಸಿರುವ ಅದಿತಿ ಸಾಗರ್, ಗಾನವಿ ಲಕ್ಷ್ಮಣ್, ಚಿತ್ರಮಂದಿರದ ಲಕ್ಷ್ಮೀಕಾಂತ ರೆಡ್ಡಿ, ವ್ಯವಸ್ಥಾಪಕ ಕರಿಸಿದ್ದಯ್ಯ, ಅಖಿಲ ಕರ್ನಾಟಕ ಡಾ. ರಾಜ್ ಕುಮಾರ್, ಶಿವರಾಜ್ ಕುಮಾರ್, ಪುನೀತ್ ರಾಜ್ ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಯೋಗೀಶ್ ಇತರರು ಉಪಸ್ಥಿತರಿದ್ದರು.


# ನಾಳೆ ರಂಭಾಪುರಿ ಜಗದ್ಗುರುಗಳ 67ನೇ ಜನ್ಮ ದಿನೋತ್ಸವ



ರಂಭಾಪುರಿ ಪೀಠ (ಬಾಳೆಹೊನ್ನೂರು)- ಜ. 5 - ಶ್ರೀ ರಂಭಾಪುರಿ ಜಗದ್ಗುರು ಡಾ. ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದರ 67ನೇ ಜನ್ಮ ದಿನೋತ್ಸವವನ್ನು ತೆಲಂಗಾಣ ರಾಜ್ಯದ ಕೊಲನಪಾಕ ಶ್ರೀ ಸ್ವಯಂಭು ಸೋಮೇಶ್ವರ ಕ್ಷೇತ್ರದಲ್ಲಿ ನಾಡಿದ್ದು ದಿನಾಂಕ 7ರ ಶನಿವಾರ ಆಚರಿಸಲಾಗುವುದು.

ಈ ಪ್ರಯುಕ್ತ ಇಂದಿನಿಂದ ಮೂರು ದಿನ ಶ್ರೀ ರಂಭಾಪುರಿ ಜಗದ್ಗುರುಗಳು ಇಷ್ಟಲಿಂಗ ಮಹಾಪೂಜೆ ನೆರವೇರಿಸುವರು. ಪ್ರತಿದಿನ ಪ್ರಾತ:ಕಾಲದಲ್ಲಿ ಶ್ರೀ ಸೋಮೇಶ್ವರ ಮಹಾಲಿಂಗ ಮತ್ತು ಶ್ರೀ ವೀರಭದ್ರಸ್ವಾಮಿಗೆ ರುದ್ರಾಭಿಷೇಕ ಮಹಾಪೂಜೆ ಹಾಗೂ ಶಕ್ತಿಮಾತೆ ಚಂಡಿಕಾಂಬಾ ದೇವಿಗೆ ಕುಂಕುಮಾರ್ಚನೆ ಜರುಗುವುದು ಎಂದು ಶ್ರೀ ಕೊಲನುಪಾಕ ಸೋಮೇಶ್ವರ ಜಗದ್ಗುರು ರೇಣುಕಾಚಾರ್ಯ ಡೆವಲಪ್‌ಮೆಂಟ್ ಅಂಡ್ ಚಾರಿಟೇಬಲ್ ಟ್ರಸ್ಟ್‌ನವರು ತಿಳಿಸಿದ್ದಾರೆ.

# ಶಾಲೆಗಳಲ್ಲಿ ಸಾವರ್ಕರ್ ಅವರ ಭಾವಚಿತ್ರ ಅಳವಡಿಸಿದರೆ ನಾವು ಬೇಡ ಅನ್ನುವುದಿಲ್ಲ



ದಾವಣಗೆರೆ, ಜ.5- ಶಾಲೆಗಳಲ್ಲಿ ಸಾವರ್ಕರ್ ಅವರ ಭಾವಚಿತ್ರವನ್ನು ಶಿಕ್ಷಕರು ಅಳವಡಿಸಿದರೆ ನಾವು ಬೇಡ ಅನ್ನುವುದಿಲ್ಲ. ಇಲಾಖೆಯಿಂದಲೂ ಯಾವುದೇ ಆದೇಶ ಅಳವಡಿಸಬೇಕೆಂಬ ಆದೇಶವೂ ಕೂಡ ಇಲ್ಲ. ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರ ಅಳವಡಿಸುವುದು ಅವರಿಗೆ ಬಿಟ್ಟ ವಿಚಾರ ಎಂದು ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಹೇಳಿದರು.

ನಗರದಲ್ಲಿ ಇಂದು ಸಂಜೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವೀರ ಸಾವರ್ಕರ್ ಅವರ ಫೋಟೋ ಭಾವಚಿತ್ರಗಳನ್ನು ಶಾಲೆಗಳಲ್ಲಿ ಹಾಕೋ ವಿಚಾರವಾಗಿ ಪ್ರತಿಕ್ರಿಸಿದ ಅವರು, ಇತಿಹಾಸದಲ್ಲೂ ಮಕ್ಕಳಿಗೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರ, ದೇಶಭಕ್ತರ ಬಗ್ಗೆ ಹೆಚ್ಚಾಗಿ ತಿಳಿಸುತ್ತಿಲ್ಲ. ಶಾಲಾ ಕೊಠಡಿಯಲ್ಲಿ ಫೋಟೋಗಳನ್ನು ಹಾಕಿದಾಗ ಮತ್ತು ಹುಟ್ಟುಹಬ್ಬದ ಸಂದರ್ಭದಲ್ಲಿ ಹೋರಾಟಗಾರರ ಬಗ್ಗೆ ತಿಳುವಳಿಕೆ ಮೂಡಿಸುವುದರಿಂದ ಮಕ್ಕಳಿಗೆ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ ಪ್ರಭಾವ ಬೀರುವುದರ ಜೊತೆಗೆ ಮಕ್ಕಳಲ್ಲಿ ತ್ಯಾಗದ ಭಾವನೆ ಬರಲಿದೆ ಎಂದರು. ಅಮಿತ್ ಷಾ, ನಡ್ಡಾ ಮತ್ತು ನರೇಂದ್ರ ಮೋದಿ ಅವರು ಗಳು ಅನೇಕ ಬಾರಿ ಮಠಗಳಿಗೆ ಭೇಟಿ ಮಾಡಿದ್ದಾರೆ. ಮಠದ ಭೇಟಿ ನೀಡುತ್ತಿರುವುದು ಚುನಾವಣೆಗಾಗಿ ಅಲ್ಲ. ಮಠಗಳು ನಮ್ಮ ದೇಶದ ಸಾಂಸ್ಕೃತಿಕ ಕೇಂದ್ರಗಳು. ಸಂಸ್ಕೃತಿ ಎತ್ತಿ ಹಿಡಿದಂತವು ಎಂದು ಹೇಳಿದರು.

ಬಿಜೆಪಿ ಸರ್ಕಾರ ಇದ್ದಾಗ ಸಾವರ್ಕರ್ ಭಾವಚಿತ್ರ ಹಾಗೂ ಕಾಂಗ್ರೆಸ್ ಸರ್ಕಾರ ಇದ್ದಾಗ ಟಿಪ್ಪು ಸುಲ್ತಾನ್ ಭಾವಚಿತ್ರ ಹಾಕುವ ಮೂಲಕ ರಾಜಕೀಯ ಮಾಡಲಾಗುತ್ತಿದೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಟಿಪ್ಪು ನಮ್ಮ ಪ್ರಕಾರ ಸ್ವಾತಂತ್ರ್ಯ ಹೋರಾಟಗಾರ ಅಲ್ಲ. ತನ್ನ ಸಾಮ್ರಾಜ್ಯ ಉಳಿಸಿಕೊಳ್ಳಲು ಹೋರಾಟ ಮಾಡಿ, ಅನೇಕ ಹಿಂದೂಗಳನ್ನು ಹತ್ಯೆ ಮಾಡಿದ್ದಾನೆ. ಕಾಂಗ್ರೆಸ್ ನವರು ನಾವು ಟಿಪ್ಪು ಫೋಟೋ ಹಾಕಿಕೊಳ್ತೀವಿ ಅಂತ ಹೇಳಲಿ, ಬೇಕಿದ್ದರೆ ಹಾಕಲಿ ಎಂದು ಹೇಳಿದರು.







JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte